ವಿಶ್ವವಾಣಿ
ವಿಶ್ವಾಸವೇ ವಿಶ್ವ

## ನಾಡಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವ

ನಾಡಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವ ಸಮಾರಂಭವನ್ನು ಗುರುವಾರ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಬೆಳಗ್ಗೆ 10.00 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಶ್ರೀ ಡಾ.ನಂಜಾವಧೂತ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

### ಬಿರ್ಲಾ ಪರ 293 ಸಂಸದರ ಧ್ವನಿಮತ | ಕೆ.ಸುರೇಶ್‌ಗೆ 234 ಸಂಸದರ ಬೆಂಬಲ

# ಸ್ಪೀಕರ್ ಓಂ ಬಿರ್ಲಾ ಪುನರಾಯ್ಕೆ

**ದೆಹಲಿ:** 18ನೇ ಲೋಕಸಭೆಯ ಅಧ್ಯಕ್ಷರಾಗಿ ಬಿಜೆಪಿ ಹಿರಿಯ ಸಂಸದ ಓಂ ಬಿರ್ಲಾ ಪುನರಾಯ್ಕೆಯಾಗಿದ್ದಾರೆ. ಲೋಕಸಭೆಯಲ್ಲಿ ಬುಧವಾರ ಧ್ವನಿ ಮತ ಮೂಲಕ ನೂತನ ಸ್ಪೀಕರ್ ಆಯ್ಕೆ ನಡೆದಿದೆ.

ಸ್ಪೀಕರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡುವ ವಿಷಯದಲ್ಲಿ ಎನ್‌ಡಿಎ ಹಾಗೂ ಇಂಡಿ ಮೈತ್ರಿಕೂಟಗಳು ಆರಂಭದಲ್ಲಿ ಸಹಮತಕ್ಕೆ ಬಂದಿದ್ದವು. ಸಂಪ್ರದಾಯದ ಪ್ರಕಾರ ಉಪಸಭಾಧ್ಯಕ್ಷ ಸ್ಥಾನವನ್ನು ಪ್ರತಿಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ಕಾಂಗ್ರೆಸ್ ನಾಯಕರು ಪಟ್ಟು ಹಿಡಿದಿದ್ದರು. ಈಗಲೇ ಭರವಸೆ ನೀಡಲಾಗದು ಎಂದು ಬಿಜೆಪಿ ನಾಯಕರು ಹೇಳಿದ್ದರಿಂದ ಮಾತುಕತೆ ಮುರಿದುಬಿತ್ತು. ಎನ್‌ಡಿಎ ಮೈತ್ರಿಕೂಟದಿಂದ ಓಂ ಬಿರ್ಲಾ ಹಾಗೂ ಇಂಡಿ ಬಣದಿಂದ ಕೋಡಿಕುನ್ನಿಲ್ ಸುರೇಶ್ ಅವರು ಸ್ಪೀಕರ್ ಹುದ್ದೆಗೆ ನಾಮಪತ್ರ ಸಲ್ಲಿಸಿದ್ದರು. ಲೋಕಸಭೆಯಲ್ಲಿ ಎನ್‌ಡಿಎ ಬಹುಮತ ಹೊಂದಿದ್ದು, ಓಂ ಬಿರ್ಲಾ ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಭಾರತದ ಲೋಕಸಭೆಯ ಇತಿಹಾಸದಲ್ಲಿ 1952, 1967 ಹಾಗೂ 1976ರ ಬಳಿಕ ಇದೇ ಮೊದಲ ಬಾರಿಗೆ ಚುನಾವಣೆ ಮೂಲಕ ಸ್ಪೀಕರ್ ಆಯ್ಕೆ ನಡೆದಿದೆ.

543 ಸದಸ್ಯರ ಲೋಕಸಭೆಯಲ್ಲಿ ಓಂ ಬಿರ್ಲಾ ಪರ 293 ಸಂಸದರು ಧ್ವನಿ ಮತ ನೀಡಿದ್ದು, ಕೆ.ಸುರೇಶ್ ಪರ 234 ಸಂಸದರು ಮತ ನೀಡಿದ್ದಾರೆ.

→ 4

> ನೀವು (ಓಂ ಬಿರ್ಲಾ) ಜನರ ಧ್ವನಿಯ ಅಂತಿಮ ತೀರ್ಪುಗಾರರು. ಸರಕಾರಕ್ಕೆ ರಾಜಕೀಯ ಬಲ ಇರಬಹುದು. ಆದರೆ ಪ್ರತಿಪಕ್ಷಗಳು ಜನರ ಧ್ವನಿಯನ್ನು ಪ್ರತಿನಿಧಿಸುತ್ತವೆ. ನಿಮ್ಮ ಕರ್ತವ್ಯಕ್ಕೆ ವಿಪಕ್ಷಗಳು ನೆರವಾಗಲು ಬಯಸುತ್ತವೆ. ಸದನದಲ್ಲಿ ಮಾತನಾಡಲು ನೀವು ನಮಗೆ ಅವಕಾಶ ನೀಡುತ್ತೀರಿ ಎಂಬ ನಂಬಿಕೆಯಿದೆ.
> **- ರಾಹುಲ್ ಗಾಂಧಿ**
> ಪ್ರತಿಪಕ್ಷ ನಾಯಕ

ಸಭಾಪತಿ ಓಂ ಬಿರ್ಲಾಗೆ ಅಭಿನಂದಿಸುವ ಮುನ್ನ ಪ್ರಧಾನಿ ಮೋದಿ ಹಾಗೂ ರಾಹುಲ್ ಗಾಂಧಿ ಹಸ್ತಲಾಘವ ಮಾಡಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

> ಮುಂದಿನ ಐದು ವರ್ಷಗಳ ಕಾಲ ನಿಮ್ಮ (ಓಂ ಬಿರ್ಲಾ) ಮಾರ್ಗದರ್ಶನವನ್ನು ಎದುರು ನೋಡುತ್ತಿದ್ದೇನೆ. ನಿಮ್ಮ ನಗು ಮುಖ ಇಡೀ ಸದನವನ್ನು ಸಂತೋಷವಾಗಿರಿಸುತ್ತದೆ. **- ಪ್ರಧಾನಿ ಮೋದಿ**

### ಓಂ ಬಿರ್ಲಾ ಪರಿಚಯ

ಓಂ ಬಿರ್ಲಾ ಅವರು ರಾಜಸ್ಥಾನದ ಕೋಟಾ ಲೋಕಸಭಾ ಕ್ಷೇತ್ರದಿಂದ 3ನೇ ಅವಧಿಗೆ ಆಯ್ಕೆಯಾಗಿದ್ದಾರೆ. ಈ ಸಲ ಅವರು ಕಾಂಗ್ರೆಸ್ ಅಭ್ಯರ್ಥಿಯನ್ನು 41 ಸಾವಿರ ಮತಗಳ ಅಂತರದಿಂದ ಸೋಲಿಸಿದ್ದರು. 2019ರಲ್ಲಿ ಅಚ್ಚರಿ ಅಭ್ಯರ್ಥಿಯಾಗಿ ಲೋಕಸಭಾಧ್ಯಕ್ಷ ಸ್ಥಾನಕ್ಕೆ ಓಂ ಬಿರ್ಲಾ ಅವರನ್ನು ಬಿಜೆಪಿ ಆಯ್ಕೆ ಮಾಡಿತ್ತು. ಆಗ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು.

- 1952, 1967, 1976ರ ಬಳಿಕ ಚುನಾವಣೆ ಮೂಲಕ ಸ್ಪೀಕರ್ ಆಯ್ಕೆ
- ಓಂ ಬಿರ್ಲಾ ಲೋಕಸಭೆಗೆ ಎರಡನೇ ಬಾರಿಗೆ ಸಭಾಧ್ಯಕ್ಷರಾಗಿ ಆಯ್ಕೆ
- ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಶುಭಾಶಯ

### ತುರ್ತು ಪರಿಸ್ಥಿತಿಗೆ ಖಂಡನಾ ನಿರ್ಣಯ

ಲೋಕಸಭೆ ಸ್ಪೀಕರ್ ಆಗಿ ಸತತ ಎರಡನೇ ಅವಧಿಗೆ ಆಯ್ಕೆಯಾದ ಬಿರ್ಲಾ ಅವರು, ತುರ್ತು ಪರಿಸ್ಥಿತಿಯನ್ನು ಖಂಡಿಸುವ ನಿರ್ಣಯವನ್ನು ಬುಧವಾರ ಸದನದಲ್ಲಿ ಅಂಗೀಕರಿಸಿದರು. ಹಾಗೆಯೇ, ಆಗಿನ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ಸರಕಾರವನ್ನು ಟೀಕಿಸಿದರು. ಕಾಂಗ್ರೆಸ್ ಹಾಗೂ ಇತರ ಪ್ರತಿಪಕ್ಷಗಳ ಸಂಸದರ ಪ್ರತಿಭಟನೆಯ ನಡುವೆಯೂ ಆಡಳಿತ ಪಕ್ಷದ ಸಂಸದರು ಕೆಲಹೊತ್ತು ಮೌನಾಚರಿಸಿದರು. ದಿವಂಗತ ಇಂದಿರಾ ಗಾಂಧಿ ಅವರು ಪ್ರಧಾನಿ ಯಾಗಿದ್ದಾಗ 1975ರ ಜೂನ್ 25ರಂದು ದೇಶಾದ್ಯಂತ ತುರ್ತು ಪರಿಸ್ಥಿತಿಯನ್ನು ಹೇರಿದ್ದರು.

# ಇಂದು ಸಿಎಂ ದೆಹಲಿಗೆ

### 3 ದಿನ ದೆಹಲಿಯಲ್ಲಿ ಉಳಿಯಲಿರುವ ಸಿದ್ದರಾಮಯ್ಯ ನೂತನ ಸಂಸದರು, ಕೇಂದ್ರ ಸಚಿವರ ಭೇಟಿ, ಚರ್ಚೆ

**ಬೆಂಗಳೂರು:** ಮೂರನೇ ಬಾರಿಗೆ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಲಿದ್ದು, ಕೇಂದ್ರದಿಂದ ರಾಜ್ಯಕ್ಕೆ ಆಗಬೇಕಿರುವ ವಿವಿಧ ಕಾಮಗಾರಿಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಗುರುವಾರ ಬೆಳಗ್ಗೆ ಕೆಂಪೇಗೌಡ ಜಯಂತಿಯಲ್ಲಿ ಭಾಗವಹಿಸಿದ ಬಳಿಕ ದೆಹಲಿಗೆ ತೆರಳಲಿರುವ ಸಿಎಂ, ಗುರುವಾರ ಸಂಜೆ ರಾಜ್ಯದಿಂದ ಆಯ್ಕೆಯಾಗಿರುವ ಸಂಸದರೊಂದಿಗಿನ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ವೇಳೆ ರಾಜ್ಯದ ಪರವಾಗಿ ಸಂಸತ್‌ನಲ್ಲಿ ಸಂಸದರು ಧ್ವನಿಯಾಗಬೇಕು ಎಂದು ಮನವಿ ಮಾಡಲಿದ್ದಾರೆ.

ಇದರೊಂದಿಗೆ ಕೇಂದ್ರ ಸರಕಾರದ ವಿವಿಧ ಇಲಾಖೆಗಳಿಂದ ರಾಜ್ಯಕ್ಕೆ ಬರಬೇಕಿರುವ ಅನುದಾನ, ಕಾಮಗಾರಿಯ ಅನುಮೋದನೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಂಸತ್‌ನಲ್ಲಿ ಧ್ವನಿ ಎತ್ತುವಂತೆ ಮನವಿ ಮಾಡಲಿದ್ದಾರೆ ಎಂದು ತಿಳಿದುಬಂದಿದೆ. ಈ ಸಭೆಗೆ ಕೇವಲ ಕಾಂಗ್ರೆಸ್ ಸಂಸದರು ಮಾತ್ರವಲ್ಲದೇ, ಬಿಜೆಪಿ ಹಾಗೂ ಜೆಡಿಎಸ್‌ನಿಂದ ಆಯ್ಕೆಯಾಗಿರುವ ಸಂಸದರಿಗೂ ಆಹ್ವಾನ ನೀಡಲಾಗಿದೆ.

- ಸಿಎಂ ಸಿದ್ದರಾಮಯ್ಯ ಸಭೆಗೆ ಬಿಜೆಪಿ, ಜೆಡಿಎಸ್ ಸಂಸದರಿಗೂ ಆಹ್ವಾನ
- ಕೇಂದ್ರದಿಂದ ರಾಜ್ಯಕ್ಕೆ ಆಗಬೇಕಿರುವ ವಿವಿಧ ಕಾಮಗಾರಿಗಳ ಬಗ್ಗೆ ಚರ್ಚೆ
- ಸಚಿವೆ ನಿರ್ಮಲಾ ಸೀತಾರಾಮನ್‌ರನ್ನು ಭೇಟಿಯಾಗುವ ಸಾಧ್ಯತೆ
- ರಾಜ್ಯದ ಬಾಕಿ ಅನುದಾನ ಶೀಘ್ರವೇ ಪಾವತಿಸುವಂತೆ ಮನವಿ ಸಾಧ್ಯತೆ

### ರಾಹುಲ್ ಗಾಂಧಿ ಭೇಟಿ?

ರಾಹುಲ್ ಗಾಂಧಿ ಅವರು ಪ್ರತಿಪಕ್ಷ ನಾಯಕನಾಗಿರುವುದರಿಂದ, ಅವರನ್ನು ಭೇಟಿಯಾಗಿ ಶುಭಾಶಯ ತಿಳಿಸುವ ಸಾಧ್ಯತೆಯಿದೆ. ಇದರೊಂದಿಗೆ ಮಲ್ಲಿಕಾರ್ಜುನ ಖರ್ಗೆ, ರಂದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾಗಿ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ.

ಶುಕ್ರವಾರ ಇಡೀ ದಿನ ವಿವಿಧ ಸಚಿವರನ್ನು ಭೇಟಿಯಾಗುವ ಸಾಧ್ಯತೆಯಿದೆ. ನೂತನವಾಗಿ ಆಯ್ಕೆಯಾಗಿರುವ ಕೇಂದ್ರ ಸಚಿವರನ್ನು ಭೇಟಿಯಾಗಿ, ರಾಜ್ಯದ ಕಾಮಗಾರಿಗಳಿಗೆ ಸೂಕ್ತ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಲಿದ್ದಾರೆ.

→ 4

## ನಟ ದರ್ಶನ್ ಪ್ರಕರಣ ಐಟಿಗೆ ಪೊಲೀಸ್ ಪತ್ರ

**ಬೆಂಗಳೂರು:** ದರ್ಶನ್‌ಗೆ ಸೇರಿದೆ ಎನ್ನಲಾದ 70 ಲಕ್ಷ ರು. ನಗದನ್ನು ಜಪ್ತಿ ಮಾಡಿರುವ ಪೊಲೀಸರು ಇದೀಗ ಈ ಹಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಆದಾಯ ತೆರಿಗೆ ಇಲಾಖೆಗೆ ಪತ್ರ ಬರೆದಿದ್ದಾರೆ. ಒಬ್ಬ ವ್ಯಕ್ತಿ 10 ಲಕ್ಷ ರು.ಗಿಂತ ಹೆಚ್ಚು ನಗದನ್ನು ಇಟ್ಟುಕೊಳ್ಳುವಂತಿಲ್ಲ. 10 ಲಕ್ಷಕ್ಕಿಂತ ಹೆಚ್ಚು ಹಣ ಇಟ್ಟುಕೊಂಡರೆ ಅದಕ್ಕೆ ಸೂಕ್ತ ಪುರಾವೆ ಒದಗಿಸಬೇಕು.

## ಗೋಡೆ ಕುಸಿದು ಒಂದೇ ಕುಟುಂಬದ ನಾಲ್ವರು ಸಾವು

**ಉಳ್ಳಾಲ:** ಭಾರಿ ಮಳೆಗೆ ತಾಲೂಕಿನ ಮುನ್ನೂರು ಗ್ರಾಮದ ಕುತ್ತಾರು ಮದನಿ ನಗರ ಎಂಬಲ್ಲಿ ಪಕ್ಕದ ಮನೆಯ ಗೋಡೆ, ಮನೆಯೊಂದರ ಮೇಲೆ ಕುಸಿದು ನಾಲ್ವರು ಮೃತಪಟ್ಟಿದ್ದಾರೆ. ಯಾಸಿರ್ (45),ಅವರ ಪತ್ನಿ ಮರಿಯಮ್ಮ(40) ಮಕ್ಕಳಾದ ರಿಯಾನ (11)ಮತ್ತು ರಿಫಾನ (17) ಮೃತರು ಎಂದು ಗೊತ್ತಾಗಿದೆ.

## ತವರು ನೆಲಕ್ಕೆ ಬಂದಿಳಿದ ಜೂಲಿಯನ್ ಅಸಾಂಜೆ

**ಕ್ಯಾನ್ಬೆರಾ:** ಅಮೆರಿಕದ ಸೇನಾ ರಹಸ್ಯ ಮಾಹಿತಿಗಳನ್ನು ಅಕ್ರಮವಾಗಿ ಪಡೆದು ಪ್ರಕಟಿಸಿದ ಆರೋಪದ ಪ್ರಕರಣದಲ್ಲಿ ಬಂಧಿತರಾಗಿದ್ದ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸಾಂಜೆ ಅವರು ಬಿಡುಗಡೆಯಾಗಿದ್ದಾರೆ. ದಶಕದಿಂದ ಅವರು ಎದುರಿಸುತ್ತಿದ್ದ ಪ್ರಕರಣ ಅಂತ್ಯ ಕಂಡಿದೆ. ಬುಧವಾರ ತಮ್ಮ ತಾಯ್ನಾಡು ಆಸ್ಟ್ರೇಲಿಯಾಗೆ ಮರಳಿದ್ದಾರೆ.

## ಸಲಿಂಗ ದೌರ್ಜನ್ಯ ಸೂರಜ್ ಆಪ್ತ ದೂರು

**ಹಾಸನ:** ಸೂರಜ್ ರೇವಣ್ಣ ವಿರುದ್ಧ ಹೊಳೆನರಸೀಪುರ ಠಾಣೆಯಲ್ಲಿ ಆಪ್ತ ಶಿವಕುಮಾರ್ ಮತ್ತೊಂದು ಸಲಿಂಗ ದೌರ್ಜನ್ಯದ ಪ್ರಕರಣ ದಾಖಲಿಸಿದ್ದಾರೆ. ಇದೇ ವೇಳೆ ಶ್ರೀರಾಮ್ ಫೈನಾನ್ಸ್‌ನಲ್ಲಿ ಉದ್ಯೋಗದಲ್ಲಿದ್ದ ಶಿವಕುಮಾರ, ಸಂಸ್ಥೆಗೆ ಕಟ್ಟಲು ಗ್ರಾಹಕರು ನೀಡಿದ್ದ ಸುಮಾರು 3 ಲಕ್ಷ ಹಣ ದುರ್ಬಳಕೆ ಮಾಡಿಕೊಂಡಿದ್ದಾನೆ ಎಂದು ದೂರು ದಾಖಲಾಗಿದೆ.

## ಸರೋವರ ಶ್ರೀನಿವಾಸ್‌ಗೆ ಸಂಪುಟ ದರ್ಜೆ

**ಬೆಂಗಳೂರು:** ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಎಂ. ಶ್ರೀನಿವಾಸ್ (ಸರೋವರ ಶ್ರೀನಿವಾಸ್) ಅವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, ಎಂ. ಶ್ರೀನಿವಾಸ್ ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನದೊಂದಿಗೆ ಸಚಿವ ಸಂಪುಟ ದರ್ಜೆಯ ಸಚಿವರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ನೀಡಿ ಆದೇಶ ಹೊರಡಿಸಬೇಕು ಎಂದು ಸೂಚನೆ ನೀಡಿದ್ದಾರೆ. ಈ ಹಿಂದೆಯೂ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದ ವೇಳೆ ಶ್ರೀನಿವಾಸ್ ಅವರು ರಾಜ್ಯ ಪ್ರವಾಸೋದ್ಯಮದಲ್ಲಿ ಕ್ರಾಂತಿಕಾರಕ ತೀರ್ಮಾನಗಳನ್ನು ಕೈಗೊಂಡಿದ್ದರು.

ಸಂಪಾದಕೀಯ ಪುಟಗಳಲ್ಲಿ...

ಎಂದೆಂದೂ ಬದಲಾಗದವರೆಂದರೆ ಇವರು ಮಾತ್ರ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಮೂರು ಸರ್ವಾಧಿಕಾರಿಗಳ ನಡುವಿನ ದಿಢೀರ್ ಸ್ನೇಹದ ಸಸ್ಪೆನ್ಸ್
ಸಂಗತ
ಡಾ.ವಿಜಯ್ ದರಡಾ
ಸಂ.ಗಮ | 7

### ಸ್ಯಾಮ್ ಮರುನೇಮಕ

**ದೆಹಲಿ:** ಲೋಕಸಭಾ ಚುನಾವಣೆ ಸಂದರ್ಭದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದರು ಎಂಬ ಆರೋಪ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ್ದ ಸ್ಯಾಮ್ ಪಿತ್ರೊಡಾ ಅವರನ್ನು ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಹುದ್ದೆಗೆ ಮರು ನೇಮಕ ಮಾಡಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಆದೇಶಿಸಿದ್ದಾರೆ.

### ದಾರಿದೀಪೋಕ್ತಿ

ಕೆಲವು ಸಲ ಬದುಕು ಅನಿರೀಕ್ಷಿತವಾಗಿ ತಪ್ಪು ತಿರುವು ಪಡೆಯಿತು ಅಂದುಕೊಳ್ಳುತ್ತೇವೆ. ಆದರೆ ಅದರ ದಿಕ್ಕು ಸರಿಯಾಗಿದೆ ಎಂಬುದನ್ನು ಗಮನಿಸಿರುವುದಿಲ್ಲ. ಎಲ್ಲಿ ತನಕ ದಿಕ್ಕು ಸರಿಯಾಗಿದೆಯೋ ಗುರಿ ಸೇರುವ ಬಗ್ಗೆ ಸಂದೇಹ ಬೇಡ.

### ವಕ್ರತುಂಡೋಕ್ತಿ

ಕೆಲವರನ್ನು ಬಣ್ಣಿಸಿದರೆ ಬೇಸರಿಸಿಕೊಳ್ಳುತ್ತಾರೆ. ಕಾರಣ ತಮ್ಮ ಕುರಿತು ಇದ್ದ ಹಾಗೆ ಹೇಳುವುದನ್ನು ಇಷ್ಟಪಡುವುದಿಲ್ಲ.

### ಫನ್‌ತರಂಗ

- ರಘುಪತಿ ಶೃಂಗೇರಿ -

ಆಡಳಿತ ಪಕ್ಷದ ಕಚೇರಿಯಲ್ಲಿ ಸಾಹಿತಿಗಳ ಸಭೆ






ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಸರ್ವಶ್ರೇಷ್ಠ ದಾರ್ಶನಿಕ - ಅಪ್ರತಿಮ ಆಡಳಿತಗಾರ - ಬೆಂಗಳೂರು ಮಹಾನಗರ ನಿರ್ಮಾತೃ

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ನಾಡಪ್ರಭು
ಶ್ರೀ ಕೆಂಪೇಗೌಡರ
515ನೇ ಜಯಂತ್ಯುತ್ಸವ ಸಮಾರಂಭ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ದಿನಾಂಕ: 27 ಜೂನ್, 2024 ಗುರುವಾರ, ಬೆಳಗ್ಗೆ 10.00 ಕ್ಕೆ | ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಂಗಳೂರು.

ದಿವ್ಯ ಸಾನಿಧ್ಯ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಡಾ|| ನಂಜಾವಧೂತ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ ಪಟ್ಟನಾಯಕನಹಳ್ಳಿ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿಯವರು
ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಮೈಸೂರು ರಸ್ತೆ, ಬೆಂಗಳೂರು

ವಿಶೇಷ ಆಹ್ವಾನಿತರು
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ
ಕುಮಾರಿ ಶೋಭಾ ಕರಂದ್ಲಾಜೆ
ಮಾನ್ಯ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ
ಶ್ರೀ ವಿ. ಸೋಮಣ್ಣ
ಮಾನ್ಯ ಜಲಶಕ್ತಿ ಹಾಗೂ ರೈಲ್ವೇ ರಾಜ್ಯ ಸಚಿವರು ಭಾರತ ಸರ್ಕಾರ
ಶ್ರೀ ಬಸವರಾಜ್ ಎಸ್. ಹೊರಟ್ಟಿ
ಮಾನ್ಯ ಸಭಾಪತಿಗಳು ಕರ್ನಾಟಕ ವಿಧಾನ ಪರಿಷತ್
ಶ್ರೀ ಯು.ಟಿ. ಖಾದರ್
ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆ

ಗೌರವ ಉಪಸ್ಥಿತಿ
ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು, ನಾ.ಕೆಂ.ಪಾ.ತಾ.ಅ.ಪ್ರಾ.
ಶ್ರೀ ಕೃಷ್ಣ ಭೈರೇಗೌಡ
ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ ಮತ್ತು ಅಧ್ಯಕ್ಷರು, ನಾ.ಕೆಂ.ಪಾ.ತಾ.ಅ.ಪ್ರಾ.
ಶ್ರೀ ಶಿವರಾಜ್ ಎಸ್. ತಂಗಡಗಿ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಪದನಿಮಿತ್ತ ಸದಸ್ಯರು, ನಾ.ಕೆಂ.ಪಾ.ತಾ.ಅ.ಪ್ರಾ.

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು
ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಈ ಸಮಾರಂಭದಲ್ಲಿ ಮಾನ್ಯ ಸಚಿವರುಗಳು, ಮಾನ್ಯ ಶಾಸಕರುಗಳು (ವಿಧಾನಸಭೆ / ವಿಧಾನ ಪರಿಷತ್), ನಿಗಮ ಮಂಡಳಿಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರುವರು.

ತಮಗೆ ಆದರದ ಸ್ವಾಗತ

ಶ್ರೀ ಉಮಾಶಂಕರ್ ಎಸ್.ಆರ್. ಭಾಆಸೇ
ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಹಾಗೂ ಒಳಾಡಳಿತ ಇಲಾಖೆ ಮತ್ತು ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ ತುಷಾರ್ ಗಿರಿ ನಾಥ್, ಭಾಆಸೇ
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾಆಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ

ಡಾ. ಅಜಯ್ ನಾಗಭೂಷಣ್. ಎಂ.ಎಸ್. ಭಾಆಸೇ
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ಪೂರ್ಣಿಮಾ. ಪಿ.ವಿ. ಕಆಸೇ
ಆಯುಕ್ತರು
ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ

ಡಾ. ಧರಣೀದೇವಿ ಮಾಲಗತ್ತಿ, ಭಾಪೊಸೇ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

# ಜಾಮೀನು ಅರ್ಜಿ ವಜಾ: ಪ್ರಜ್ವಲ್‌ಗೆ ಜೈಲೇ ಗತಿ

**ಬೆಂಗಳೂರು:** ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ವಜಾ ಆಗಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ

ಹಾಗೂ ಅತ್ಯಾಚಾರ ಆರೋಪ ಪ್ರಕರಣ ದಾಖಲಾಗಿತ್ತು. ಹೊಳೆನರಸೀಪುರ ಟೌನ್ ಠಾಣೆ ಪ್ರಕರಣ ಸಂಬಂಧ ಜಾಮೀನು ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಬುಧವಾರ ವಿಚಾರಣೆ ನಡೆಸಿದ 82 ಸೆಷನ್ಸ್ ನ್ಯಾಯಾಲಯವು ಜಾಮೀನು ಅರ್ಜಿ ವಜಾಗೊಳಿಸಿ ಆದೇಶ ಹೊರಡಿಸಿದೆ. ಈ ಪ್ರಕರಣದಲ್ಲಿ ಮಾಜಿ ಸಂಸದ ಎಸ್‌ಐಟಿ ಬಂಧನದಲ್ಲಿದ್ದಾರೆ. ಪ್ರಜ್ವಲ್ ರೇವಣ್ಣ ವಿರುದ್ಧ ಮೂರು ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಹೊಳೆನರಸೀಪುರ, ಸಿಐಡಿಯಲ್ಲಿ ಎರಡು ಪ್ರಕರಣ ದಾಖಲಾಗಿತ್ತು. ಮೊದಲ ಪ್ರಕರಣದಲ್ಲಿ ಪ್ರಜ್ವಲ್ ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಂಡಿದೆ. ಎಚ್.ಡಿ.ರೇವಣ್ಣ ಹಾಗೂ ಪ್ರಜ್ವಲ್ ರೇವಣ್ಣ ಇಬ್ಬರೂ ಆರೋಪಿಗಳಾಗಿರುವ ಪ್ರಕರಣವಿದ್ದು, ಈಗಾಗಲೇ ಎಚ್.ಡಿ.ರೇವಣ್ಣ ಜಾಮೀನು ಪಡೆದುಕೊಂಡಿದ್ದಾರೆ. ಮೊದಲು ಲೈಂಗಿಕ ದೌರ್ಜನ್ಯ ಆರೋಪದಡಿ ಪ್ರಕರಣ ದಾಖಲಾಗಿತ್ತು.

ಇತ್ತೀಚೆಗೆ ಬೆಂಗಳೂರಿನ ಬನಶಂಕರಿಯ ಶ್ರೀನಿವಾಸನಗರದಲ್ಲಿ ಫೆಡರಲ್ ಬ್ಯಾಂಕ್ ಶಾಖೆಯನ್ನು ಕರ್ನಾಟಕ ಗೃಹ ಮಂಡಳಿಯ ಮುಖ್ಯ ಹಣಕಾಸು ಅಧಿಕಾರಿ ಟಿ.ಕೆ.ಗೋಪಾಲಕೃಷ್ಣ ಉದ್ಘಾಟಿಸಿದರು. ಈ ವೇಳೆ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಗಾಂಜಾ ಸಾಗಿಸುತ್ತಿದ್ದ ಆರೋಪಿ ಬಂಧನ

**ಬೆಂಗಳೂರು:** ಮಾದಕ ವಸ್ತುಗಳ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿರುವ ರಾಜ್ಯ ರೈಲ್ವೆ ಪೊಲೀಸರು ತ್ರಿಪುರದಿಂದ ಬೆಂಗಳೂರಿಗೆ ಕಿಟ್ ಬ್ಯಾಗ್‌ಗಳಲ್ಲಿ ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ತ್ರಿಪುರದ ಪಾಂಡಬ್ಬುರ ಮೂಲದ ದೀಪನ್ ದಾಸ್ (20) ಬಂಧಿತ ಆರೋಪಿಯಾಗಿದ್ದು, ಆತನಿಂದ 32.88 ಕೆ.ಜಿ.ಗಾಂಜಾ ಜಪ್ತಿ ಮಾಡಿ ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ರೈಲ್ವೆ ಎಸ್ ಪಿ ಡಾ.ಸೌಮ್ಯಲತಾ ಅವರು ತಿಳಿಸಿದ್ದಾರೆ. ತ್ರಿಪುರದ ಅಗರ್ತಲಾದಿಂದ ಬೆಂಗಳೂರಿನ ಬೈಯ್ಯಪ್ಪನಹಳ್ಳಿ ರೈಲ್ವೆ ಟರ್ಮಿನಲ್‌ಗೆ ಬಂದಿಳಿದ ರೈಲಿನಲ್ಲಿ ಗಾಂಜಾ ಸಾಗಿಸುತ್ತಿದ್ದ ಖಚಿತವಾದ ಮಾಹಿತಿಯನ್ನು ಆಧರಿಸಿ ಕಾರ್ಯಾಚರಣೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯು ಅಗರ್ತಲಾ - ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಗುತ್ತಿಗೆ ಆಧಾರದಲ್ಲಿ ಬೆಡ್ ರೋಲರ್ ಕೆಲಸ ಮಾಡುತ್ತಿರುವುದು ಪತ್ತೆಯಾಗಿದೆ. ರೈಲ್ವೆಯಲ್ಲಿ ಕೆಲಸ ಮಾಡುತ್ತಿರುವುದನ್ನು ದುರ್ಬಳಕೆ ಮಾಡಿಕೊಂಡ ಆರೋಪಿಯು ಕಿಟ್ ಬ್ಯಾಗ್‌ಗಳಲ್ಲಿ ರೈಲ್ವೆ ಸಿಬ್ಬಂದಿಯ ಕಣ್ತಪ್ಪಿಸಿ ಸಾಗಾಣೆ ಮಾಡುತ್ತಿದ್ದ. ತ್ರಿಪುರ ಮೂಲದ ಸುಮನ್‌ನಿಂದ ಗಾಂಜಾ ಕಳುಹಿಸುತ್ತಿದ್ದ ಆತನಿಂದ ಗಾಂಜಾ ತರಿಸಿ ಮಾಡಿಕೊಳ್ಳುತ್ತಿದ್ದ ಬಿಸ್ವಜಿತ್ ಸೇರಿ ಇಬ್ಬರು ಆರೋಪಿಗಳು ನಾಪತ್ತೆಯಾಗಿದ್ದು, ಅವರ ಬಂಧನ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

## ಸಮಾಚಾರ ಸಣ್ಣದಲ್ಲ

### ನೀರಿನ ಅದಾಲತ್

**ಬೆಂಗಳೂರು:** ಬೆಂಗಳೂರು ಜಲಮಂಡಳಿ ವತಿಯಿಂದ ಜೂ.27ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಿದೆ ಎಂದು ಮಂಡಳಿ ತಿಳಿಸಿದೆ. ನಗರದ ವಿವಿಧ ಉಪ ವಿಭಾಗಗಳಾದ ಆಗ್ನೇಯ-3, ಆಗ್ನೇಯ-6, ಪಶ್ಚಿಮ 1-3, ವಾಯುವ್ಯ -5, ಉತ್ತರ 2-3, ದಕ್ಷಿಣ 1-3, ನೈರುತ್ಯ - 3, ನೈರುತ್ಯ -6, ಮತ್ತು ಪೂರ್ವ 2-4, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಾರ್ವಜನಿಕರು ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಹಾಗೂ ವಾಟ್ಸ್‌ಆಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು.

### ಜೂನ್ 28ಕ್ಕೆ ಡಿಸಿ ಕಚೇರಿಗೆ ಮುತ್ತಿಗೆ

**ಬೆಂಗಳೂರು:** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಸಂಬಂಧಕ್ಕೆ ಮುಖ್ಯಮಂತ್ರಿ ಸೇರಿದಂತೆ ಸಚಿವ ಶರಣಪ್ರಕಾಶ್ ಪಾಟೀಲ್, ಹಾಗೂ ನಿಗಮದ ಅಧ್ಯಕ್ಷರು ಕೂಡಲೇ ರಾಜೀನಾಮೆ ನೀಡುವಂತೆ ಆಗ್ರಹಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿ ದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರವು ಜನರಿಗೆ ಶಾಪವಾಗಿ ಪರಿಣಮಿಸಿದ್ದು, ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹಣ ಪೋಲಾಗಿದ್ದಲ್ಲದೇ ಸರಕಾರವು ಈ ಹಣವನ್ನು ದೋಚಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯೂನಿಯನ್ ಬ್ಯಾಂಕ್ ಪತ್ರದನ್ವಯ ಸಿಬಿಐ ತನಿಖೆ ನಡೆಯುತ್ತಿದ್ದರೂ ಸರಕಾರ ಆತುರಾತುರವಾಗಿ ಎಸ್‌ಐಟಿ ರಚಿಸಿ ತಮಗೆ ಬೇಕಾದಂತೆ ತನಿಖೆ ನಡೆಸುತ್ತಿದೆ. ಎಸ್‌ಐಟಿ ತೇಪೆ ಹಚ್ಚುವ ಕೆಲಸ ಮಾಡುತ್ತಿದ್ದು, ಅಧಿಕಾರಿ ಮನೆಯಲ್ಲಿ ಒಂದಷ್ಟು ಹಣ ಲಭಿಸಿದೆ ಎನ್ನುವ ಮೂಲಕ ಕಾಲಹರಣ ಮಾಡುತ್ತಿದೆ. ತೆಲಂಗಾಣಕ್ಕೆ ಬೇನಾಮಿ ಖಾತೆಗೆ ಹಣ ವರ್ಗಾವಣೆ ಮಾಡಿ ವಿತ್‌ಡ್ರಾ ಮಾಡಿದ್ದಾರೆ. ಈ ಹಣವನ್ನು ಲೋಕಸಭಾ ಚುನಾವಣೆಗೆ ಬಳಸಿದ್ದಾರೆ ಎಂದು ಆರೋಪಿಸಿದರು.

### ಚಿನ್ನಾಭರಣ ಕಳ್ಳತನ

**ಬೆಂಗಳೂರು:** ಚಿನ್ನಾಭರಣದ ಅಂಗಡಿಗೆ ನುಗ್ಗಿದ ಕಳ್ಳರು ಮಾಲೀಕರಿಗೆ ಗನ್ ತೋರಿಸಿ ಕೇವಲ 30 ಸೆಕೆಂಡುಗಳಲ್ಲಿ ಸುಮಾರು 60 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣ ಕದ್ದು ಪರಾರಿಯಾಗಿರುವ ಘಟನೆ ಮಾದನಾಯಕನ ಹಳ್ಳಿಯ ಲಕ್ಷ್ಮಿಪುರದಲ್ಲಿ ನಡೆದಿದೆ. ಕೇವಲ 30 ಸೆಕೆಂಡಿನಲ್ಲಿ 60 ಲಕ್ಷ ಮೌಲ್ಯದ ಚಿನ್ನಾಭರಣ ದರೋಡೆ ಮಾಡಲಾಗಿದೆ. ಮಾದನಾಯಕನಹಳ್ಳಿಯ ಲಕ್ಷ್ಮಿಪುರದ ಆಭರಣ ಅಂಗಡಿಯಲ್ಲಿ ಈ ಘಟನೆ ನಡೆದಿದ್ದು, ಗನ್ ತೋರಿಸಿ ಚಿನ್ನಾಭರಣ ದೋಚಿದ್ದಾರೆ. ಒಬ್ಬ ಕಳ್ಳ ಗನ್ ಹಿಡಿದು ಮಾಲೀಕರಿಗೆ ಬೆದರಿಕೆ ಹಾಕಿದ್ದು, ಮತ್ತೊಬ್ಬ ಚಿನ್ನಭಾರಣಗಳನ್ನು ಚೀಲಕ್ಕೆ ತುಂಬಿಕೊಂಡಿದ್ದ. ಇನ್ನೊಬ್ಬ ಕಳ್ಳ ಹೊರಗೆ ಬೈಕ್‌ನಲ್ಲಿ ಕಾಯುತ್ತಿದ್ದ. ಕೆಲವೇ ಸೆಕೆಂಡಿನಲ್ಲಿ ಚಿನ್ನಾಭರಣಗಳನ್ನು ದೋಚಿ ಅಲ್ಲಿಂದ ಪರಾರಿಯಾಗಿದ್ದಾರೆ. 750 ಗ್ರಾಂಗಿಂತ ಹೆಚ್ಚು ಚಿನ್ನ ಕದ್ದು ಅಲ್ಲಿಂದ ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಪರಾರಿಯಾಗಿದ್ದಾರೆ.

# ದರ್ಶನ್ ಬಳಿಯಿದ್ದ ಗನ್ ವಶ

## ದರ್ಶನ್ ತಂಡದಿಂದ 70 ಲಕ್ಷ ರು. ಜಪ್ತಿ: ಐಟಿ, ಇನ್‌ಸ್ಟಾಗ್ರಾಮ್‌ಗೆ ಪತ್ರ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ನಟ ದರ್ಶನ್ ಹಾಗೂ ಆತನ ಸಹಚರ ಪ್ರದೋಷ್ ಬಳಿಯಿದ್ದ ಪರವಾನಗಿ ಹೊಂದಿದ ಪಿಸ್ತೂಲ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಳೆದ ಲೋಕಸಭೆ ಚುನಾವಣೆ ವೇಳೆ ಇಬ್ಬರೂ

ಆರೋಪಿಗಳು ಪರವಾನಗಿ ಹೊಂದಿದ ಪಿಸ್ತೂಲ್‌ಗಳನ್ನು ಪೊಲೀಸರ ಬಳಿ ಠೇವಣಿ (ಡೆಪಾಸಿಟ್) ಇರಿಸಿರಲಿಲ್ಲ ಎನ್ನುವುದು ತನಿಖೆಯಲ್ಲಿ ಪತ್ತೆಯಾಗಿದ್ದು, ತಕ್ಷಣವೇ ಅವುಗಳನ್ನು ಜಪ್ತಿ ಮಾಡಲಾಗಿದೆ. ದರ್ಶನ್ ಬಳಿ ಎರಡು ಯುಎಸ್ ಮೇಡ್ ಪಿಸ್ತೂಲ್‌ಗಳು, ಪ್ರದೋಷ್ ಬಳಿ ಒಂದು ಲೈಸೆನ್ಸ್ ಪಿಸ್ತೂಲ್ ಇವೆ. ಕಳೆದ ಲೋಕಸಭಾ ಚುನಾವಣಾ ವೇಳೆ ಲೈಸೆನ್ಸ್ ಪಡೆದಿರುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ಪೊಲೀಸರಿಗೆ ಒಪ್ಪಿಸಬೇಕಿತ್ತು. ಆದರೆ ಚುನಾವಣೆ ವೇಳೆ ಶಸ್ತ್ರಾಸ್ತ್ರ ಠೇವಣಿಯಿಂದ ದರ್ಶನ್ ಮತ್ತು ಪ್ರದೋಷ್ ವಿನಾಯಿತಿ ಪಡೆದಿದ್ದರು.

ನಟ ದರ್ಶನ್ ಮತ್ತು ಪ್ರದೋಷ್ ಪಿಸ್ತೂಲ್ ವಾಪಸ್ ಮಾಡದೇ ಶಸ್ತ್ರಾಸ್ತ್ರ ಠೇವಣಿ ವಿನಾಯಿತಿ ಪಡೆದಿದ್ದಾರೆ. ಬೆಂಗಳೂರಿನ 277 ಶಸ್ತ್ರಾಸ್ತ್ರ ಠೇವಣಿ ವಿನಾಯಿತಿ ಪಡೆದವರಲ್ಲಿ ದರ್ಶನ್ ಮತ್ತು ಪ್ರದೋಷ್‌ಗೂ ವಿನಾಯಿತಿ ನೀಡಲಾಗಿದ್ದು, ಬೆಂಗಳೂರು ಪೊಲೀಸ್ ಕಮಿಷನರ್ ಅವರಿಂದಲೇ ವಿನಾಯಿತಿ ನೀಡಿ ಆದೇಶ ದೊರೆತಿದೆ. ಕಮಿಷನರ್ ಬಿ. ದಯಾನಂದ ಶಸ್ತ್ರಾಸ್ತ್ರ ಠೇವಣಿ ಸ್ಕ್ರೀನಿಂಗ್ ಕಮಿಟಿಯ ಅಧ್ಯಕ್ಷರಾಗಿದ್ದರು. ಅತಿ ಗಣ್ಯರಿಗೆ ನೀಡುವ ಶಸ್ತ್ರಾಸ್ತ್ರ ಠೇವಣಿ ವಿನಾಯಿತಿಯಲ್ಲಿ ನಟ ದರ್ಶನ್ ಮತ್ತು ಪ್ರದೋಷ್ ಕೂಡ ಅವಕಾಶ ಪಡೆದಿದ್ದು, ಕಳೆದ ಮಾರ್ಚ್ 27ರಂದು ವಿನಾಯಿತಿ ನೀಡಿ ಕಮೀಷನರ್ ದಯಾನಂದ್ ಆದೇಶ ನೀಡಿದ್ದರು.

### ಕ್ರಿಮಿನಲ್ ಪ್ರಕರಣದ ಸುಳಿಯಲ್ಲಿ ದಾಸ

**ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ನಟ ದರ್ಶನ್ ಪಾಲಿಗೆ ಹಳೆಯ ಪ್ರಕರಣಗಳು ದೊಡ್ಡ ಸಂಕಷ್ಟಕ್ಕೆ ಸಿಲುಕಿಸುವ ಸಾಧ್ಯತೆ ಇದೆ. ಆರೋಪಿ ದರ್ಶನ್ ಮೇಲಿರುವ ಕ್ರಿಮಿನಲ್ ಪ್ರಕರಣಗಳು ಮಗದಷ್ಟು ತಿಂಗಳು ನಟ ದರ್ಶನ್ ಅವರನ್ನು ಜೈಲಿನಲ್ಲಿರುವಂತೆ ಮಾಡುವುದು ದಟ್ಟವಾಗುತ್ತಿದೆ. ಕೊಲೆ ಆರೋಪಿ ದರ್ಶನ್ ಕ್ರಿಮಿನಲ್ ಪ್ರಕರಣಗಳು ಈ ಹಿಂದೆ ಅಂದರೆ 2023 ರಲ್ಲಿ ವಿಜಯ ನಗರದಲ್ಲಿ, ಆರ್.ಆರ್.ನಗರ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳು ಕ್ರಿಮಿನಲ್ ಹಿನ್ನೆಲೆಯುಳ್ಳ ಪ್ರಕರಣಗಳಾಗಿವೆ. ಜಾಮೀನು ಕೊಟ್ಟರೆ ಹೊರಗಡೆ ಹೋಗಿ ಮತ್ತದೇ ಚಾಳಿ ಮುಂದುವರಿಸುವ ಸಾಧ್ಯತೆಗಳು ಇರುತ್ತವೆ. ಹೀಗಾಗಿ ಜಾಮೀನು ಮಂಜೂರು ಮಾಡದಂತೆ ಒತ್ತಾಯ ಮಾಡುವ ಸಾಧ್ಯತೆಗಳು ಹೆಚ್ಚಾಗಿದೆ. ಇನ್ನು ಶಿಕ್ಷೆ ಪ್ರಕಟಿಸುವಾಗ ಹಳೆಯ ಪ್ರಕರಣ ಪರಿಗಣಿಸಿ ಶಿಕ್ಷೆಯ ಪ್ರಮಾಣ ಹೆಚ್ಚು ಪ್ರಕಟಿಸುವ ಸಾಧ್ಯತೆಗಳು ದಟ್ಟವಾಗಿದೆ.**

### ಶೆಡ್‌ನಲ್ಲಿ ಕೆಲಸ ಮಾಡುವವರ ಹೇಳಿಕೆ ದಾಖಲು

**ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವರಿಂದ ಸಾಕ್ಷಿದಾರರಾಗಿ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಮತ್ತೆ ಕೆಲವರು ಸಿಆರ್‌ಪಿಸಿ 164ರ ಅಡಿ ನ್ಯಾಯಾಲಯದ ಎದುರು ಹೇಳಿಕೆ ನೀಡಿದ್ದಾರೆ. ಪಟ್ಟಣಗೆರೆ ಶೆಡ್‌ನಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರಿಂದ ಪೊಲೀಸರು ಹೇಳಿಕೆ ಪಡೆದುಕೊಂಡಿದ್ದಾರೆ. ಕೃತ್ಯ ನಡೆಯುವಾಗ ಇವರೆಲ್ಲ ಎಲ್ಲಿ ಇದ್ದರು? ಕೃತ್ಯ ನಡೆದಿದ್ದು ಇವರ ಗಮನಕ್ಕೆ ಬಂದಿತ್ತಾ? ಎಂಬುದು ಸೇರಿದಂತೆ ಕೆಲ ಮಾಹಿತಿಗಳನ್ನು ಹೇಳಿಕೆ ರೂಪದಲ್ಲಿ ಪೊಲೀಸರು ಪಡೆದುಕೊಂಡಿದ್ದಾರೆ.**

**ದರ್ಶನ್ ತಂಡದಿಂದ 70 ಲಕ್ಷ ರು. ಜಪ್ತಿ- ಐಟಿ, ಇನ್‌ಸ್ಟಾಗ್ರಾಮ್‌ಗೆ ಪತ್ರ:** ಚಿತ್ರದುರ್ಗ ನಿವಾಸಿ ರೇಣುಕಾಸ್ವಾಮಿ ಹತ್ಯೆಯನ್ನು ಮರೆಮಾಚಲು ಸಹ ಆರೋಪಿಗಳಿಗೆ ನೀಡಲಾಗಿದ್ದ 70 ಲಕ್ಷ ರೂಪಾಯಿಯನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಜಪ್ತಿ ಮಾಡಿಕೊಂಡಿದ್ದರು. ದೊಡ್ಡ ಮಟ್ಟದಲ್ಲಿ ನಗದು ಪತ್ತೆಯಾಗಿದ್ದರಿಂದ ಐಟಿಗೆ ಪತ್ರ ಬರೆದಿದ್ದಾರೆ. ಹಣದ ಮೂಲದ ಬಗ್ಗೆ ತನಿಖೆ ನಡೆಸುವಂತೆ ಕೇಳಿಕೊಂಡಿದ್ದಾರೆ. ಜೂನ್ 8ರಂದು ರೇಣುಕಾಸ್ವಾಮಿ ಹತ್ಯೆ ಬಳಿಕ ರಾಘವೇಂದ್ರ ಅಂಡ್ ಟೀಮ್‌ನೊಂದಿಗೆ ದರ್ಶನ್ 30 ಲಕ್ಷ ರೂಪಾಯಿಯ ಡೀಲ್ ಮಾಡಿಕೊಂಡಿದ್ದರು. ನಂತರ ಹೆಚ್ಚುವರಿಯಾಗಿ ಪರಿಚಯಸ್ಥ ಮೋಹನ್ ರಾಜ್ ಎಂಬುವರಿಂದ 40 ಲಕ್ಷ ರು. ಪಡೆದಿದ್ದರು. ಹೀಗೆ, ಪ್ರಕರಣವನ್ನು ಮರೆಮಾಚಲು ಯತ್ನಿಸಿದ್ದರು ಎಂಬುದು ಪೊಲೀಸರು ತನಿಖೆಯಲ್ಲಿ ಕಂಡುಕೊಂಡಿದ್ದರು. ಆರೋಪಿಗಳಿಂದ 70 ಲಕ್ಷ ರು. ಹಣ ಜಪ್ತಿ ಮಾಡಿಕೊಂಡ ಬಳಿಕ ಇದೀಗ ಐಟಿ ಇಲಾಖೆಗೆ ಪತ್ರ ಬರೆದು ಹಣದ ಮೂಲದ ಬಗ್ಗೆ ತನಿಖೆ ನಡೆಸುವಂತೆ ಪೊಲೀಸರು ಮನವಿ ಮಾಡಿದ್ದಾರೆ. ಇದರಿಂದ ನಟ ದರ್ಶನ್‌ಗೆ ಐಟಿ ಉರುಳು ಸುತ್ತಿಕೊಳ್ಳುವ ಸಾಧ್ಯತೆ ಇದೆ.

# ದೇಶದ ಅತಿದೊಡ್ಡ ಚಿರತೆ ಸಫಾರಿ ಆರಂಭ

## 4.5 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ

ಬನ್ನೇರುಘಟ್ಟದ ಜಂಗಲ್ ಲಾಜ್‌ನಲ್ಲಿ ನಡೆದ ಚಿಣ್ಣರ ವನದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ವೇಳೆ ಚಿರತೆ ಸಫಾರಿ, ಆನೆ ಮರಿಗಳಿಗೆ ಹಾಲುಣಿಸುವ ಕೇಂದ್ರ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು. ಈ ವೇಳೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ. ಸುನೀಲ್ ಪನ್ವಾರ್, ಬನ್ನೇರುಘಟ್ಟ ಜೈವಿಕ ಉದ್ಯಾನವನದ ಕಾರ್ಯ ನಿರ್ವಾಹಕ ನಿರ್ದೇಶಕ ಎ.ವಿ. ಸೂರ್ಯಸೇನ್ ಮತ್ತಿತರರು ಉಪಸ್ಥಿತರಿದ್ದರು.

**ಬೆಂಗಳೂರು:** ದೇಶದಲ್ಲಿಯೇ ಅತಿದೊಡ್ಡ ಚಿರತೆ ಸಫಾರಿಯನ್ನು ಆರಂಭಿಸಿದ ಕೀರ್ತಿಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪಾತ್ರವಾಗಿದೆ. ಈ ಚಿರತೆ ಸಫಾರಿಯನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಬುಧವಾರ ಉದ್ಘಾಟಿಸಿದರು.

ಹುಲಿ ಸಫಾರಿ, ಸಸ್ಯಹಾರಿ ಪ್ರಾಣಿಗಳ ಸಫಾರಿ, ಸಿಂಹ ಸಫಾರಿ, ಕರಡಿ ಸಫಾರಿಯಿರುವ ಬನ್ನೇರುಘಟ್ಟ ಉದ್ಯಾನದಲ್ಲಿ ನೂತನವಾಗಿ ನಿರ್ಮಿಸಿರುವ ಚಿರತೆ ಸಫಾರಿಗೆ ಚಾಲನೆ ನೀಡಲಾಗಿದ್ದು, ಇದು ದಕ್ಷಿಣ ಭಾರತದ ಪ್ರಥಮ ಮತ್ತು ದೇಶದಲ್ಲಿಯೇ ಅತಿ ದೊಡ್ಡ ಚಿರತೆ ಸಫಾರಿಯಾಗಿದೆ. ಪ್ರಸ್ತುತ ಎಂಟು ಚಿರತೆಗಳನ್ನು ತೆರೆದ ವನಪ್ರದೇಶದಲ್ಲಿ ಸಫಾರಿಗೆ ಬಿಡಲಾಗಿದೆ.

ಚಿರತೆ ಸಫಾರಿ ಪ್ರದೇಶವು ನೈಸರ್ಗಿಕ ಬಂಡೆಗಳಿಂದ ಹಾಗೂ ಅರೆ-ಎಲೆ ಉದುರುವ ಕಾಡುಗಳಿಂದ ಕೂಡಿದೆ. ಕೇಂದ್ರ ಮೃಗಾಲಯ ಪ್ರಾಧಿಕಾರದ ಮಾರ್ಗಸೂಚಿಗಳ ಪ್ರಕಾರ, 20 ಹೆಕ್ಟೇರ್ ಪ್ರದೇಶವನ್ನು ಗುರುತಿಸಿ ರೈಲ್ವೆ ಬ್ಯಾರಿಕೇಡ್ ಹಾಕಲಾಗಿದೆ. ಒಟ್ಟು 4.5 ಕೋಟಿ ರು. ವೆಚ್ಚದಲ್ಲಿ ಸುರಕ್ಷಿತ ವಿನ್ಯಾಸ ರೂಪಿಸಲಾಗಿದೆ. ಇಡೀ ಪ್ರದೇಶಕ್ಕೆ 4.5 ಮೀಟರ್ ಎತ್ತರದ ಚೈನ್ ಲಿಂಕ್ ಜಾಲರಿ ಅಳವಡಿಸಲಾಗಿದ್ದು, ಎಂಎಸ್ ಶೀಟ್‌ಗಳನ್ನು 1.5 ಮೀಟರ್ ಎತ್ತರವಿರುವ 30ಡಿಗ್ರಿ ಇಳಿಜಾರಿನ ಕೋನದಲ್ಲಿ ಹಾಕುವ ಮೂಲಕ ಚಿರತೆಗಳು ಹೊರಗೆ ಬಾರದಂತೆ ಎಚ್ಚರ ವಹಿಸಲಾಗಿದೆ ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಬನ್ನೇರುಘಟ್ಟ ಸುತ್ತ ಮುತ್ತ ಬೆಟ್ಟಗುಡ್ಡಗಳಿದ್ದು, ಇದು ಚಿರತೆಗಳು ವಾಸಿಸಲು ಉತ್ತಮ ತಾಣವಾಗಿದೆ. ಹೀಗಾಗಿಯೇ ಇಲ್ಲಿ ಹೆಚ್ಚಿನ ಸಂಖ್ಯೆ ಚಿರತೆಗಳಿವೆ. ಈ ಪೈಕಿ ಹೊಲ, ಗದ್ದೆಗಳಲ್ಲಿ ಹೆಣ್ಣು ಚಿರತೆಗಳು ಮರಿ ಹಾಕಿ ಹೋಗುವ ಸಂದರ್ಭದಲ್ಲಿ ಅಂತಹ ಮರಿಗಳನ್ನು ತಂದು ಉದ್ಯಾನದಲ್ಲಿ ಪಾಲನೆ ಮಾಡಲಾಗುತ್ತದೆ. ಪ್ರಸ್ತುತ ಉದ್ಯಾನದಲ್ಲಿ 14 ಚಿರತೆಗಳಿವೆ ಎಂದೂ ಮಾಹಿತಿ ನೀಡಿದರು. ಸ್ವಾಗತ ಕಮಾನನ್ನೂ ಉದ್ಘಾಟಿಸಿದರು.

ಸಂದರ್ಶಕರಿಗೊಂದು ಸಸಿ

ಮೃಗಾಲಯಕ್ಕೆ ಬರುವ ಪ್ರತಿಯೊಬ್ಬರಿಗೂ ಪ್ರಾಣವಾಯು- ಆಮ್ಲಜನಕ ನೀಡುವ ವೃಕ್ಷಗಳ ಮಹತ್ವದ ಬಗ್ಗೆ ತಿಳಿಸಿ, ಅವರು ಮನೆಗೆ ತೆರಳುವಾಗ ಒಂದು ಸಸಿ ಖರೀದಿಸಿ ತೆಗೆದುಕೊಂಡು ಹೋಗಿ ತಮ್ಮ ಮನೆಯ ಮುಂದೆ ನೆಟ್ಟು, ಪೋಷಿಸುವಂತೆ ಪ್ರೇರೇಪಿಸಬೇಕು. ರೈತರಿಗೆ ರಿಯಾಯಿತಿ ದರದಲ್ಲಿ ಸಸಿಗಳನ್ನು ನೀಡುವ ರೀತಿಯಲ್ಲೇ ಮೃಗಾಲಯಕ್ಕೆ ಬರುವ ಸಂದರ್ಶಕರಿಗೂ ರಿಯಾಯಿತಿ ದರದಲ್ಲಿ ಸಸಿಗಳನ್ನು ಪೂರೈಸಬೇಕು ಎಂದು ಈ ವೇಳೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ. ಸುನೀಲ್ ಪನ್ವಾರ್, ಬನ್ನೇರುಘಟ್ಟ ಜೈವಿಕ ಉದ್ಯಾನವನದ ಕಾರ್ಯ ನಿರ್ವಾಹಕ ನಿರ್ದೇಶಕ ಎ.ವಿ. ಸೂರ್ಯಸೇನ್ ಮತ್ತಿತರರು ಉಪಸ್ಥಿತರಿದ್ದರು.

### ಆನೆ ಹಾಲುಣಿಸುವ ಕೇಂದ್ರದ ಉದ್ಘಾಟನೆ

**ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 26 ಆನೆಗಳಿದ್ದು, ಇಲ್ಲಿ ವರ್ಷಕ್ಕೆ 2ರಿಂದ 3 ಮರಿಗಳ ಜನನವಾಗುತ್ತದೆ. ಈ ಆನೆ ಮರಿಗಳಿಗೆ ಹಾಲುಣಿಸುವ ಕೇಂದ್ರವನ್ನೂ ಉದ್ಘಾಟಿಸಲಾಯಿತು. ಉದ್ಯಾನದಲ್ಲಿ ಜನಿಸುವ ಆನೆಮರಿಗಳ ಪೈಕಿ ಸುಮಾರು 3 ವರ್ಷದ ಮರಿಗಳನ್ನು ಹಾಲುಣಿಸಲು ತಾಯಿಯಿಂದ ಬೇರ್ಪಡಿಸಿ, ಮಾವುತರೊಂದಿಗೆ ಬಾಂಧವ್ಯ ಬೆಸೆಯಲು 10 ಲಕ್ಷ ರು. ವೆಚ್ಚದಲ್ಲಿ ನವೀಕರಿಸಲಾಗಿರುವ ಹಾಲುಣಿಸುವ ಕೇಂದ್ರಕ್ಕೆ ಸ್ಥಳಾಂತರಿಸಲಾಗುತ್ತದೆ, ಅಲ್ಲಿ ಮಾವುತರು ಮತ್ತು ಕಾವಾಡಿಗಳು ಆನೆ ಮರಿಗಳಿಗೆ 24 ಗಂಟೆಯೂ ವಿಶೇಷ ಆರೈಕೆ ಮಾಡುತ್ತಾರೆ ಎಂದು ಈಶ್ವರ ಖಂಡ್ರೆ ಹೇಳಿದರು.**

# ಇಂದು ನಾಡಪ್ರಭು ಕೆಂಪೇಗೌಡ ಜಯಂತಿ

**ಬೆಂಗಳೂರು:** ನಾಡಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವ ಸಮಾರಂಭವನ್ನು ಗುರುವಾರ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 10.00 ಗಂಟೆಗೆ ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾರ್ಯಕ್ರಮದ ಉದ್ಘಾ ಟನೆ ಯನ್ನು ಮಾಡಲಿದ್ದು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ, ಸ್ಪಟಿಕಪುರಿ ಮಹಾಸಂಸ್ಥಾನ ಮಠದ ಶ್ರೀ ಡಾ. ನಂಜಾವಧೂತ ಮಾಹಾಸ್ವಾಮೀಜಿ ದಿವ್ಯ ಸಾನ್ನಿಧ್ಯವನ್ನು ವಹಿಸಲಿದ್ದಾರೆ.

ಉದ್ಘಾಟನೆಗೂ ಮುನ್ನ ಬೆಂಗಳೂರು ನಾಲ್ಕು ಮೂಲೆಗಳಿಂದ ನಾಡಪ್ರಭು ಕೆಂಪೇಗೌಡರ ಪುರಜ್ಯೋತಿ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದ್ದು, ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಮಾಗಡಿಯ ಕೆಂಪಾಪುರದಲ್ಲಿರುವ ನಾಡಪ್ರಭು ಕೆಂಪೇಗೌಡರ ಸಮಾಧಿಯಿಂದ ಪುರಜ್ಯೋತಿಗೆ ಚಾಲನೆ ನೀಡಲಿರು ವರು. ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಸಿ. ಬಾಲಕೃಷ್ಣ ಉಪಸ್ಥಿತಿ ವಹಿಸಲಿರುವರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಕೆಂಪಾಂಬುಧಿ ಕೆರೆ ಗಡಿ ಗೋಪುರದಿಂದ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಲಾಲ್‌ಬಾಗ್ ಗಡಿ ಗೋಪುರದಿಂದ, ನಗರಾಭಿವೃದ್ಧಿ ಸಚಿವ ಸುರೇಶ್ ಅವರು ಮೇಖ್ರಿ ವೃತ್ತ ಗಡಿ ಗೋಪುರದಿಂದ, ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಹಲಸೂರು ಕೆರೆ ಗಡಿ ಗೋಪುರದಿಂದ, ಆಹಾರ, ನಾಗರೀಕ ಸರಬರಾಜು ಸಚಿವರಾದ ಕೆ.ಎಚ್. ಮುನಿಯಪ್ಪ ಅವರು ಆವತಿಯ ಚೆನ್ನಕೇಶವ ದೇವಾಲಯದ ಆವರಣದಿಂದ ಹಾಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಹುತ್ರಿದುರ್ಗದ ಬಯಲು ಬಿಸಿಲು ಬಸವಣ್ಣನ ಸ್ಥಳದಿಂದ ಪುರಜ್ಯೋತಿಗೆ ಚಾಲನೆ ನೀಡಲಿದ್ದಾರೆ.

# ಬ್ಲ್ಯಾಕ್‌ಮೇಲ್ ಗ್ಯಾಂಗ್ ಸೆರೆ

## ಶಾಸಕ ಹರೀಶ್ ಗೌಡ ಸೇರಿ ಹಲವು ವಿಐಪಿಗಳಿಗೆ ಹನಿಟ್ರ್ಯಾಪ್‌ಗೆ ಯತ್ನ

**ಬೆಂಗಳೂರು:** ಶಾಸಕ ಹರೀಶ್ ಗೌಡ ಸೇರಿದಂತೆ ಹಲವು ವಿಐಪಿಗಳಿಗೆ ಹನಿಟ್ರ್ಯಾಪ್‌ಗಾಳ ಹಾಕಿದ್ದ ಖತರ್ನಾಕ್ ಗ್ಯಾಂಗನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಉಳಿದುಕೊಳ್ಳುತ್ತಿದ್ದ ಶಾಸಕರು, ಸಚಿವರು, ಉದ್ಯಮಿಗಳು, ವಿಶ್ವವಿದ್ಯಾಲಯಗಳ ಕುಲಪತಿಗಳು ಸೇರಿ ವಿಐಪಿಗಳನ್ನು ಹನಿಟ್ರ್ಯಾಪ್ ಮಾಡಿ, ನಂತರ ಅವರದ್ದೇ ವಿಡಿಯೊ ಎನ್ನುವಂತೆ ಬ್ಲಾಕ್‌ಮೇಲ್ ಮಾಡುತ್ತಿದ್ದ ಖತರ್ನಾಕ್ ಗ್ಯಾಂಗ್ ಅನ್ನು ಬೆಂಗಳೂರು ಸಿಸಿಬಿ ಪೊಲೀಸರು ಬೇಧಿಸಿದ್ದಾರೆ. ಈ ಗ್ಯಾಂಗ್‌ನ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿ ಹೆಡೆಮುರಿಕಟ್ಟಿ ಜೈಲಿಗಟ್ಟಿದ್ದಾರೆ.

ಸಮಾಜದ ಗಣ್ಯ ವ್ಯಕ್ತಿಗಳಿಗೆ ಹನಿಟ್ರ್ಯಾಪ್ ಮೂಲಕ ಬ್ಲಾಕ್‌ಮೇಲ್ ಮಾಡುತ್ತಿದ್ದವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಹನಿಟ್ರ್ಯಾಪ್ ಮಾಡಿ ಕೋಟ್ಯಂತರ ರು. ಹಣಕ್ಕೆ ಬೇಡಿಕೆ ಇಟ್ಟು ಬ್ಲ್ಯಾಕ್‌ಮೇಲ್ ಮಾಡಿದ್ದ ಆರೋಪಿಗಳು ಮೈಸೂರು, ಬೆಂಗಳೂರು ಸೇರಿ ವಿವಿಧೆಡೆ ಇಂತಹ ಕೃತ್ಯಗಳನ್ನು ಎಸಗಿದ್ದಾರೆ. ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಅವರು ಬೆಂಗಳೂರಿನ ಸಿಸಿಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಶಾಸಕರು ನೀಡಿದ ದೂರಿನ ಅನ್ವಯ ಕೇಸ್ ದಾಖಲು ಮಾಡಿಕೊಂಡ ಸಿಸಿಬಿ ಪೊಲೀಸರು ಹನಿಟ್ರ್ಯಾಪ್ ಮಾಡುತ್ತಿದ್ದ ಜಾಲವನ್ನು ಭೇದಿಸಿದ್ದಾರೆ.

### ಮೈಸೂರು ಮೂಲದವರು ಬಂಧನ

**ವಿಶ್ವವಿದ್ಯಾಲಯದ ಕುಲಪತಿಯೊಬ್ಬರು ಹೀಗೆ ಬ್ಲ್ಯಾಕ್‌ಮೇಲ್‌ಗೆ ಒಳಗಾಗಿದ್ದು, ಈ ಬಗ್ಗೆ ಶಾಸಕ ಶಾಸಕ ಹರೀಶ್ ಗೌಡ ಅವರಿಗೆ ಮಾಹಿತಿ ನೀಡಿದ್ದರು. ಉಪಕುಲಪತಿಗಳ ಬೆಂಬಲಕ್ಕೆ ನಿಂತ ಶಾಸಕ ಹರೀಶ್‌ಗೌಡ, ದೂರು ನೀಡಿ ಧೈರ್ಯ ಹೇಳಿದ್ದರು. ಆರೋಪಿಗಳ ಗ್ಯಾಂಗ್ ಪುನಃ ಶಾಸಕ ಹರೀಶ್ ಗೌಡ ವಿರುದ್ಧವೇ ಸುಳ್ಳು ಹನಿಟ್ರ್ಯಾಪ್ ಮಾದರಿ ವಿಡಿಯೊ ಸೃಜಿಸಿ ಬೆದರಿಕೆ ಹಾಕಲು ಮುಂದಾಗಿದೆ. ಈ ಪ್ರಕರಣ ಭೇದಿಸಿದ ಸಿಸಿಬಿ ಪೊಲೀಸರಿಗೆ ಮೈಸೂರು ಮೂಲದ ಸಂತೋಷ್ ಮತ್ತು ಪುಟ್ಟರಾಜು ಎಂಬ ಇಬ್ಬರು ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. ಈ ಹನಿಟ್ರ್ಯಾಪ್ ಮತ್ತು ಬ್ಲ್ಯಾಕ್‌ಮೇಲ್ ಗ್ಯಾಂಗ್‌ನಲ್ಲಿ ಓರ್ವ ಯುವತಿ ಕೂಡ ಭಾಗಿಯಾಗಿದ್ದಾಳೆ ಎಂದು ಸಿಸಿಬಿ ಪೊಲೀಸರು ಮಾಹಿತಿ ನೀಡಿದ್ದಾರೆ.**

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ: 393/2024
**ಅರ್ಜಿದಾರರು:** ಶ್ರೀಮತಿ. ಕೆಂಪಮ್ಮ ಬಿನ್ ಲೇಟ್ ಮಲ್ಲೇಗೌಡ ವಾಸ: ಟಿ.ಬೇಕುಪ್ಪೆ ಗ್ರಾಮ, ಟಿ.ಬೇಕುಪ್ಪೆ ಪೋಸ್ಟ್ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ತಹಶೀಲ್ದಾರ್, ಕನಕಪುರ ತಾಲ್ಲೂಕು, ಮತ್ತು ಇನ್ನೊಬ್ಬರು
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1, 2 ಮತ್ತು 4ನೇ ಅರ್ಜಿದಾರರ ತಾಯಿ ಹಾಗೂ 3ನೇ ಅರ್ಜಿದಾರರಿಗೆ ಅತ್ತೆಯವರಾದ ಶ್ರೀಮತಿ. ಕೆಂಪಮ್ಮ ಕೋಂ ಲೇಟ್ ಮಲ್ಲೇಗೌಡ ರವರು ರಾಮನಗರ ಜಿಲ್ಲೆ ಹಾರೋಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಟಿ.ಬೇಕುಪ್ಪೆ ಗ್ರಾಮದಲ್ಲಿ ದಿನಾಂಕ:28/03/1979 ರಂದು ಮರಣ ಹೊಂದಿದ್ದು ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 22/08/2024 ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
25-06-2024 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಪಿ.ಮಹೇಶ್., ವಕೀಲರು.
ಕನಕಪುರ ಟೌನ್
ಸ್ಥಳ:ಕನಕಪುರ
ದಿನಾಂಕ: 24.06.2024

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 440/2024
**ಅರ್ಜಿದಾರರು:** ಶ್ರೀ. ಚನ್ನಪ್ಪ ಬಿನ್ ಲೇಟ್ ವರದಯ್ಯ @ ಕೊಕ್ಕಣ್ಣ ವಯಸ್ಸು 81 ವರ್ಷ ಹುಳುಗೊಂಡನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು ಹಾರೋಹಳ್ಳಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 3ನೇ ಅರ್ಜಿದಾರರ ತಾಯಿ ಮತ್ತು 2ನೇ ಅರ್ಜಿದಾರರ ಅತ್ತೆಯವರಾದ ಶ್ರೀಮತಿ. ಗಿರಿಗಮ್ಮ ಕೋಂ ಲೇಟ್ ವರದಯ್ಯ @ ಕೊಕ್ಕಣ್ಣ ರವರು ರಾಮನಗರ ಜಿಲ್ಲೆ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹುಳುಗೊಂಡನಹಳ್ಳಿ ಗ್ರಾಮದಲ್ಲಿ ದಿನಾಂಕ:16/06/1984 ರಲ್ಲಿ ಮರಣ ಹೊಂದಿದ್ದು ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 31/07/2024 ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
25-06-2024 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಶಿವಪ್ಪ., ವಕೀಲರು.
ಕನಕಪುರ ಟೌನ್
ಸ್ಥಳ:ಕನಕಪುರ
ದಿನಾಂಕ: 24.06.2024

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 441/2024
**ಅರ್ಜಿದಾರರು:** ಶ್ರೀ. ಚನ್ನಪ್ಪ ಬಿನ್ ಲೇಟ್ ವರದಯ್ಯ @ ಕೊಕ್ಕಣ್ಣ ವಯಸ್ಸು 81 ವರ್ಷ ಹುಳುಗೊಂಡನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
[illegible]

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 442/2024
**ಅರ್ಜಿದಾರರು:** ಶ್ರೀ. ಚನ್ನಪ್ಪ ಬಿನ್ ಲೇಟ್ ವರದಯ್ಯ @ ಕೊಕ್ಕಣ್ಣ ವಯಸ್ಸು 81 ವರ್ಷ ಹುಳುಗೊಂಡನಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
[illegible]

# ಜೂ.28ರಂದು ವಿದ್ಯುತ್ ವ್ಯತ್ಯಯ

**ಬೆಂಗಳೂರು:** ಜೂ.28ರ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ 66/11ಕೆ.ವಿ ಬಾಣಸವಾಡಿ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯಿರುವುದರಿಂದ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದ ಹೊರಮಾವು ಪಿಟಿ ಲೇಔಟ್, ನಿಸರ್ಗ ಕಾಲೋನಿ, ನಂದನಂ ಕಾಲೋನಿ, ಆಶೀರ್ವಾದ್ ಕಾಲೋನಿ, ಜ್ಯೋತಿನಗರ, ಆಗರ, ಬಾಲಾಜಿ ಲೇಔಟ್, ಚಿನ್ನಸ್ವಾಮಪ್ಪ ಲೇಔಟ್, ಕೋಕೋನಟ್ ಗ್ರೋವ್, ದೇವಮತ ಶಾಲೆ, ಅಮರ್ ರೀಜೆನ್ಸಿ, ಜಯ ಬ್ಯಾಂಕ್ ಕಾಲೋನಿ ಎಚ್.ಆರ್.ಬಿ.ಆರ್. ಲೇಔಟ್, 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣನಗರ, ಜಲಮಂಡಳಿ ವಾಟರ್‌ಟ್ಯಾಂಕ್, ಹೆಣ್ಣೂರುಗ್ರಾಮ, ಚೆಳ್ಳಿಕೆರೆ, ಮೇಘನ ಪಾಳ್ಯ, ಗೆದ್ದಲಹಳ್ಳಿ, ಕೊತ್ತನೂರು, ವಡ್ಡರ ಪಾಳ್ಯ, ಜಾನಕೀರಾಮ್ ಲೇಔಟ್, ಬಿ.ಡಿ.ಎಸ್. ಗಾರ್ಡನ್, ಸತ್ಯಎನ್‌ಕ್ಲೇವ್, ಪ್ರಕೃತಿ ಲೇಔಟ್ ಹೊಯ್ಸಳನಗರ, ಬೃಂದಾವನ ಲೇಔಟ್, ನಾಯಕ ಲೇಔಟ್, ಗುಬ್ಬಿಕ್ರಾಸ್, ಬಾಬೂಸಾ ಪಾಳ್ಯ, ಬ್ಯಾಂಕ್ ಅವೆನ್ಯೂ ಲೇಔಟ್, ನಂಜಪ್ಪಗಾರ್ಡನ್, ಸಿ.ಎನ್.ಆರ್. ಲೇಔಟ್, ಆರ್.ಎಸ್.ಪಾಳ್ಯ, ಮುನಿಕಲ್ಲಪ್ಪಗಾರ್ಡನ್, ಹನುಮಂತಪ್ಪರಸ್ತೆ, ಮುನೆಗೌಡರಸ್ತೆ, ಸತ್ಯಮೂರ್ತಿರಸ್ತೆ, ಜೆ..ಶೆಟ್ಟಿರಸ್ತೆ, ಕುವೆಂಪು ರಸ್ತೆ, ಸದಾಶಿವ ದೇವಸ್ಥಾನದರಸ್ತೆ, ಗುರುಮೂರ್ತಿರಸ್ತೆ, ಗುಳ್ಳಪ್ಪ ರಸ್ತೆ, ಕಮ್ಮನಹಳ್ಳಿ ಸಂಪಣ್ಣ ರಸ್ತೆ ಎ,ಡಿ.ಎಂ.ಸಿ. ಎಲಿಟರಿ, ಬಂಜಾರ ಲೇಔಟ್, ಎನ್.ಪಿ.ಎಸ್., ಬೆಥೆಲ್‌ಲೇಔಟ್, ಸಮೃದ್ಧಿ ಲೇಔಟ್, ವಾಟರ್‌ಟ್ಯಾಂಕ್, ಕಲ್ಕೆರೆ, ಜಯಂತಿನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ದೂರಿಗಾಗಿ ಸಹಾಯವಾಣಿ ಸಂಖ್ಯೆ1912ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

# ಪುಕ್ಕಟೆ ಸಲಹೆ ನಾಟಕ ಪ್ರದರ್ಶನ 30ಕ್ಕೆ

**ಬೆಂಗಳೂರು:** ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡವು ಚುಟುಕು ಸಾಹಿತಿ ಎಚ್.ಡುಂಡಿರಾಜ್‌ರ ಪುಕ್ಕಟೆ ಸಲಹೆ ಹಾಸ್ಯ ನಾಟಕದ ಪ್ರದರ್ಶನವು ಜೂ.30 ರಂದು



ಸಂಜೆ 5.00 ಗಂಟೆಗೆ ಎನ್.ಆರ್ ಕಾಲೋನಿಯಲ್ಲಿರುವ ಅಶ್ವತ್ ಕಲಾ ಭವನದಲ್ಲಿ ನಡೆಯಲಿದೆ. ಪುಕ್ಕಟೆ ಸಲಹೆ ಹಾಸ್ಯನಾಟಕವು ದಿನಂಪ್ರತಿ ಎಲ್ಲ ಟಿವಿಗಳಲ್ಲಿ ವಿಜೃಂಭಿಸುವ ಜ್ಯೋತಿಷಿಗಳ ಹಾವಳಿಯನ್ನು ಅವರ ನಿಜಬಣ್ಣ, ಅವಾಂತರಗಳನ್ನು ಹಾಸ್ಯದ ಮೂಲಕ ನಾಟಕದಲ್ಲಿ ತೋರಿಸಲಾಗಿದೆ. ಕೈಯಲ್ಲಿ ಲ್ಯಾಪ್‌ಟಾಪ್ ಹಿಡಿದು ರಂಗದ ಮೇಲೆ ಬಂದು ಕೂರುವ ಲ್ಯಾಪಾನಂದ ಟ್ಯಾಪಾನಂದ ಶಾಸ್ತಿ, ರಾಜ್ಯದ ವಿವಿಧ ಊರುಗಳಿಂದ ತಮ್ಮ ಚಿತ್ರ ವಿಚಿತ್ರ ಸಮಸ್ಯೆಗಳಿಗೆ ಪರಿಹಾರ ಕೇಳಲು ಕರೆ ಮಾಡುವ ಜನರಿಗೆ ಕೊಡುವ ಉಚಿತ ಸಲಹೆಗಳು, ಡುಂಡಿರಾಜರ ಹಾಸ್ಯ ಚುಟುಕಗಳು. ನಾಟಕದ ನಡುನಡುವೆ ಬರುವ ಹಾಸ್ಯ ಜಾಹೀರಾತುಗಳು ಸತತ ಒಂದೂವರೆ ಗಂಟೆಗಳ ಕಾಲ ಪ್ರೇಕ್ಷಕರನ್ನು ಬಿದ್ದುಬಿದ್ದು ನಗುವಂತೆ ಮಾಡುತ್ತದೆ. ನಾಟಕವು ಎರಡು ಪ್ರದರ್ಶನವನ್ನು ಒಳಗೊಂಡಿದ್ದು, ಮೊದಲ ಪ್ರದರ್ಶನ ಸಂಜೆ 5 ಗಂಟೆಗೆ ಎರಡನೇ ಪ್ರದರ್ಶನ ಸಂಜೆ 7:30ಗಂಟೆಗೆ ಇರಲಿದೆ. ಹೆಚ್ಚಿನ ವಿವರಗಳಿಗೆ 9945977184, 9916863637 ಸಂಪರ್ಕಿಸಿ

ವರದಿ ನೀಡಲು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

# ಮನೆ ಮನೆ ಸಮೀಕ್ಷೆ ಮೂಲಕ ಡೆಂಘೀ ನಿಯಂತ್ರಣ

**ಬೆಂಗಳೂರು:** ನಗರದಲ್ಲಿ ಡೆಂಘೀ ಹರಡುವಿಕೆಯನ್ನು ತಡೆಯುವ ಸಲುವಾಗಿ ಮನೆ-ಮನೆ ಸಮೀಕ್ಷೆ ನಡೆಸಿ ನಾಗರೀಕರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಡೆಂಘೀ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಿ, ಆಯಾ ವಲಯದ ವ್ಯಾಪ್ತಿಯಲ್ಲಿ ಆರೋಗ್ಯ ಪರಿವೀಕ್ಷರು, ಆಶಾ ಕಾರ್ಯಕರ್ತೆಯರು, ಎ.ಎನ್.ಎಂ ಗಳು ಹಾಗೂ ಲಿಂಕ್ ವರ್ಕರ್ಸ್ ಸೇರಿದಂತೆ 1000 ಮನೆಗಳಿಗೊಂದು ಬ್ಲಾಕ್ ಅನ್ನು ರಚಿಸಿಕೊಳ್ಳಬೇಕು. ನಂತರ ಲಾರ್ವಾ ಇರುವ ತಾಣಗಳನ್ನು ಗುರುತಿಸುವುದು, ನಾಗರೀಕರಲ್ಲಿ ಅರಿವು ಮೂಡಿಸುವುದು ಹಾಗೂ ಯಾರಿಗಾದರು ಜ್ವರ ಬಂದಿದ್ದಲ್ಲಿ ಅಂತಹವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತೆರಳಿ ಪರೀಕ್ಷೆ ಮಾಡಿಸಿಕೊಳ್ಳಲು ತಿಳಿಸುವುದು ಸೇರಿದಂತೆ ಸಮಗ್ರವಾಗಿ ಮನೆ-ಮನೆ ಸಮೀಕ್ಷೆ ನಡೆಸಿ ವರದಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಈಡೀಸ್, ಈಜಿಪ್ಟೈ ಸೊಳ್ಳೆಗಳಿಂದ ಡೆಂಘೀ ರೋಗ ಹರಡುತ್ತಿದ್ದು, ಈ ನಿಟ್ಟಿನಲ್ಲಿ ಸೊಳ್ಳೆ ನಿಯಂತ್ರಣ ಮಾಡಲು ಲಾರ್ವಾ ಉತ್ಪತ್ತಿಯಾಗುವ ತಾಣಗಳನ್ನು ಗುರುತಿಸಿ ನಾಶ ಪಡಿಸುವುದರ ಜತೆಗೆ ಮನೆಯಲ್ಲಿರುವ ಸಲಕರಣೆಗಳಲ್ಲಿ ಹೆಚ್ಚು ದಿನಗಳ ಕಾಲ ನೀರು ನಿಂತಿದ್ದು, ಲಾರ್ವಾ ಉತ್ಪತ್ತಿಯಾಗಿ ಸೊಳ್ಳೆಗಳ ಸಂಖ್ಯೆ ಹೆಚ್ಚಾಗುತ್ತದೆ. ಅದನ್ನು ತಡೆಯುವ ನಿಟ್ಟಿನಲ್ಲಿ ಪಾಲಿಕೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ನಗರದಲ್ಲಿ 2024 ಜನವರಿಯಿಂದ ಜೂನ್ ವರೆಗೆ 1230 ಪ್ರಕರಣಗಳು ಕಂಡುಬಂದಿದ್ದು, ವಲಯವಾರು ಮೈಕ್ರೋ ಪ್ಲಾನ್ ಮಾಡಿಕೊಂಡು ಡೆಂಘೀ ಹರಡುವಿಕೆಯನ್ನು ನಿಯಂತ್ರಿಸಲು ಸೂಚನೆ ನೀಡಲಾಗಿದೆ ಎಂದರು.

ನಗರದಲ್ಲಿ ಮಳೆ ಬಿಟ್ಟು ಬಿಟ್ಟು ಬರುತ್ತಿರುವ ಹಿನ್ನೆಲೆ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಜಾಗೃತಿ ಚಟುವಟಿಕೆಗಳನ್ನು ಹೆಚ್ಚಾಗಿ ನಡೆಸಲಾಗುತ್ತಿದೆ. ಇದನ್ನು ಸರಕಾರದ ಮಟ್ಟದಲ್ಲೂ ಮಾಡಲಾಗುತ್ತಿದ್ದು, ಪಾಲಿಕೆಯಿಂದಲೂ ಆಯಾ ವಲಯಗಳಲ್ಲಿ ಹಲವಾರು ಚಟುವಟಿಕೆಗಳ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ವಲಯ ಆಯುಕ್ತರಾದ ಆರ್.ಎಲ್ ದೀಪಕ್, ರಮೇಶ್, ವಿನೋತ್ ಪ್ರಿಯಾ, ರಮ್ಯಾ, ಕರೀಗೌಡ, ರಮ್ಯಾ, ಎಲ್ಲಾ ವಲಯ ಜಂಟಿ ಆಯುಕ್ತರು, ಮುಖ್ಯ ಆರೋಗ್ಯಾಧಿಕಾರಿ, ಎಲ್ಲಾ ವಲಯ ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು ಮತ್ತಿತರರು ಇದ್ದರು.

ಪಾಲಿಕೆ ವ್ಯಾಪ್ತಿಯಲ್ಲಿ ಡೆಂಘೀ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ನಡೆದ ಸಭೆಯಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿದರು.

### ಎನ್‌ಎಸ್ 1 ಟೆಸ್ಟ್ ಕಿಟ್ ಮೂಲಕ ಡೆಂಘೀ ಪರೀಕ್ಷೆ

ನಗರದಲ್ಲಿ ಡೆಂಘೀ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆ ಜ್ವರ ಪ್ರಕರಣಗಳು ಕಂಡುಬಂದರೆ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎನ್.ಎಸ್ 1 ಟೆಸ್ಟ್ ಕಿಟ್ ಮೂಲಕ ಪರೀಕ್ಷೆ ಮಾಡಿ ಖಚಿತವಾದ ಬಳಿಕ ರಕ್ತದ ಮಾದರಿ ಸಂಗ್ರಹಿಸಿಕೊಂಡು ಪ್ರಯೋಗಾಲಯಗಳಿಗೆ ಕಳುಹಿಸಿಕೊಡಲಾಗುವುದು ಎಂದು ಹೇಳಿದರು. ಪಾಲಿಕೆ ವ್ಯಾಪ್ತಿಯಲ್ಲಿ ಬರುವ 28 ಲಕ್ಷ ಮನೆಗಳ ಪೈಕಿ, 14 ಲಕ್ಷ ಮನೆಗಳು ಬಡ ವರ್ಗವಿರುವ ಪ್ರದೇಶ, ಜನ ಸಂಖ್ಯೆ ಹೆಚ್ಚಿರುವ ಪ್ರದೇಶ ಹಾಗೂ ತಗ್ಗು ಪ್ರದೇಶಗಳಲ್ಲಿರುವ 14 ಲಕ್ಷ ಮನೆಗಳಿಗೆ 15 ದಿನಕ್ಕೊಮ್ಮೆ ಭೇಟಿ ನೀಡಿ ಲಾರ್ವಾ ಉತ್ಪತ್ತಿ ತಾಣಗಳು ಹಾಗೂ ನಾಗರೀಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡಲಾಗುವುದು. ಮನೆ-ಮನೆ ಸಮೀಕ್ಷೆ ಮಾಡುವ ಸಲುವಾಗಿ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಎನ್‌ಎಸ್‌ಎಸ್ ಸ್ವಯಂ ಸೇವಕರನ್ನು ನಿಯೋಜಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ ಎಂದರು.

### ಡೆಂಘೀ ಪ್ರಕರಣಗಳ ವಿವರ ಜನವರಿ ಯಿಂದ ಈ ವರೆಗೆ

| ವಲಯ | ಪ್ರಕರಣ |
|---|---|
| ಬೊಮ್ಮನಹಳ್ಳಿ | 122 |
| ಪೂರ್ವ | 218 |
| ಮಹದೇವಪುರ | 386 |
| ಆರ್‌ಆರ್ ನಗರ | 75 |
| ದಕ್ಷಿಣ | 190 |
| ಪಶ್ಚಿಮ | 141 |
| ಯಲಹಂಕ | 90 |
| ದಾಸರಹಳ್ಳಿ | 08 |
| ಒಟ್ಟು | 1230 ಪ್ರಕರಣ |

### ಡೆಂಘೀ ಪ್ರಕರಣಗಳ ವಿವರ

| ವರ್ಷ | ಪ್ರಕರಣಗಳು |
|---|---|
| 2019 | 9434 |
| 2020 | 1127 |
| 2021 | 1629 |
| 2022 | 2335 |
| 2023 | 11136 (2023 ಜನವರಿಯಿಂದ ಜೂನ್ ವರೆಗೆ - 732 ಪ್ರಕರಣ) |
| 2024 | 1230 (2024 ಜನವರಿಯಿಂದ ಜೂನ್ ವರೆಗೆ) |

# ಆಯೋಗದ ವರದಿ ಯಥಾವತ್ತಾಗಿ ಜಾರಿಗೊಳಿಸಲು ಆಗ್ರಹ

**ಬೆಂಗಳೂರು:** ರಾಜ್ಯ ಸರಕಾರಿ ನೌಕರರ ಜೀವನ ನಿರ್ವಹಣೆ ಕಷ್ಟವಾಗಿರುವುದರಿಂದ ಶೀಘ್ರ ರಾಜ್ಯ 7 ನೇ ವೇತನ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ರಾಜ್ಯ ಸರಕಾರಿ ನೌಕರರ ಸಂಘ ಒತ್ತಾಯಿಸಿದೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಕ್ಷರಿ ಭೇಟಿ ಮಾಡಿ, ಏಳನೇ ವೇತನ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಜುಲೈ 2022ರಂದೇ 7ನೇ ವೇತನ ಜಾರಿಯಾಗಬೇಕಾಗಿದ್ದು, ಈಗಾಗಲೇ 2ವರ್ಷಗಳು ವಿಳಂಬವಾಗಿದೆ. ಹೀಗಾಗಿ ನೂತನ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ ಹಳೆ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸಲು ರಚಿಸಿರುವ ಸಮಿತಿಯ ವರದಿಯನ್ನು ಪಡೆದು ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ನಿಯೋಗದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಟಿ ಶ್ರೀನಿವಾಸ್, ಹಿರಿಯ ಉಪಾಧ್ಯಕ್ಷ ಎಂ.ವಿ ರುದ್ರಪ್ಪ, ರಾಜ್ಯ ಸಂಘದ ಪದಾಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಡಾ. ಎಲ್. ಭೈರಪ್ಪ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾರವರು ಹಾಗೂ ಸಂಘದ ಪದಾಧಿಕಾರಿಗಳು ಇದ್ದರು.

ಏಳನೇ ವೇತನ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ರಾಜ್ಯ ಸರಕಾರಿ ನೌಕರರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿತು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಕ್ಷರಿ ಸೇರಿದಂತೆ ಹಲವರಿದ್ದರು.

# ನಗರದಲ್ಲಿ ಐದು ದಿನ ಭಾರೀ ಮಳೆ ಸಾಧ್ಯತೆ

**ಬೆಂಗಳೂರು:** ಮುಂಗಾರು ಮಳೆ ರಾಜ್ಯದ ಅನೇಕ ಭಾಗಗಳಲ್ಲಿ ಚುರುಕು ಪಡೆದಿದ್ದು, ಮುಂದಿನ ಜುಲೈ 1ರವರೆಗೆ ನಗರದಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನಗರದಲ್ಲಿ ಕೆಲ ದಿನಗಳಿಂದ ಅಲ್ಲಲ್ಲಿ ಹಗುರವಾಗಿ ಮಳೆಯಾಗುತ್ತಿದ್ದು, ಒಂದೆರಡು ಕಡೆಗಳಲ್ಲಿ ಜೋರು ಮಳೆಯಾಗಿದೆ. ಮಳೆ ಜತೆಗೆ ಸೆಖೆಯ ಹಾಗೂ ಕನಿಷ್ಠ ತಾಪಮಾನದಲ್ಲಿ ತುಸು ಬದಲಾವಣೆ ಆಗಿದ್ದರಿಂದ ಬೆಳಗ್ಗೆ ಚಳಿಯ ವಾತಾವರಣ ಆಗುತ್ತಿದೆ. ಮುಂದಿನ ಒಂದು ವಾರ ಕಾಲ ನಗರದಲ್ಲಿ ಗುಡುಗು ಸಹಿತ ವ್ಯಾಪಕ ಮಳೆ ಅಬ್ಬರಿಸಲಿದೆ ಎಂದು ಅಂದಾಜಿಸಲಾಗಿದೆ. ಬುಧವಾರ ಬೆಳಗ್ಗೆಯಿಂದಲೇ ಮಬ್ಬು ಕವಿದ ವಾತಾವರಣ, ತಾಪಮಾನದಲ್ಲಿ ಇಳಿಕೆ ಕಂಡು ಬಂದಿದ್ದು, ಇದೇ ವಾತಾವರಣ ಮುಂದುವರಿಯಲಿದೆ. ಗುಡುಗು ಸಹಿತ ಹಗುರದಿಂದ ಸಾಧಾರಣ ಆಗಾಗ ಜೋರು ಮಳೆ ಬರಲಿದೆ. ಹೀಗಾಗಿ ನಗರದಲ್ಲಿ ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ಕಂಡು ಬರಲಿದೆ.

ಬೆಂಗಳೂರಿನಲ್ಲೂ ಮುಂದಿನ ಮೂರು ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಇದೆ. ಜು.1ರವರೆಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಮುಂಜಾನೆಯಿಂದಲೇ ನಗರದ ಕೆಲವೆಡೆ ಮಳೆಯಾಗುತ್ತಿದೆ. ಮುಂದಿನ ಮೂರು ದಿನಗಳ ಕಾಲ ಇದೇ ರೀತಿ ಇರಲಿದೆ ಎಂದು ರಾಜ್ಯ ಹವಾಮಾನ ಇಲಾಖೆಯು ಮಾಹಿತಿ ನೀಡಿದೆ.

### ಆರೆಂಜ್, ಹಳದಿ ಅಲರ್ಟ್

ರಾಜ್ಯ ಹವಾಮಾನ ಇಲಾಖೆಯು ಕರಾವಳಿ ಮತ್ತು ದಕ್ಷಿಣ ಒಳನಾಡು ಪ್ರದೇಶಗಳಿಗೆ ಆರೆಂಜ್ ಅಲರ್ಟ್ ಮತ್ತು ಉತ್ತರ ಒಳನಾಡಿನ ಪ್ರದೇಶಗಳಲ್ಲಿ ಹಳದಿ ಅಲರ್ಟ್ ಘೋಷಿಸಿದೆ. ದಕ್ಷಿಣ ಕನ್ನಡ, ಉಡುಪಿ, ಕೊಡಗು, ಶಿವಮೊಗ್ಗ, ಮಂಡ್ಯ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಕೋಟೆ, ಗದಗ, ಬೀದರ್, ರಾಯಚೂರು, ಬಳ್ಳಾರಿ ಮತ್ತು ಯಾದಗಿರಿಯಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿಗೆ ಸ್ಪಂದಿಸಿದ ಡಿಸಿಎಂ

# ಕಾವೇರಿ ಮಾಲಿನ್ಯದ ಬಗ್ಗೆ ವರದಿ ನೀಡಲು ಡಿಕೆ ಸೂಚನೆ

**ಬೆಂಗಳೂರು:** ನಾಡಿನ ಜೀವನದಿ ಕಾವೇರಿಗೆ ತ್ಯಾಜ್ಯನೀರು ಸೇರ್ಪಡೆಯಾಗಿ ಕಲುಷಿತಗೊಳ್ಳುತ್ತಿದ್ದು ಮಾಲಿನ್ಯ ತಡೆಗೆ ಕ್ರಮಕೈಗೊಳ್ಳಬೇಕೆಂಬ ಶಾಸಕ ದಿನೇಶ್ ಗೂಳಿಗೌಡ ಮನವಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕೂಡಲೇ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿದ್ದಾರೆ.

ಕಾವೇರಿಗೆ ತ್ಯಾಜ್ಯನೀರು ಸೇರ್ಪಡೆಯಾಗಿ ಮಾಲಿನ್ಯ ತಡೆಗೆ ಮುಖ್ಯಮಂತ್ರಿ ಸಿದ್ದರಾ ಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ ಎಂ.ಬಿ.ಪಾಟೀಲ ಹಾಗೂ ಈಶ್ವರ್ ಖಂಡ್ರೆಗೆ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದರು. ಸರ್ಕಾರ ತ್ವರಿತವಾಗಿ ಸ್ಪಂದಿಸುವ ಮೂಲಕ ಮಾಲಿನ್ಯಗೊಳ್ಳುತ್ತಿರುವ ಕಾವೇರಿ ನದಿಯ ಶುದ್ಧೀಕರಣಕ್ಕೆ ಕಾರ್ಯಪ್ರವೃತ್ತರಾಗಿದ್ದು, ಸಚಿವ ಎಂ.ಬಿ.ಪಾಟೀಲ, ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಂದ ಕೂಡ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ.

ಕಾವೇರಿ ಕರ್ನಾಟಕದ ಜೀವನದಿ ಯಾಗಿದೆ. ಕುಡಿಯುವ ನೀರು ಪೂರೈಕೆ ಮಾತ್ರವಲ್ಲದೇ ಸಾವಿರಾರು ಎಕರೆ ಕೃಷಿಭೂಮಿಯನ್ನು ಹಸನು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಕೂಡಲೇ ತಾಂತ್ರಿಕ ಪರಿಣಿತರ ತನಿಖಾ ತಂಡವನ್ನು ರಚಿಸಬೇಕು ಎಂದು ಒತ್ತಾಯ ಮಾಡಿದ್ದರು.

### ಮನವಿಯಲ್ಲೇನಿತ್ತು?

ಕಾವೇರಿ ನದಿಯಿಂದ ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗಾಗಿ 19 ಟಿಎಂಸಿ ನೀರನ್ನು ಬಳಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದ್ದು, ಪ್ರಸ್ತುತ ಬೆಂಗಳೂರು ಜಲಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆಯ ಮೂಲಕ 1440 ಎಂಎಲ್‌ಡಿಯಷ್ಟು ನೀರನ್ನು ನಗರಕ್ಕೆ ಪೂರೈಸುತ್ತಿದೆ. ಬೆಂಗಳೂರು ನಗರ ಮಾತ್ರವಲ್ಲದೆ ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ ಜಿಲ್ಲೆಯ ಜನತೆಗೆ ಕುಡಿಯುವ ನೀರಿನ ದಾಹವನ್ನು ನೀಗಿಸುತ್ತಿರುವ ಕಾವೇರಿ ನದಿ ನೀರು ಇಂದು ಹಾಲಾಹಲವಾಗಿ ಮಾರ್ಪಡುತ್ತಿದೆ. ಒಳಚರಂಡಿ ನೀರು ಹಾಗೂ ಹಲವು ಕೈಗಾರಿಕೆಗಳ ತ್ಯಾಜ್ಯದಿಂದ ನದಿಯು ನೈಸರ್ಗಿಕ ಗುಣ ಕಳೆದುಕೊಳ್ಳುತ್ತಿದೆ. ಸಿಪಿಸಿಬಿ ವರದಿ ಪ್ರಕಾರ, ಪ್ರತಿ ಲೀಟರ್ ಶುದ್ಧ ನೀರಿನಲ್ಲಿ 1 ಎಂಜಿಗಿಂತ ಕಡಿಮೆ ಬಯೋಕೆಮಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಒಡಿ) ಪ್ರಮಾಣ ಇರಬೇಕು. ಆದರೆ, ಕಾವೇರಿ ನದಿಯಲ್ಲಿ 6 ಎಂಜಿಯಷ್ಟಿದೆ ಎಂಬುದನ್ನು ತಿಳಿಸಿದೆ. ಇದು ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರಲಿದೆ. ಆದ್ದರಿಂದ ಈ ಬಗ್ಗೆ ತನಿಖಾ ತಂಡ ರಚನೆಗೆ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದರು.

# ಜುಲೈ 2ನೇ ವಾರ ಅನಿಲ ವಿದ್ಯುತ್ ಘಟಕ ಲೋಕಾರ್ಪಣೆ

**ಬೆಂಗಳೂರು:** ಯಲಹಂಕ ಸಮೀಪದಲ್ಲಿ ಸ್ಥಾಪನೆಯಾಗಿರುವ ರಾಜ್ಯದಲ್ಲೇ ಪ್ರಪ್ರಥಮ ಅನಿಲ ಆಧಾರಿತ 370 ಮೆಗಾ ವ್ಯಾಟ್ ಸಾಮರ್ಥ್ಯದ ಯಲಹಂಕ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರ ಜುಲೈ ಎರಡನೇ ವಾರದಲ್ಲಿ ಉದ್ಘಾಟನೆಯಾಗಲಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಸಭೆಯಲ್ಲಿ ಯೋಜನೆಯ ಬಗ್ಗೆ ಮಾಹಿತಿ ಪಡೆದ ಬಳಿಕ ಮಾತನಾಡಿ, ಸರಕಾರ ಮತ್ತು ಕೆಪಿಸಿಎಲ್ ಪಾಲಿಗೆ ಮಹತ್ವದ ಯೋಜನೆಯಾಗಿದೆ. ಅದರಲ್ಲೂ ಸರಕಾರದ ಸಂಸ್ಥೆಯೊಂದು ರಾಜ್ಯದಲ್ಲೇ ಮೊದಲ ಬಾರಿ ಅನಿಲ ಆಧಾರಿತ ವಿದ್ಯುತ್ ಉತ್ಪಾದನೆ ಮಾಡುತ್ತಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಹೀಗಾಗಿ ತ್ವರಿತವಾಗಿ ಎಲ್ಲಾ ಸಿದ್ಧತಾ ಕಾರ್ಯಗಳನ್ನು ಪೂರ್ಣಗೊಳಿಸಿ ಜುಲೈ 2ನೇ ವಾರದಲ್ಲಿ ಉದ್ಘಾಟನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಘಟಕವನ್ನು ಉದ್ಘಾಟಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

## ಸಮಾಚಾರ ಸಣ್ಣದಲ್ಲ

### ಸಿದ್ದರಾಮಯ್ಯ ದೆಹಲಿಗೆ ಇಂದು

← ಮೊದಲಪುಟದಿಂದ

ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗುವ ಸಾಧ್ಯತೆಯಿದ್ದು, ಈ ವೇಳೆ ರಾಜ್ಯಕ್ಕೆ ಬರಬೇಕಿರುವ ಬಾಕಿ ಅನುದಾನವನ್ನು ಆದಷ್ಟು ಶೀಘ್ರವೇ ಪಾವತಿಸುವಂತೆ ಮನವಿ ಮಾಡುವ ಸಾಧ್ಯತೆಯಿದೆ. ಮೂಲಗಳ ಪ್ರಕಾರ, ಈವರೆಗೆ ಯಾವೆಲ್ಲ ಸಚಿವರನ್ನು ಸಿದ್ದರಾಮಯ್ಯ ಅವರು ಭೇಟಿಯಾಗಲಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟತೆಯಿಲ್ಲ. ಆದರೆ ಗುರುವಾರ ಹಾಗೂ ಶುಕ್ರವಾರ ಇಡೀ ದಿನ ಕೇಂದ್ರದ ವಿವಿಧ ಸಚಿವರನ್ನು ಭೇಟಿಯಾಗಿ ರಾಜ್ಯದ ವಿವಿಧ ಕಾಮಗಾರಿಗಳ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ.

### ಲೋಕಸಭೆ ಅಧ್ಯಕ್ಷರಾಗಿ ಓಂ ಬಿರ್ಲಾ ಪುನರಾಯ್ಕೆ

← ಮೊದಲಪುಟದಿಂದ

ಬಳಿಕ ಪ್ರಧಾನಿ ಮೋದಿ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ನೂತನ ಸ್ಪೀಕರ್ ಓಂ ಬಿರ್ಲಾ ಅವರನ್ನು ಸಭಾಧ್ಯಕ್ಷರ ಪೀಠಕ್ಕೆ ಕರೆದೊಯ್ದು ಕೂರಿಸಿದರು. ಸಭಾಪತಿ ಓಂ ಬಿರ್ಲಾಗೆ ಅಭಿನಂದಿಸುವ ಮುನ್ನ ಪ್ರಧಾನಿ ಮೋದಿ ಹಾಗೂ ರಾಹುಲ್ ಗಾಂಧಿ ಹಸ್ತಲಾಘವ ಮಾಡಿ ಪರಸ್ಪರ ಶುಭಾಶಯ ವಿನಿಮಯ ಮಾಡಿದ್ದು ವಿಶೇಷವಾಗಿತ್ತು.

ವಿರಾಮ
ಪ್ರತಿ ಭಾನುವಾರ

ಆತಂಕದಲ್ಲೇ ಜೀವನ ಸಾಗಿಸುತ್ತಿರುವ 50ಕ್ಕೂ ಅಧಿಕ ಕುಟುಂಬಗಳು | ದೋಣಿಯೇ ಸಂಚಾರಕ್ಕೆ ಆಸರೆ

# ಪಾವೂರು ದ್ವೀಪ ನುಂಗುತ್ತಿರುವ ಮರಳು ದಂಧೆ

**ಮಂಗಳೂರು:** ನೇತ್ರಾವತಿ ನದಿಯ ಭಾಗದ, ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದ್ವೀಪಪ್ರದೇಶವಾದ ಪಾವೂರು ಉಳಿಯ ಅಕ್ರಮ ಮರಳುದಂಧೆಗೆ ಬಲಿಯಾಗುತ್ತಿರುವುದು ಮಾತ್ರವಲ್ಲ, ಈ ಪ್ರದೇಶದಲ್ಲಿ ಮೂರು ತಲೆಮಾರುಗಳಿಂದ ವಾಸವಿರುವ 50ಕ್ಕೂ ಅಧಿಕ ಕುಟುಂಬಗಳು ಭಯ, ಆತಂಕದಲ್ಲೇ ಜೀವನ ಸಾಗಿಸುವಂತಾಗಿದೆ.

'ದ್ವೀಪ ಉಳಿಸಿ, ಜನತೆಯ ಬದುಕು ರಕ್ಷಿಸಿ' ಎಂಬ ಧ್ಯೇಯವಾಕ್ಯದೊಂದಿಗೆ ಕ್ಯಾಥೋಲಿಕ್ ಸಭಾ ಮಂಗಳೂರು ಪ್ರದೇಶ್, ಸಮಾನ ಮನಸ್ಕ ಸಂಘಟನೆಗಳ ವೇದಿಕೆಯ ನಿಯೋಗ ಮಾಧ್ಯಮ ಪ್ರತಿನಿಧಿಗಳ ಜತೆ ಇತ್ತೀಚೆಗೆ ಸ್ಥಳಕ್ಕೆ ಭೇಟಿ ನೀಡಿದಾಗ ಪ್ರಕೃತಿ ಮೇಲೆ ನಡೆಯುತ್ತಿರುವ ದೌರ್ಜನ್ಯ ಎದ್ದು ಕಾಣುತ್ತಿತ್ತು.

ಪಾವೂರು ಉಳಿಯ ಪ್ರದೇಶಕ್ಕೆ ಅಡ್ಯಾರು ಮೂಲಕ ದೋಣಿಯಲ್ಲಿ ಸಾಗಿದ ನಿಯೋಗವು ದೋಣಿ ಮೂಲಕ ದ್ವೀಪದ ಸುತ್ತ ವೀಕ್ಷಿಸುತ್ತಿದ್ದ ವೇಳೆ ಕೆಲ ವರ್ಷಗಳ ಹಿಂದೆ ಇದ್ದ ದ್ವೀಪಪ್ರದೇಶ ಸಾಕಷ್ಟು ಭೂಭಾಗ ಮರಳುಗಾರಿಕೆಯಿಂದ ಮಾಯವಾಗಿರುವುದು ಕಂಡು ಬಂದಿದೆ. ಮಾತ್ರವಲ್ಲದೆ, ಹಾರೆಯ ಮೂಲಕ ದ್ವೀಪದ ಭಾಗವವನ್ನು ಕೊರೆದು ಮರಳು ತೆಗೆಯುತ್ತಿರುವ ಕುರುಹುಗಳೂ ಕಂಡು ಬಂದಿವೆ. ದೋಣಿಯೊಂದು ಹಗಲಲ್ಲೇ ಮರಳುಗಾರಿಕೆಗೆ ಆಗಮಿಸಿತ್ತು. ನೇತ್ರಾವತಿ ನದಿಯ ವಳಚ್ಚಿಲ್ ಪ್ರದೇಶದ ಧಕ್ಕೆಯಲ್ಲಿ ಕ್ರೇನ್ ಮೂಲಕ ವಾಹನಗಳಿಗೆ ಮರಳು ತುಂಬಿಸುತ್ತಿದ್ದ ದೃಶ್ಯವೂ ಕಂಡುಬಂದಿದೆ. ಮಾತ್ರವಲ್ಲದೆ ದ್ವೀಪದ ಸುತ್ತಲ್ಲಿನ ಪ್ರದೇಶಗಳಲ್ಲಿ ಅಲ್ಲಲ್ಲಿ ಮರಳು ಸಂಗ್ರಹಿಸಿರುವುದೂ ಕಂಡು ಬಂದಿದ್ದು, ಪ್ರಾಕೃತಿಕವಾಗಿ ಸುಂದರವಾದ ತಾಣವೊಂದು ಅಕ್ರಮ ಮರಳುಗಾರಿಕೆಗೆ ನಾಶವಾಗುತ್ತಿರುವ ಬಗ್ಗೆ ನಿಯೋಗದ ಪ್ರತಿನಿಧಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ದೋಣಿಯೇ ಸಂಚಾರಕ್ಕೆ ಆಸರೆ:** ಪಾವೂರು ಉಳಿಯ ಪ್ರದೇಶದ ಜನರು ನಗರದ ಸಂಪರ್ಕ ಬೆಳೆಸಬೇಕಾದರೆ, ಶಾಲಾ ಕಾಲೇಜು, ಉದ್ಯೋಗ, ಆಸ್ಪತ್ರೆಗಳಿಗೆ ತೆರಳಬೇಕಾದರೆ, ನೇತ್ರಾವತಿ ನದಿಯಲ್ಲಿ ದೋಣಿ ಮೂಲಕವೇ ಸಾಗಬೇಕು. ಮಳೆಗಾಲ ಬಂತೆಂದರೆ ಇಲ್ಲಿಯ ಜನರ ಸಂಚಾರ ವ್ಯವಸ್ಥೆ ಅತ್ಯಂತ ಅಪಾಯಕಾರಿಯಾಗಿರುತ್ತದೆ. ಸದ್ಯ ಸ್ಥಳೀಯರನ್ನು ಬೆಳಗ್ಗೆ 7ರಿಂದ ರಾತ್ರಿ 7 ಗಂಟೆಯವರೆಗೆ ದ್ವೀಪದಿಂದ ಅಡ್ಯಾರು ದಡಕ್ಕೆ ಸಾಗಿಸಲು ಒಂದು ಮೋಟಾರು ದೋಣಿ ಹಾಗೂ 2 ಸಾಮಾನ್ಯ ಹಾಯಿದೋಣಿಗಳಿವೆ. ದೋಣಿಯಲ್ಲಿ ಆಗಮನ ಹಾಗೂ ನಿರ್ಗಮನದ ಸಂಚಾರಕ್ಕೆ ಒಬ್ಬರಿಗೆ 30 ರು. ವ್ಯಯಿಸಬೇಕಾಗುತ್ತದೆ. ಹಿಂದೆ ಬೇಸಿಗೆಯ ಸಂದರ್ಭ ನದಿದಾಟಲು ಮರಳಿನ ಗೋಣಿಚೀಲಗಳ ಸೇತುವೆಯನ್ನು ಬಳಸುತ್ತಿದ್ದ ಸ್ಥಳೀಯರು ಕೆಲ ವರ್ಷಗಳಿಂದೀಚೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಇಲ್ಲಿ ಹಗ್ಗ, ಹಲಗೆ ಹಾಗೂ ಕಬ್ಬಿಣದ ಸಲಾಕೆಗಳನ್ನು ಉಪಯೋಗಿಸಿ ಸಣ್ಣ ಸೇತುವೆಯ ನಿರ್ಮಿಸಿಕೊಳ್ಳುತ್ತಿದ್ದಾರೆ.

**ಮರೀಚಿಕೆಯಾದ ಸೇತುವೆಯ ಭರವಸೆ:** ಪ್ರತಿ ಬಾರಿಯೂ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಭೇಟಿನೀಡಿದಾಗ ಶಾಶ್ವತ ಸೇತುವೆಯ ಭರವಸೆ ನೀಡುತ್ತಾರೆ. ಕಳೆದ ದಶಕದಿಂದೀಚೆಗೆ ಈ ಸೇತುವೆಯ ಕನಸು ನನಸಾಗಿಲ್ಲ. ಈ ಬಾರಿ ವಿಧಾನಸಭೆಯ ಸ್ಪೀಕರ್ ಆಗಿರುವ ಯು.ಟಿ.ಖಾದರ್ ನಮ್ಮಲ್ಲಿಗೆ ಭೇಟಿ ನೀಡಿದ್ದ ವೇಳೆ ಶಾಶ್ವತ ಸೇತುವೆಯ ಭರವಸೆ ನೀಡಿದ್ದಾರೆ ಎನ್ನುತ್ತಾರೆ ಸ್ಥಳೀಯರು.

ನಿಯೋಗದಲ್ಲಿ ಸಮಾನಮನಸ್ಕ ಸಂಘಟನೆಗಳ ಪ್ರಮುಖರಾದ ಮಂಜುಳಾ ನಾಯಕ್, ಸ್ಟ್ಯಾನಿ ಲೋಬೋ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ. ಶೇಖರ್, ಜಾನ್ ಲಸ್ರಾದೋ, ವಿನೋದ್ ಪಿಂಟೋ ತಾಕೊಡೆ, ಸುನಿಲ್ ಕುಮಾರ್ ಬಜಾಲ್, ಸಂತೋಷ್ ಬಜಾಲ್, ಮುನ್ನೂರು ಗ್ರಾ.ಪಂ.ನ ಮಾಜಿ ಅಧ್ಯಕ್ಷ ವಿಲ್ಪ್ರೆಡ್, ಟೋಬಿ ಪಿಂಟೋ, ಸ್ಟ್ಯಾನಿ ಡಿಕುನ್ನಾ, ಇನ್ನಿತರರು ಹಾಜರಿದ್ದರು. ನದಿಯಲ್ಲಿ ಮರಳುಗಾರಿಕೆಯೇ ಮಾಡುವಂತಿಲ್ಲ. ಅದರಲ್ಲಿಯೂ ಮೀನುಗಾರಿಕೆಗೂ ನಿಷೇಧವಿರುವಾಗ ಮಳೆಗಾಲದಲ್ಲಿಯೂ ಈ ರೀತಿ ಪಾವೂರು ಉಳಿಯ ಪ್ರದೇಶದಲ್ಲಿ ಅಕ್ರಮವಾಗಿ ಮರಳುಗಾರಿಕೆ ನಡೆಸುತ್ತಿರುವುದು ನಿಜಕ್ಕೂ ಇದು ಪರಿಸರ ಸಮತೋಲನಕ್ಕೆ ಮಾರಕ.

> ಇಲ್ಲಿ ದ್ವೀಪದ ಮರಳನ್ನು ಹಾರೆಯಿಂದ ಅಗೆದು ಬರಿದು ಮಾಡಿರುವುದು ಕಂಡಿದ್ದೇವೆ. ಈ ರೀತಿಯ ಪ್ರಕೃತಿಯ ವಿರುದ್ಧ ದೌರ್ಜನ್ಯದ ಜತೆ ಇಲ್ಲಿ ನೂರಾರು ವರ್ಷ ಗಳಿಂದ ಬದುಕು ಕಟ್ಟಿಕೊಂಡಿರುವ ಜನರ ಕಣ್ಣೀರು ಒರೆಸುವವರು ಯಾರು ? ಎಂಬ ಆತಂಕ ನಮ್ಮನ್ನೂ ಕಾಡಿದೆ. ಇಲ್ಲಿನ ಜನರಿಗೆ ಶಾಶ್ವತ ಪರಿಹಾರ ದೊರೆಯುವವರೆಗೆ ಹೋರಾಟ ಮಾಡಲಿದ್ದೇವೆ.
> –ಆಲ್ವಿನ್ ಡಿಸೋಜಾ, ಅಧ್ಯಕ್ಷರು, ಕೆಥೋಲಿಕ್ ಸಭಾ ಮಂಗಳೂರು.

> ಈ ದ್ವೀಪದಲ್ಲಿ, ಹಣದಾಸೆಗೆ ನಡೆಯುತ್ತಿರುವ ಕಳ್ಳ ದಂಧೆಯಿಂದ ಜನರ ಬದುಕು ನೀರು ಪಾಲಾಗುವ ಆತಂಕವಿದೆ. ಪುಕಟ್ಟೆಯಾಗಿ ಸಿಗುವ ಪ್ರಕೃತಿಯ ಮರಳನ್ನು ಅಗೆದು ಸರಕಾರದ ರಾಜಧನವನ್ನೂ ವಂಚಿಸಿ ನಡೆಯುತ್ತಿರುವ ಈ ಕೃತ್ಯದ ವಿರುದ್ಧ ನಮ್ಮ ಹೋರಾಟ ನಡೆಯಲಿದೆ.
> ರಾಯ್ ಕ್ಯಾಸ್ಟಲಿನೊ, ಅಧ್ಯಕ್ಷರು, ಮದರ್ ತೆರೇಸಾ ವೇದಿಕೆ.

### ಸ್ಥಳೀಯರ ಆಗ್ರಹ ಏನು?

'ಪಾವೂರು ಉಳಿಯ ದ್ವೀಪದ ಜನರನ್ನು ಜೀವಂತ ಕೊಲ್ಲುವ ಹುನ್ನಾರ ಅಕ್ರಮ ಮರಳುಗಾರಿಕೆಯಿಂದ ಕಳೆದ ಹಲವು ವರ್ಷಗಳಿಂದ ನಡೆಯುತ್ತಿದೆ. ಇಲ್ಲಿನ ಜನರ ಜೀವಕ್ಕೆ ಅಪಾಯ ತಂದಿರುವ ಅಕ್ರಮ ಮರಳು ದಂಧೆಕೋರರ ವಿರುದ್ಧ ಕೊಲೆಯ ಆರೋಪ ಹೊರಿಸಿ ಶಿಕ್ಷೆ ಆಗಬೇಕಾಗಿದೆ. ಎಷ್ಟೋ ವರ್ಷಗಳಿಂದ ಇಲ್ಲಿನ ಈ ಸಮಸ್ಯೆ ಬಗ್ಗೆ ಜಿಲ್ಲಾಡಳಿತ ಸೇರಿದಂತೆ ಸಂಬಂಧಪಟ್ಟವರಿಗೆ ಮನವಿ ನೀಡಲಾಗುತ್ತಿದ್ದರೂ ಸ್ಪಂದನೆ ಸಿಕ್ಕಿಲ್ಲ. 'ಅಕ್ರಮ ಮರಳು ದಂಧೆಕೋರರ ಜತೆ ಹೋರಾಟ ಮಾಡಿಕೊಂಡು ಹಲವು ವರ್ಷಗಳಿಂದ ನಾವು ಜೀವನ ಸಾಗಿಸುತ್ತಾ ಬಂದಿದ್ದೇವೆ. ಸುಮಾರು 100 ಎಕರೆಯಷ್ಟಿದ್ದ ದ್ವೀಪ ಪ್ರದೇಶ ಅಕ್ರಮ ಮರಳು ದಂಧೆಯಿಂದಾಗಿ ಪ್ರಸಕ್ತ ಅರ್ಧದಷ್ಟು ನೀರು ಪಾಲಾಗಿದೆ. ಈಗ ದೊಡ್ಡ ಪ್ರಮಾಣದಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ. ಸಾವಿರಾರು ಸಂಖ್ಯೆಯಲ್ಲಿ ಮರಳುಗಾರಿಕೆಯ ಕಾರ್ಮಿಕರು ಬೆರಳೆಣಿಕೆಯಷ್ಟಿರುವ ಜನರ ಜತೆ ಸಂಘರ್ಷ, ಬೆದರಿಕೆ ಒಡ್ಡುವ ಕಾರ್ಯ ನಡೆಸುತ್ತಿದ್ದಾರೆ. ನಮ್ಮ ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕು. ಭಯ ರಹಿತ ಜೀವನ ನಡೆಸಲು ನಮಗೆ ಅವಕಾಶ ನೀಡಬೇಕುಎಂಬುದು ಸ್ಥಳೀಯರ ಮನವಿ.

## ಲೈಂಗಿಕ ದೌರ್ಜನ್ಯ ಆರೋಪದ ವಿಡಿಯೊ ಸೃಷ್ಟಿ

**ಚಿಕ್ಕಮಗಳೂರು :** ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ ವಿಚಾರವಾಗಿ ಬಾಲಕರಿಂದ ಸುಳ್ಳು ವಿಡಿಯೊ ಸೃಷ್ಟಿಸಿದ ಆರೋಪದ ಮೇಲೆ ತಾಲೂಕಿನ ವಿದ್ಯಾರಣ್ಯಪುರ ಗ್ರಾಮ ಪಂಚಾಯಿತಿ ಸದಸ್ಯ ಶಬರೀಶ್ ಮತ್ತು ಸೂರ್ಯ ಎಂಬುವರ ವಿರುದ್ಧ ತಾಲೂಕು ಶಿಶು ಅಭಿವೃದ್ಧಿ ಅಧಿಕಾರಿ ರಾಘವೇಂದ್ರ, ಎನ್.ಜಿ. ಶೃಂಗೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು, ಆರೋಪಿ ಶಬರೀಶ್‌ನನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಸೂರ್ಯ ಬಂಧನಕ್ಕಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಬಾಲಕರ ಹೇಳಿಕೆ ಇರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಈ ವಿಡಿಯೊ ಗಮನಿಸಿದ್ದ ಶೃಂಗೇರಿ ಠಾಣೆಯ ಸಬ್ ಇನ್ಸ್‌ಪೆಕ್ಟರ್, ಬಾಲಕರೊಂದಿಗೆ ಸಮಾಲೋಚನೆ ನಡೆಸಿ ಅವರ ಹೇಳಿಕೆ ಪಡೆದು ದೂರು ನೀಡುವಂತೆ ಶಿಶು ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದ್ದರು. ಆರೋಪಿಗಳು ತಮ್ಮನ್ನು ಬೆದರಿಸಿ, ಮದ್ಯ ಕುಡಿಸಿ, ಒತ್ತಾಯಪೂರ್ವಕವಾಗಿ ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದಾರೆ ಎಂದು ಬಾಲಕರು ಸಮಾಲೋಚನೆಯಲ್ಲಿ ಹೇಳಿದ್ದಾರೆ ಎಂದು ಶಿಶು ಅಭಿವೃದ್ಧಿ ಅಧಿಕಾರಿ ವಿವರಿಸಿದ್ದಾರೆ.

**ನಗರಸಭಾ ಕಾರ್ಯಾಲಯ, ಹೊಸಕೋಟೆ**
ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ದೂರವಾಣಿ:–27931221, ಸಹಾಯವಾಣಿ: 27931759
Email:-itstaff.ulb.hosakote@yahoo.com Web:- site.www.hosakotecity.mrc.gov.in
ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/10/2024–25 ದಿನಾಂಕ: 26.06.2024
"ಟೆಂಡರ್ ಪ್ರಕಟಣೆ" (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2024–25ನೇ ಸಾಲಿನ ನಗರಸಭಾ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಎರಡರ ಪ್ರಕಾರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

| ಕ್ರ. ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ. ರೂ.ಗಳಲ್ಲಿ |
|---|---|---|---|
| 01 | DMA/2023-24/WS/WORK_INDENT 17641/CALL-2 | 35.14 | 70,280/– |
| 02 | DMA/2023-24/WS/WORK_INDENT 17642/CALL-2 | 46.88 | 97,320/– |

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **12/07/2024ರ ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **15/07/2024 ರ ಬೆಳಿಗ್ಗೆ 11:00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **18/07/2024ರ ಬೆಳಗ್ಗೆ 11:00 ಗಂಟೆಗೆ** ನಿಗದಿಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/– ಪೌರಾಯುಕ್ತರು
ನಗರಸಭೆ, ಹೊಸಕೋಟೆ.
ವಾಸಾಸಂಇ/ವಾ.ಪ್ರ/583/ಶಿರಡಿ ಸಾಯಿ/2024–25

ಮೂರು ಗಂಟೆ ಕಾರ್ಯಾಚರಣೆ ಬಳಿಕ ಮೃತದೇಹಗಳು ಪತ್ತೆ

# ಗೋಡೆ ಕುಸಿದು ನಾಲ್ವರ ದುರ್ಮರಣ

**ಮಂಗಳೂರು:** ಕರಾವಳಿಯಲ್ಲಿ ಮಳೆ ಅಬ್ಬರ ಜೋರಾಗಿದ್ದು ಮಳೆ ಅಬ್ಬರಕ್ಕೆ ಕಂಪೌಂಡ್ ಒಂದು ಮನೆಯ ಮೇಲೆ ಕುಸಿದು ಬಿದ್ದ ಕಾರಣ ಇಬ್ಬರು ಮಕ್ಕಳು ಸಹಿತ ದಂಪತಿ ಸಾವನ್ನಪ್ಪಿದ ಘಟನೆ ಉಳ್ಳಾಲ ಪೊಲೀಸ್ ಠಾಣಾ ವ್ಯಾಪ್ತಿಯ ಮುನ್ನೂರು ಗ್ರಾಮದ ಕುತ್ತಾರು ಮದನಿ ನಗರ ಎಂಬಲ್ಲಿ ನಡೆದಿದೆ.

ಮೃತರನ್ನು ಯಾಸಿರ್(45),ಅವರ ಪತ್ನಿ ಮರಿಯಮ್ಮ(40) ಮಕ್ಕಳಾದ ರಿಯಾನ ಮತ್ತು ರಿಫಾನ ಎಂದು ಗುರುತಿಸಲಾಗಿದೆ. ಅಬೂಬಕ್ಕರ್ ಎಂಬವರ ಮನೆಯ ಆವರಣ ಗೋಡೆ ಕುಸಿದು ಯಾಸಿರ್ ಅವರ ಮನೆಯ ಗೋಡೆ ಮೇಲೆ ಬಿದ್ದು ದುರಂತ ಸಂಭವಿಸಿದೆ.

ಯಾಸೀರ್ ಮಂಗಳೂರಿನ ಬಂದರಿನಲ್ಲಿ ಮಡ್ಡಿ ಆಯಿಲ್ ಕಾರ್ಯನಿರ್ವಹಿಸುತ್ತಿದ್ದರು. ರಾತ್ರಿ ಊಟ ಮುಗಿಸಿ ಮನೆಯ ಕೋಣೆಯಲ್ಲಿ ಮಲಗಿದ್ದ ಇಬ್ಬರು ಪುತ್ರಿಯರು ಹಾಗೂ ದಂಪತಿ ಬೆಳಗಿನ ಜಾವ ಇಲ್ಲವಾಗಿದ್ದಾರೆ. ರಾತ್ರಿಯಿಡೀ ಮಳೆಯಾದ ಪರಿಣಾಮ ಕಂಪೌಂಡ್ ವಾಲ್ ಹಾಗೂ ಎರಡು ಅಡಕೆ ಮರಗಳು ಯಾಸಿರ್ ಅವರ ಮನೆ ಮೇಲೆ ಉರುಳಿಬಿದ್ದಿದೆ. ರಿಹಾನಾ ಹಾಗೂ ರಿಫಾನ ನಗರದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಶಾಲೆ ಹಾಗೂ ಕಾಲೇಜಿಗೆ ತೆರಳುತ್ತಿದ್ದರು. ಆರು ವರ್ಷಗಳ ಹಿಂದೆ ಮನೆ ಖರೀದಿಸಿದ್ದ ಇವರು ಒಂದು ವರ್ಷ ಮನೆಯನ್ನು ಲೀಸ್‌ಗೆ ನೀಡಿ ಆರು ತಿಂಗಳ ಹಿಂದೆಷ್ಟೇ ಮನೆಗೆ ವಾಪಸ್ಸಾಗಿದ್ದರು. ಎರಡು ವರ್ಷಗಳ ಹಿಂದೆಯೂ ಮನೆ ಮೇಲೆ ಇದೇ ರೀತಿ ಕಂಪೌಂಡ್ ಕುಸಿದಿದ್ದು, ಯಾವುದೇ ಪ್ರಾಣಾಪಾಯವಾಗಿ ರಲಿಲ್ಲ. ಮೂರು ಗಂಟೆಗಳ ಕಾರ್ಯಾಚರಣೆ ಬಳಿಕ ನಾಲ್ಕು ಮೃತದೇಹಗಳನ್ನು ಹೊರತೆಗೆಯಲಾಗಿದೆ.

ಕಂಪೌಂಡ್ ಕುಸಿದುನಾಲ್ವರು ಸಾವನ್ನಪ್ಪಿರುವ ಸ್ಥಳಕ್ಕೆ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರು ಭೇಟಿ ನೀಡಿ, ಅಧಿಕಾರಿಗಳ ಜತೆಗೆ ಚರ್ಚೆ ನಡೆಸಿದರು.

### ಸಂತ್ರಸ್ತ ಕುಟುಂಬಕ್ಕೆ ಪರಿಹಾರ; ಖಾದರ್

ಘಟನಾ ಸ್ಥಳಕ್ಕೆ ಭೇಟಿ ನೀಡಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಬಂಧುಗಳನ್ನು ಕಳೆದುಕೊಂಡ ಸಂತ್ರಸ್ತ ಕುಟುಂಬಕ್ಕೆ ಹಾಗೂ ಆವರಣ ಗೋಡೆ ಬಿದ್ದಿದ್ದಕ್ಕೆ ಪರಿಹಾರ ನೀಡಲು ಅವಕಾಶವಿದೆ. ಶಾಲೆಗೆ ಹೋಗುವ ಮಕ್ಕಳು ಮೃತಪಟ್ಟಿದ್ದಕ್ಕೆ ಪ್ರತ್ಯೇಕವಾಗಿ ತುರ್ತು ಸಂದರ್ಭದಲ್ಲಿ ಪರಿಹಾರ ನೀಡಲಾಗುತ್ತದೆ. ನಿಯಮಗಳನ್ನು ನೋಡಿಕೊಂಡು ಸಂತ್ರಸ್ತರಿಗೆ ಗರಿಷ್ಠ ಪರಿಹಾರ ಕೊಡಿಸಲು ಪ್ರಯತ್ನಿಸಲಾಗುತ್ತದೆ. ಜಿಲ್ಲಾಧಿಕಾರಿಯವರು ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುತ್ತಾರೆ ಎಂದರು.

ಗಂಭೀರವಾಗಿ ಪರಿಗಣಿಸಲು ಮನವಿ ಸಲ್ಲಿಸಿದ ಯುವಕ

# ಕನ್ಯೆಗಾಗಿ ಡಿಸಿ ಮುಂದೆ ಗೋಳಿಟ್ಟ ಕೃಷಿಕ

ಕನಕಗಿರಿ ಪಟ್ಟಣದಲ್ಲಿ ನಡೆದ ಜನಸ್ಪಂದನ ಸಭೆಯಲ್ಲಿ ಯುವಕ ಸಂಗಪ್ಪ ಡಿಸಿಗೆ ಮನವಿ ಸಲ್ಲಿಸಿ, ಮಾತನಾಡಿದನು.

**ಕೊಪ್ಪಳ:** ಕನ್ಯೆ ಹುಡುಕಿ ಸುಸ್ತಾಗಿರೋ ಕೃಷಿಕನೊಬ್ಬ, ಜಿಲ್ಲಾಧಿಕಾರಿ ಮುಂದೆ ತನ್ನ ಸಂಕಷ್ಟ ತೋಡಿಕೊಂಡಿದ್ದು, ರೈತರ ಮಕ್ಕಳಿಗೆ ಹುಡುಗಿ ಹುಡುಕಿಕೊಡಿ ಎಂದು ಮನವಿ ಮಾಡಿದ್ದಾನೆ.

ಕೊಪ್ಪಳ ಜಿಲ್ಲೆ ಕನಕಗಿರಿ ಪಟ್ಟಣದಲ್ಲಿ ಕೊಪ್ಪಳ ಜಿಲ್ಲಾಡಳಿತ ಆಯೋಜಿಸಿದ್ದ ಜನಸ್ಪಂದನ ಸಭೆ ಇಂಥ ಸ್ವಾರಸ್ಯಕರ ಘಟನೆಗೆ ಸಾಕ್ಷಿಯಾಗಿದೆ. ಕನಕಗಿರಿ ಪಟ್ಟಣದ ಗೌಡರ ಓಣಿಯ ನಿವಾಸಿ ಸಂಗಪ್ಪ ಇಂಥ ವಿಶೇಷ ಅಹವಾಲು ಸಲ್ಲಿಸುವ ಮೂಲಕ ಸಭಿಕರ ಗಮನ ಸೆಳೆದಿದ್ದಾನೆ. ಎಲ್ಲರಂತೆ ಅಹವಾಲು ಸಲ್ಲಿಸಲು ಮನವಿ ಪತ್ರದೊಂದಿಗೆ ಸಭೆಗೆ ಬಂದಿರೋ ಯುವಕ, ಡಿಸಿ ನಲಿನ್ ಅತುಲ್ ಕೈಗೆ ಮನವಿ ಕೊಟ್ಟಿದ್ದಾನೆ. ಮನವಿ ಪತ್ರ ಓದಿದ ಡಿಸಿ ಒಂದರೆಕ್ಷಣ ಕಕ್ಕಾಬಿಕ್ಕಿ ಆಗಿ, ತಮ್ಮ ಪಕ್ಕದಲ್ಲೇ ಇದ್ದ ಎಸ್ಪಿ ಯಶೋಧ ವಂಟಗೋಡಿ ಮತ್ತು ಎಡಿಸಿ ಸಾವಿತ್ರಿ ಕಡಿ ಅವರ ಕಡೆ ನೋಡಿದರು. ಮನವಿ ಪತ್ರವನ್ನು ಮತ್ತೊಮ್ಮೆ ಓದಿದ ಅಧಿಕಾರಿಗಳು ಯುವಕನ ಕೈಗೆ ಮೈಕ್ ಕೊಟ್ಟು, ಸಮಸ್ಯೆ ಹೇಳಿಕೊಳ್ಳುವಂತೆ ಹೇಳಿದರು. ಆಗಲೂ ಯುವಕ ಸಂಗಪ್ಪ, ಕೃಷಿಕ ಕುಟುಂಬದ ಯುವಕರಿಗೆ ಕನ್ಯೆ ಹುಡುಕಿಕೊಡುವಂತೆ ಪುನರುಚ್ಚರಿಸಿದ್ದಾನೆ. ಆಗ ಇಡೀ ಸಭೆಯಲ್ಲಿದ್ದ ಅಧಿಕಾರಿಗಳು ಗಹಗಹಿಸಿ ನಕ್ಕಿದ್ದಾರೆ. ಕೊನೆಗೆ ಜಿಲ್ಲಾಧಿಕಾರಿ, ಕನ್ಯೆ ಸಿಕ್ಕರೆ ಮದುವೆ ಮಾಡಿಸುತ್ತೇವೆ. ನಿಮ್ಮ ಮನವಿ ಬಗ್ಗೆಯೂ ಪರಿಶೀಲನೆ ಮಾಡುತ್ತೇವೆ ಎಂದು ಸ್ವಾರಸ್ಯಕರ ಪ್ರಸಂಗಕ್ಕೆ ಪೂರ್ಣವಿರಾಮ ಇಟ್ಟಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ
**ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ–573201**
E-mail: dao.hassan09@gmail.com ದೂರವಾಣಿ ಸಂ:08172–272272
ಸಂಖ್ಯೆ:ಜಿಆಕಹಾ/26/ಹೊರಗುತ್ತಿಗೆ/2024–25 ದಿನಾಂಕ: 26–06–2024
**ಇ–ಟೆಂಡರ್ ಪ್ರಕಟಣೆ**

ಜಿಲ್ಲಾ ಆಯುಷ್ ಕಛೇರಿ, ಹಾಸನ ವ್ಯಾಪ್ತಿಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ನೌಕರರ ಸೇವೆಯನ್ನು ಒದಗಿಸಲು ನೊಂದಾಯಿತ ಹೊರ ಸಂಪನ್ಮೂಲ ಏಜೆನ್ಸಿಯವರಿಂದ 1 ವರ್ಷದ ಅವಧಿಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 25–06–2024 ರಿಂದ 24–07–2024 ರವರೆಗೆ ಆನ್ ಲೈನ್ ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸುವುದು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್ ಅಧಿಸೂಚನೆ ಸಂ: AYD/2023-24/SE0078 ನಲ್ಲಿ ನೋಡಬಹುದಾಗಿದೆ.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.
ವಾಸಾಸಂಇ/ಹಿಸನಿ/ಹಾಸನ/99/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
**ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ**
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354–235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354–235043
ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–2/ಟೆಂಡರ್/2024–25/523 ದಿನಾಂಕ: 26.06.2024
**ಇ–ಪ್ರೊಕ್ಯೂರ್‌ಮೆಂಟ್ ದ್ವಿ–ಲಕೋಟೆ ಟೆಂಡರ್ ಪ್ರಕಟಣೆ**
ಕೆಡಬ್ಲ್ಯೂ–1, 2 & 3 ಬಿಡ್ ಡಾಕ್ಯುಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2023–24ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ: 5054 ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ Standard Tender Document KW-1,2 & 3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ದತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ:6290, 6291, 6295, 6296, 6297, 6298 & ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ:6293, 6294 ಹಾಗೂ ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ:6292 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ.5.25 ದಿಂದ 100.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು **ಸಮಯ: 18.07.2024 ರ ಸಾಯಂಕಾಲ 5.30 ಗಂಟೆವರೆಗೆ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು **ಸಮಯ: 20.07.2024 ರಂದು ಮುಂಜಾನೆ 11.00 ಗಂಟೆಯ ನಂತರ.**

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ
ವಾ.ಸಾ.ಇ/ಬಾಗಲಕೋಟೆ/62/ದೇಶಪಾಂಡೆಪಬ್ಲಿಸಿಟಿ/2024–25

ಐದು ಶಿಶುಗಳ ರಕ್ಷಣೆ | ಮಕ್ಕಳಿಲ್ಲದ ದಂಪತಿಗೆ 2ರಿಂದ 3 ಲಕ್ಷ ರು.ಗೆ ಮಾರಾಟ

# ಏಳು ಮಂದಿ ಮಕ್ಕಳ ಕಳ್ಳರ ಬಂಧನ

**ತುಮಕೂರು:** ಮಕ್ಕಳನ್ನು ಕಳ್ಳತನ ಮಾಡಿ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆ ಹಚ್ಚಿರುವ ಜಿಲ್ಲೆಯ ಪೊಲೀಸರು ಏಳು ಆರೋಪಿಗಳನ್ನು ಬಂಧಿಸಿ, ಮಾರಾಟ ಮಾಡಲಾಗಿದ್ದ ಐದು ಶಿಶುಗಳನ್ನು ರಕ್ಷಿಸಿದ್ದಾರೆ. ಮಹೇಶ ಯು.ಡಿ, ಮಹಬೂಬ್, ಕೆ.ಎನ್. ರಾಮಕೃಷ್ಣಪ್ಪ, ಹನುಮಂತರಾಜು, ಮುಬಾರಕ್ ಪಾಷ, ಪೂರ್ಣಿಮಾ ಹಾಗೂ ಸೌಜನ್ಯ ಬಂಧಿತ ಆರೋಪಿಗಳು.

**ಮಕ್ಕಳ ಕಳ್ಳರು ಬಲೆಗೆ ಬಿದ್ದಿದ್ದೇಗೆ?**

ಜೂನ್ 9ರಂದು ರಾತ್ರಿ ಗುಬ್ಬಿ ತಾಲೂಕಿನ ಅಂತಾಪುರ ದೇವ ಸ್ಥಾನದ ಬಳಿ ತನ್ನ ಕುಟುಂಬ ದೊಂದಿಗೆ ಮಲಗಿದ್ದಾಗ ರಾತ್ರಿ ವೇಳೆಯಲ್ಲಿ 11 ತಿಂಗಳ ಮಗುವನ್ನು ದುಷ್ಕರ್ಮಿಗಳು ಅಪಹರಿಸಿದ್ದಾರೆ ಎಂದು ಮಹಾದೇವಿ ಎಂಬುವರು ಗುಬ್ಬಿ ಠಾಣೆಯಲ್ಲಿ ದೂರು ನೀಡಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ತನಿಖೆಗಾಗಿ ಎಸ್‌ಪಿ ಅಶೋಕ್ ಅವರು ಎಎಸ್‌ಪಿಗಳಾದ ಮರಿಯಪ್ಪ ಮತ್ತು ಅಬ್ದುಲ್ ಖಾದರ್ ನೇತೃತ್ವದ ಶಿರಾ ಉಪ ವಿಭಾಗದ ಡಿವೈಎಸ್‌ಪಿ ಬಿ.ಕೆ ಶೇಖರ್, ಗುಬ್ಬಿ ವೃತ್ತದ ಸಿಪಿಐ ಗೋಪಿನಾಥ್ , ಗುಬ್ಬಿ ಪೊಲೀಸ್ ಠಾಣೆಯ ಪಿಎಸ್‌ಐ ಸುನೀಲ್ ಕುಮಾರ್ ಸಿಬ್ಬಂದಿಗಳಾದ ನವೀನ್ ಕುಮಾರ್, ವಿಜಯ್ ಕುಮಾರ್, ಮಧುಸೂದನ್ ಹಾಗೂ ಎಸ್‌ಪಿ ಕಚೇರಿಯ ನರಸಿಂಹರಾಜು ಹಾಗೂ ದುಶಾಂತ್ ಅವರುಗಳನ್ನೊಳಗೊಂಡ ವಿಶೇಷ ಪೊಲೀಸ್ ತಂಡವನ್ನು ರಚಿಸಿದ್ದರು.

ತನಿಖಾ ತಂಡ ಮಗುವನ್ನು ಕಳ್ಳತನ ಮಾಡಿದ ಆರೋಪದ ಮೇರೆಗೆ ಗುಬ್ಬಿ ತಾಲೂಕು ಬಿಕ್ಕೇಗುಡ್ಡವಾಸಿ ರಾಮಕೃಷ್ಣ ಹಾಗೂ ತುಮಕೂರಿನ ಭಾರತೀ ನಗರದ ವಾಸಿ ಹನುಮಂತರಾಜು ಎಂಬವರನ್ನು ಬಂಧಿಸಿತ್ತು. ಅವರು ನೀಡಿದ ಮಾಹಿತಿ ಮೇರೆಗೆ ಈ ಹಿಂದೆ ಕುಣಿಗಲ್ ಸರಕಾರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ತುಮಕೂರಿನ ಅಶೋಕ ನಗರದ ನಿವಾಸಿ ಮಹೇಶ್ ಯು.ಡಿ ಎಂಬ ಮತ್ತೊಬ್ಬ ಆರೋಪಿಯನ್ನು ಬಂಧಿಸಲಾಗಿತ್ತು. ವಿಚಾರಣೆ ನಡೆಸಿದಾಗ ಆರೋಪಿಗಳು 1,75,000 ರುಪಾಯಿಗೆ ಮಗುವನ್ನು ಬೆಳ್ಳೂರು ಕ್ರಾಸ್‌ನ ಮುಬಾರಕ್ ಗೆ ಮಾರಾಟ ಮಾಡಿರುವ ವಿಷಯ ಬೆಳಕಿಗೆ ಬಂದಿದೆ. ನಂತರ ಪೊಲೀಸರು ಮುಬಾರಕ್ ನನ್ನು ಬಂಧಿಸಿ ಮಗುವನ್ನು ರಕ್ಷಿಸಿದ್ದಾರೆ.

ಈ ಪ್ರಕರಣದ ಆರೋಪಿ ಮಹೇಶ್, ಅವಿವಾಹಿತ ಹಾಗೂ ಅಕ್ರಮ ಸಂಬಂಧದಿಂದ ಗರ್ಭ ಧರಿಸಿದ ಮಹಿಳೆಯರನ್ನು ಪತ್ತೆ ಮಾಡಿ, ಅವರುಗಳಿಂದ ಮಕ್ಕಳನ್ನು ಪಡೆದುಕೊಂಡು, ಮಕ್ಕಳಿಲ್ಲದ ದಂಪತಿಗೆ 2ರಿಂದ 3 ಲಕ್ಷ ರುಪಾಯಿಗೆ ಮಾರಾಟ ಮಾಡುತ್ತಿದ್ದ ಮಾಹಿತಿ ಬೆಳಕಿಗೆ ಬಂದಿದೆ.

ಮಕ್ಕಳನ್ನು ಕಳ್ಳತನ ಮಾಡಿ ಮಾರಾಟ ಮಾಡುತ್ತಿದ್ದ ಆರೋಪಿಗಳು.

### ಆರೋಪಿಗಳಿಂದ ಕಾರು, ನಗದು ಜಪ್ತಿ

ಆರೋಪಿಗಳು ಮಾರಾಟ ಮಾಡಿದ್ದ 9 ಮಕ್ಕಳ ಪೈಕಿ 5 ಮಕ್ಕಳನ್ನು ಪೊಲೀಸರು ರಕ್ಷಿಸಿದ್ದಾರೆ. ಇದರಲ್ಲಿ ಒಂದು ಮಗು ಮೃತಪಟ್ಟಿದ್ದು, ಇನ್ನೊಂದು ಮಗುವನ್ನು ಪೋಷಕರಿಗೆ ಒಪ್ಪಿಸಲಾಗಿದೆ. ಉಳಿದ ಐದು ಮಕ್ಕಳನ್ನು, ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ ದತ್ತು ಸ್ವೀಕಾರ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತಿದೆ. ಆರೋಪಿಗಳಿಂದ ಮಗುವನ್ನು ಅಪಹರಿಸಲು ಬಳಸಿದ್ದ ಮಾರುತಿ 800 ಕಾರು, 50 ಸಾವಿರ ನಗದು, 4 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

**ಕರ್ನಾಟಕ ಸರಕಾರ**
**(ಲೋಕೋಪಯೋಗಿ ಇಲಾಖೆ)**
**ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ**
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2024–25/929 ದಿನಾಂಕ: 25/06/2024
**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-4)**

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2023–24 ನೇ ಸಾಲಿನ ಲೆಕ್ಕ ಶಿರ್ಷಿಕೆ 4059–ಇಲಾಖಾ ಕಟ್ಟಡಗಳು ಅಡಿ 2 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಮೊತ್ತ ಕ್ರಮವಾಗಿ ರೂ. 75.00 ಲಕ್ಷ ಹಾಗೂ ಮೊತ್ತ ರೂ. 83.33 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆವ್ಹಾನಿಸಲಾಗಿದೆ.
**ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು**
1)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 01–07–2024(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:03–07–2024 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 05–07–2024 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-197/KSMCA/2024-25

ಕರ್ನಾಟಕ ಸರ್ಕಾರ
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ಉಪ–ವಿಭಾಗ, ಗದಗ**
ಇ–ಮೇಲ್ : dcfsf.gadag@gmail.com
ಕಡತ ಸಂಖ್ಯೆ : ಎ2/ಬಿಜಿಟಿ/Stake Tender/ಸಿಆರ್– /2024–25 ದಿನಾಂಕ : 25–06–2024
**ಇ–ಟೆಂಡರ ಪ್ರಕಟಣೆ**

2024–25 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆಗೆ ಎತ್ತರದ ಸಸಿಗಳಿಗೆ ಆಧಾರ ಕೋಲ (ಸ್ಟೇಕ್ಸ್)ಗಳನ್ನು ಪೂರೈಸಲು ಇ–ಟೆಂಡರನ್ನು ಪಾರದರ್ಶಕತೆ ನಿಯಮ ಹಾಗೂ ಅಧಿನಿಯಮಗಳನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದ ಪ್ರಕಾರ ಈ ಕೆಳಗಿನ ವೇಳಾಪಟ್ಟಿಗಳನ್ವಯ ದಿನಾಂಕ:25–06–2024 ರಂದು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.
ವಿವರಗಳು : (1) ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04–07–2024** ಸಂಜೆ 4.00 ಗಂಟೆವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ : **06–07–2024** ಮುಂಜಾನೆ 11.00 ಗಂಟೆಗೆ (3) ಆರ್ಥಿಕ ಬಿಡ್ ಟೆಂಡರ್ ಪರಿಶೀಲನೆ ದಿನಾಂಕ & ಸಮಯ : **09–07–2024** ಸಂಜೆ 11.00 ಗಂಟೆಗೆ ಟೆಂಡರ್ ತಾಂತ್ರಿಕ ಸಮಿತಿಯಿಂದ

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು. ಇ–ಟೆಂಡರ್ ಶರತ್ತು ಹಾಗೂ ಹೆಚ್ಚಿನ ವಿವರಗಳನ್ನು ಸಾರ್ವಜನಿಕರ ತಿಳುವಳಿಕೆಗೋಸ್ಕರ ಇ–ಪೋರ್ಟಲ್ ವೆಬ್‌ಸೈಟ್‌ದಲ್ಲಿ ಇಡಲಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಸಾಮಾಜಿಕ ಅರಣ್ಯ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/35/2024–25

## ಇಸ್ರೋ ಅಧ್ಯಕ್ಷರಿಗೆ ಧಾರವಾಡ ಕೃಷಿ ವಿವಿ ಗೌರವ ಡಾಕ್ಟರೇಟ್

**ಧಾರವಾಡ:** ಇಲ್ಲಿಯ ಕೃಷಿ ವಿಶ್ವವಿದ್ಯಾಲಯದ 37ನೇ ಘಟಿಕೋತ್ಸವವು ಗುರುವಾರ ಜರುಗಲಿದ್ದು, ಈ ಘಟಿಕೋತ್ಸವದಲ್ಲಿ ಇಸ್ರೋ ಅಧ್ಯಕ್ಷ ಡಾ.ಎಸ್.ಸೋಮನಾಥ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲು ಕೃವಿವಿ ನಿರ್ಧರಿಸಿದೆ.

ಈ ಹಿನ್ನಲೆಯಲ್ಲಿ ಡಾ.ಸೋಮನಾಥ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ನೆರವೇರಲಿದ್ದು, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಬೆಳಿಗ್ಗೆ 11:00 ಗಂಟೆಗೆ ನಡೆಯುವ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಾಧಿಪತಿಯಾದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ವಹಿಸಲಿದ್ದಾರೆ. ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ ಅಧ್ಯಕ್ಷ ಡಾ.ಸಂಜಯ ಕುಮಾರ ಘಟಿಕೋತ್ಸವ ಭಾಷಣ ಮಾಡಲಿದ್ದು, ರಾಜ್ಯದ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಕುಲಪತಿ ಡಾ.ಪಿ.ಎಲ್. ಪಾಟೀಲ ಇವರು ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ಕುರಿತು ವರದಿಯನ್ನು ಮಂಡಿಸುವರು.

## ಮೋದಿ ಎದುರಿಸಲು ರಾಗಾ ಸೂಕ್ತ ವ್ಯಕ್ತಿ : ಸಿದ್ದರಾಮಯ್ಯ

**ಬೆಂಗಳೂರು:** ಮೋದಿ ಅವರನ್ನು ಎದುರಿಸಲು ರಾಹುಲ್ ಗಾಂಧಿ ಸೂಕ್ತ ವ್ಯಕ್ತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಹುಲ್ ಗಾಂಧಿ ಅವರು ಪ್ರತಿಪಕ್ಷ ನಾಯಕನ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ಪ್ರತಿಪಕ್ಷದ ನಾಯಕ ಸ್ಥಾನವನ್ನು ಸ್ವೀಕರಿಸಬೇಕೆಂದು ನಾನು ಕೂಡ ಸಲಹೆ ನೀಡಿದ್ದೆ. ಬಿಜೆಪಿ ಹಾಗೂ ನರೇಂದ್ರ ಮೋದಿಯವರನ್ನು ಎದುರಿಸಬೇಕಾದರೆ ನೀವೇ ಪ್ರತಿಪಕ್ಷದ ನಾಯಕರಾಗ ಬೇಕೆಂದು ಕಾರ್ಯಕಾರಿಣಿ ಸಮಿತಿ ಹಾಗೂ ನಾನೂ ಒತ್ತಾಯ ಮಾಡಿದ್ದೆ. ರಾಹುಲ್ ಗಾಂಧಿಯವರು ಈ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ನಾನು ಅವರಿಗೆ ತುಂಬಿ ಹೃದಯದ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ ಎಂದು ತಿಳಿಸಿದರು.

## ಸಮಾಚಾರ ಸಣ್ಣದಲ್ಲ

### ಮಳೆ: ದಕ್ಷಿಣ ಕನ್ನಡ ಶಾಲೆಗಳಿಗೆ ಇಂದು ರಜೆ

**ಮಂಗಳೂರು:** ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳಿಗೆ ಗುರುವಾರ (ಜೂನ್ 27) ರಜೆ ಘೋಷಣೆ ಮಾಡಲಾಗಿದೆ. ಬುಧವಾರ ಬೆಳಗ್ಗಿನಿಂದಲೇ ಜಿಲ್ಲೆಯಾದ್ಯಂತ ಮಳೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಅಂಗನವಾಡಿ, ಪ್ರಾಥಮಿಕ ,ಮತ್ತು ಪ್ರೌಢ ಶಾಲೆಗಳಿಗೆ ಗುರುವಾರ ರಜೆ ಘೋಷಣೆ ಮಾಡಿ ಆದೇಶ ಹೊರಡಿಸಿದ್ದಾರೆ.

### ವಿಮಾನ ನಿಲ್ದಾಣ ನಿರ್ದೇಶಕರಿಗೆ ಬೆದರಿಕೆ

**ಹುಬ್ಬಳ್ಳಿ:** ಹುಬ್ಬಳ್ಳಿ ವಿಮಾನ ನಿಲ್ದಾಣದ ನಿರ್ದೇಶಕರಿಗೆ ವ್ಯಕ್ತಿಯೊಬ್ಬ ಮೇಲ್ ಮೂಲಕ ಜೀವ ಬೆದರಿಕೆ ಸಂದೇಶ ಕಳುಹಿಸಿದ ಕುರಿತು ಗೋಕುಲರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಿರ್ದೇಶಕ ರೂಪೇಶಕುಮಾರ ಶ್ರೀಪಾದ ಅವರ ಕಚೇರಿ ಮೇಲ್ ಐಡಿಗೆ ಜೂನ್ 25ರಂದು ಸಂಜೆ 6.30ವೇಳೆ LongLivepalestined nmx.org ಮೇಲ್ ಐಡಿಯಿಂದ ಜೀವ ಬೆದರಿಕೆ ಸಂದೇಶ ಬಂದಿದೆ. 'ನಾವು ನಿಮ್ಮನ್ನು ನಾಶ ಮಾಡುತ್ತೇವೆ. ಬೆಂಕಿಯಲ್ಲಿ ಎಸೆಯುತ್ತೇವೆ. ಉಸಿರುಗಟ್ಟಿ ಸಾಯುತ್ತೀರ. ನೀವು ಮಾಡಿದ ಎಲ್ಲ ಕೆಟ್ಟ ಕೆಲಸಗಳಿಗೆ ಉತ್ತರವಿಲ್ಲ ಎಂದು ಭಾವಿಸಿದ್ದೀರಾ ಎಂದು ಬೆದರಿಸಿ ಸಂದೇಶ ಕಳುಹಿಸಲಾಗಿದೆ. ಟರ್ಮಿನಲ್ ಉಸ್ತುವಾರಿ ಪ್ರತಾಪ ಅವರಿಗೆ ಸಂದೇಶ ತೋರಿಸಿದ ರೂಪೇಶಕುಮಾರ ಅವರು, ಸಿಎಸ್ಒ, ಐಬಿ, ಬಿಡಿಡಿಎಸ್ ಮತ್ತು ಬಾಂಬ್ ನಿಷ್ಕ್ರಿಯ ದಳಕ್ಕೆ ಮಾಹಿತಿ ರವಾನಿಸಿ, ವಾಯುಯಾನ ಭದ್ರತಾ ನಿಯಮದ ಪ್ರಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

### ತಾಯಿಯ ಹತ್ಯೆ: ಆರೋಪಿಗಳು ಬಂಧನ

**ತುಮಕೂರು:** ಮಗಳ ಹೆಸರಿಗೆ ಆಸ್ತಿ ವರ್ಗಾಯಿಸುವುದಾಗಿ ಹೇಳಿದ ತಾಯಿಯನ್ನು ವ್ಯಕ್ತಿಯೊಬ್ಬ ಹತ್ಯೆಗೈದ ಘಟನೆ ಪಾವಗಡದ ಮಾಚಮಾರನಹಳ್ಳಿ ಯಲ್ಲಿ ನಡೆದಿದೆ. ಗ್ರಾಮದ ಚಂದ್ರಕ್ಕ (50) ಕೊಲೆಯಾದ ಮಹಿಳೆ ಎಂದು ಗುರುತಿಸಲಾಗಿದೆ. ಜೂ.20 ರಂದು ಮಹಿಳೆಯ ಹತ್ಯೆ ನಡೆದಿತ್ತು. ಪ್ರಕರಣದ ತನಿಖೆ ಕೈಗೊಂಡ ಪೊಲೀ ಸರು ಮಹಿಳೆಯ ಮಗ ಆಂಜನೇಯಲು ಹಾಗೂ ಆತನ ಬಾವ ಪ್ರಭಾಕರ್‌ನನ್ನು ಬಂಧಿಸಿದ್ದಾರೆ. ವಿಚಾ ರಣೆ ವೇಳೆ ಆಸ್ತಿ ವಿಚಾರಕ್ಕೆ ಕೊಲೆ ಮಾಡಿದ್ದಾಗಿ ಒಪ್ಪಿ ಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜೂ. 20ರಂದು ಚಂದ್ರಕ್ಕ ಬೇವಿನ ಬೀಜ ಸಂಗ್ರಹಿ ಸಲು ತೆರಳಿದ್ದ ವೇಳೆ, ಮಹಿಳೆ ಯನ್ನ ಕತ್ತುಕೊಯ್ದು ಹತ್ಯೆ ಮಾಡಲಾಗಿತ್ತು. ತನ್ನ ತಾಯಿಯನ್ನ ಹತ್ಯೆಗೈದವರನ್ನು ಬಂಧಿಸಿ ನ್ಯಾಯ ಕೊಡಿಸುವಂತೆ ಸ್ವತಃ ಹಂತಕ ಮಗನೇ ಪಾವಗಡ ಪೊಲೀಸ್ ಠಾಣೆಗೆ ದೂರು ನೀಡಿದ್ದ. ಪೊಲೀಸ್ ತನಿಖೆ ವೇಳೆ ಚಂದ್ರಕ್ಕನ ಮಗ ಆಂಜನೇಯಲುನೇ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ. ಪೊಲೀ ಸರು ಘಟನಾ ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿಯನ್ನು ವಿಚಾರಿಸಿದಾಗ ಆರೋಪಿಗಳ ಸುಳಿವು ಸಿಕ್ಕಿತ್ತು. ಯಾರಿಗೂ ಹೇಳದಂತೆ ಪ್ರತ್ಯಕ್ಷದರ್ಶಿಗೂ ಸಹ ಆರೋಪಿಗಳು ಬೆದರಿಕೆ ಹಾಕಿದ್ದರು ಎಂದು ತನಿಖೆ ವೇಳೆ ತಿಳಿದು ಬಂದಿದೆ.

### ಡಿ ಗ್ಯಾಂಗ್‌ನ ನಾಲ್ವರು ತುಮಕೂರಿಗೆ ಶಿಫ್ಟ್

**ತುಮಕೂರು:** ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಗ್ಯಾಂಗ್‌ನ ನಾಲ್ವರು ಆರೋಪಿಗಳನ್ನು ತುಮಕೂರು ಜೈಲಿಗೆ ಬುಧವಾರ ಸ್ಥಳಾಂತರಿಸಲಾಗಿದೆ. ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಗ್ಯಾಂಗ್ ಜೈಲುಪಾಲಾಗಿದ್ದು, ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ. ಈ ನಡುವೆ ಪ್ರಕರಣದ ನಾಲ್ವರು ಆರೋಪಿಗಳಾದ ರವಿಶಂಕರ್, ಕಾರ್ತಿಕ್, ಕೇಶವ ಮೂರ್ತಿ ಹಾಗೂ ನಿಖಿಲ್ ನಾಯಕ್‌ನನ್ನು ಸ್ಥಳಾಂತರಿಸಲಾಗಿದ್ದು, ತುಮಕೂರು ಕಾರಾಗೃಹ ಪೊಲೀಸರು ವಾಹನಗಳಲ್ಲಿ ಆರೋಪಿಗಳನ್ನು ಕರೆದೊಯ್ದಿದ್ದಾರೆ. ಭದ್ರತೆಗಾಗಿ ಇನ್ಸ್‌ಪೆಕ್ಟರ್, 10ಕ್ಕೂ ಹೆಚ್ಚು ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಬೆಂಗಾವಲು ಪಡೆಯೊಂದಿಗೆ ನಾಲ್ವರು ಆರೋಪಿಗಳನ್ನು ಶಿಫ್ಟ್ ಮಾಡಲಾಗಿದೆ.

### ಕಿಟಕಿ ಸರಳಿಗೆ ನೇಣು ಬಿಗಿದು ಆತ್ಮಹತ್ಯೆ

**ಬಂಟ್ವಾಳ:** ಯುವಕನೋರ್ವ ಮನೆಯ ಕಿಟಕಿಯ ಸರಳಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ನರಿಕೊಂಬು ಎಂಬಲ್ಲಿ ನಡೆದಿದೆ. ಇಲ್ಲಿನ ಶೇಖರ ಪೂಜಾರಿ ಅವರ ಎರಡನೇ ಮಗ ರಮೇಶ್ (22) ಆತ್ಮಹತ್ಯೆ ಮಾಡಿಕೊಂಡ ಯುವಕ. ಯಾವುದೋ ವಿಷ ಪದಾರ್ಥ ಸೇವಿಸಿ ಬಳಿಕ ಕಿಟಕಿಗೆ ಹಗ್ಗ ಬಿಗಿದು ಆತ್ಮಹತ್ಯೆ ಮಾಡಿಕೊಂಡಿರಬೇಕು ಎಂದು ಶಂಕಿಸಲಾಗಿದೆ. ಆತ್ಮಹತ್ಯೆಗೆ ಸ್ಪಷ್ಟವಾದ ಕಾರಣ ಈವರೆಗೆ ದೊರೆತಿಲ್ಲ.

### ಹಾಲಿನ ದರ ಏರಿಕೆಯಾಗಿಲ್ಲ: ಪ್ರಮಾಣಕ್ಕೆ ಸರಿಯಾಗಿ ದರ ನಿಗದಿಯಾಗಿದೆ | ಕಾಫಿ, ಟೀ ದರ ಏರಿಕೆ ಮಾಡುವ ಅಗತ್ಯವಿಲ್ಲ

# ಹಾಲಿನ ದರ ಏರಿಕೆ; ಮುಂದುವರಿದ ವಾಕ್ಸಮರ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಹಾಲಿನ ದರ ಏರಿಕೆಯ ಬೆನ್ನಲ್ಲೇ ಶುರುವಾಗಿರುವ ರಾಜಕೀಯ ವಾಕ್ಸಮರ ಬುಧವಾರವೂ ಮುಂದುವರೆದಿದೆ. ಈ ನಡುವೆ ಕಾಫಿ-ಟೀ ಬೆಲೆ ಏರಿಕೆ ಮಾಡುವ ಅಗತ್ಯವಿಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ. ಇನ್ನೊಂದೆಡೆ ಡಿಸಿಎಂ ಡಿ.ಕೆ.ಶಿವಕುಮಾರ್ ದರ ಹೆಚ್ಚಳದ ಪಾಲು ರೈತರಿಗೂ ಸಿಗಲಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಬಿಜೆಪಿ ನಾಯಕರು ಕರ್ನಾಟಕದಲ್ಲಿ ದರ ಏರಿಕೆ ಪರ್ವ ಮುಂದುವರೆದಿದೆ ಎಂದು ಟೀಕಿಸಿದರೆ, ಇತ್ತ ಕಾಂಗ್ರೆಸಿಗರು ಹಾಲಿನ ದರದೊಂದಿಗೆ ಪ್ರಮಾಣವನ್ನು ಏರಿಸಲಾಗಿದೆ. ಇದರಿಂದ ಜನರಿಗೆ ಹೆಚ್ಚುವರಿ ಹಣಕ್ಕೆ ಹೆಚ್ಚುವರಿ ಹಾಲು ಸಿಗಲಿದೆ. ಇದರಿಂದ ಯಾರಿಗೆ ಸಮಸ್ಯೆಯಾಗುತ್ತದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಹಾಲಿನ ದರ ಹೆಚ್ಚಾಗಿಲ್ಲ. ಕಳೆದ ವರ್ಷ ಇದೇ ವೇಳೆಗೆ ಹಾಲಿನ ಉತ್ಪಾದನೆ 90 ಲಕ್ಷ ಲೀಟರ್ ಇತ್ತು. ಈಗ 99 ಲಕ್ಷಕ್ಕಿಂತ ಹೆಚ್ಚಾಗಿದೆ. ರೈತರಿಂದ ನಾವು ಹಾಲು ಪಡೆಯಬೇಕಾಗಿದ್ದು, ಅದನ್ನು ಮಾರಾಟ ಮಾಡಬೇಕಿದೆ. ಅರ್ಧ ಲೀಟರ್ ಪ್ಯಾಕೆಟ್‌ನಲ್ಲಿ 50 ಮಿಲೀ ಹೆಚ್ಚು ಮಾಡಿದ್ದು, ಅದಕ್ಕೆ ತಗುಲುವ 2.10 ರು.ಗಳನ್ನು ಪ್ರಮಾಣಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಲಾಗಿದೆ ಎಂದು ಪುನರುಚ್ಚರಿಸಿದರು. ಮಾರುಕಟ್ಟೆ ಅಗತ್ಯವಿದೆ. ಹಾಲಿನ ಬೆಲೆ ಹೆಚ್ಚು ಮಾಡಿಲ್ಲ. ಹಾಲು ಹೆಚ್ಚು ಉತ್ಪಾದನೆಯಾಗಿರುವುದನ್ನು ಹೆಚ್ಚು ನೀಡಿ ಅದಕ್ಕೆ ತಕ್ಕದರವನ್ನಷ್ಟೇ ನಿಗದಿ ಮಾಡಲಾಗಿದೆ ಎಂದರು.



ರಾಜ್ಯದಲ್ಲಿ ಬೆಲೆ ಏರಿಕೆಯ ಪರ್ವ ನಡೆಯುತ್ತಿದ್ದು, ಜನರಿಗೆ ಬರೆ ಎಳೆಯುವ ಕೆಲಸವನ್ನು ಮಾಡುತ್ತಿದ್ದಾರೆ. ಸ್ಟ್ಯಾಂಪ್ ಡ್ಯೂಟಿ, ವಿದ್ಯುತ್ ದರ ಏರಿಕೆಯಿಂದಾಗಿ ಈ ಹಿಂದೆ 25 ಸಾವಿರಕ್ಕೆ ರೈತರು ತಮ್ಮ ಹೊಲಕ್ಕೆ ಟಿಸಿ ನೀಡುತ್ತಿದ್ದರೂ ಈಗ 2.5 ಲಕ್ಷಕ್ಕೆ ಏರಿಸಲಾಗಿದೆ. ರೈತರು ಬರದಿಂದ ನರಳಿ ಸಂಕಷ್ಟದಲ್ಲಿದ್ದಾರೆ. ಸರಕಾರ ಯಾಕೆ ಇಷ್ಟು ಕಟುವಾಗಿ ನಡೆದುಕೊಳ್ಳುತ್ತಿದೆ ?

**- ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

**ಕಾಫಿ ಬೆಲೆ ಏಕೆ ಹೆಚ್ಚಿಸಬೇಕು?:** ಹಾಲಿನ ದರವೇ ಹೆಚ್ಚಳವಾಗಿಲ್ಲ. ಹಾಗಿದ್ದರೂ ಹೋಟೆಲ್‌ನವರು ಕಾಫಿ, ಟೀ ಬೆಲೆಯನ್ನು ಹೇಗೆ ಹೆಚ್ಚಳ ಮಾಡಲು ಸಾಧ್ಯ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ಹೆಚ್ಚುವರಿ ಹಾಲಿಗೆ ಮಾರುಕಟ್ಟೆ ಕಲ್ಪಿಸುವ ಸಲುವಾಗಿ ಅರ್ಧ ಲೀಟರ್ ಮತ್ತು ಒಂದು ಲೀಟರ್ ಹಾಲಿನ ಪೊಟ್ಟಣಕ್ಕೆ 50 ಎಂಎಲ್ ಅನ್ನು ಹೆಚ್ಚುವರಿಯಾಗಿ ಸೇರಿಸಿ ಅದಕ್ಕೆ ತಗಲುವ ವೆಚ್ಚವನ್ನು ಗ್ರಾಹಕರಿಂದ ಪಡೆಯಲಾಗುತ್ತಿದೆ. ಹೀಗಿರುವಾಗ ಹಾಲಿನ ದರ ಎಲ್ಲಿ ಹೆಚ್ಚಾಗಿದೆ? ಬಿಜೆಪಿಯವರು ರಾಜಕೀಯ ಕಾರಣಕ್ಕಾಗಿ ಹೇಳಿಕೆ ನೀಡುತ್ತಿದ್ದಾರೆ. ಅವರು ಹೇಳುವುದನ್ನು ನಂಬುವವರಿಗಾದರೂ ವಿವೇಚನೆ ಬೇಡವೇ? ಎಂದು ಪ್ರಶ್ನಿಸಿದರು.

**ಬಿಜೆಪಿಯದ್ದು ರೈತ ವಿರೋಧಿ ಮನಸ್ಥಿತಿ:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಹಸುಗಳ ಮೇವಿನ ಬೆಲೆ ಸೇರಿದಂತೆ ಅನೇಕ ವಿಚಾರದಿಂದ ತಮ್ಮ ಹಸುಗಳನ್ನೇ ಮಾರಿಕೊಳ್ಳುವ ದುಸ್ಥಿತಿಯಲ್ಲಿರುವ ರೈತರ ಹಿತ ಗಮನದಲ್ಲಿಟ್ಟುಕೊಂಡು ಹಾಲಿನ ದರ ಏರಿಸಿದರೆ ಅದನ್ನು ವಿರೋಧಿಸುವ ಮೂಲಕ ಬಿಜೆಪಿ ರೈತ ವಿರೋಧಿ ಮನಸ್ಥಿತಿ ಮತ್ತೊಮ್ಮೆ ಅನಾವರಣಗೊಂಡಿದೆ ಎಂದು ಟೀಕಿಸಿದ್ದಾರೆ. ಹಾಲಿನ ಪ್ರಮಾಣ ಹೆಚ್ಚಳಕ್ಕೆ ಅನುಗುಣವಾಗಿ 2 ರು. ಹೆಚ್ಚಿಸುವ ನಿರ್ಧಾರ ಕೈಗೊಂಡಿದ್ದು, ಬೇರೆ ರಾಜ್ಯಗಳಲ್ಲಿ ಹಾಲಿನ ದರಕ್ಕೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಅತಿ ಕಡಿಮೆ ಬೆಲೆಗೆ ಹಾಲು ನೀಡಲಾಗುತ್ತಿದೆ. ಏರಿಕೆಯಾಗಿರುವ ಹಾಲಿನ ದರದಲ್ಲಿ ರೈತರಿಗೂ ಪಾಲು ಸಿಗುವುದರಿಂದ ರೈತರಿಗೆ ಸಹಾಯವಾಗಲಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

## ಕಾಫಿ-ಟೀ ದರ ಹೆಚ್ಚಿಸಲು ರಾಜ್ಯ ಹೋಟೆಲ್ ಮಾಲೀಕರ ಚಿಂತನೆ

ಹಾಲಿದ ದರ ಏರಿಕೆ ಬೆನ್ನಲ್ಲೇ ಕಾಫಿ, ಟೀ ದರವನ್ನು ಹೆಚ್ಚಿಸುವುದಕ್ಕೆ ರಾಜ್ಯ ಹೋಟೆಲ್ ಮಾಲೀಕರ ಸಂಘಟನೆ ಚಿಂತನೆ ನಡೆಸಿದೆ ಎನ್ನಲಾಗಿದೆ. ದರ ಏರಿಕೆಯಿಂದಾಗಿ ಹೋಟೆಲ್ ಉದ್ಯಮಕ್ಕೆ ಎದುರಾಗುವ ನಷ್ಟದಿಂದ ರಾಜ್ಯದಲ್ಲಿ ಹೋಟೆಲ್ ಕಾಫಿ, ಟೀ ಬೆಲೆ 2 ರು. ಹೆಚ್ಚಳಕ್ಕೆ ಮಾಲೀಕರು ಚಿಂತನೆ ನಡೆಸಿದ್ದಾರೆ.

ಬೆಲೆ ಎಷ್ಟು ಏರಿಕೆ ಮಾಡಬೇಕು ಎನ್ನುವುದು ಆಯಾ ಆಯಾ ಹೋಟೆಲ್ ಮಾಲೀಕರು ನಿರ್ಧರಿಸಲಿದ್ದಾರೆ ಎಂದು ತಿಳಿದುಬಂದಿದೆ. ಆದರೆ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ ರಾವ್ ಮಾತನಾಡಿ, ಕೆಎಂಎಫ್‌ನ ನಂದಿನಿ ಬ್ರ್ಯಾಂಡ್ ನಮ್ಮ ಕರ್ನಾಟಕದ ಹೆಮ್ಮೆಯ ಉತ್ಪನ್ನಗಳಾಗಿದ್ದು, ದಿನಕ್ಕೆ 90 ಲಕ್ಷಕ್ಕಿಂತಲೂ ಹೆಚ್ಚಿಗೆ ಹಾಲನ್ನು ರೈತರಿಂದ ಖರೀದಿಸುವ ದೇಶದ ಎರಡನೇ ಪ್ರತಿಷ್ಠಿತ ಸಂಸ್ಥೆಯಾಗಿದೆ. ಇದರಲ್ಲಿ ಹೆಚ್ಚಿನ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಖರೀದಿಸಿ ಪ್ರೋತ್ಸಾಹಿಸುತ್ತಿರುವುದು ಹೋಟೆಲ್ ಉದ್ಯಮ. ಕೆಎಂಎಫ್ ಇತ್ತೀಚೆಗೆ ರೈತರಿಗೆ ಸಹಕರಿಸುವ ಸಲುವಾಗಿ 50ಎಂಎಲ್ ಹೆಚ್ಚಿಗೆ ಹಾಲನ್ನು ನೀಡಿ 2 ರು.ದರ ಏರಿಕೆ ಮಾಡಿರುವುದರಿಂದ ನಮ್ಮ ಉದ್ಯಮಕ್ಕೆ ಯಾವುದೇ ಹೆಚ್ಚಿನ ಹೊರೆಯಾಗುವುದಿಲ್ಲ. ಆದ್ದರಿಂದ ಕಾಫಿ ಮತ್ತು ಟೀ ಬೆಲೆಯಲ್ಲಿ ಯಾವುದೇ ಏರಿಕೆಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ದಕ್ಷಿಣ ಕನ್ನಡದ ರೈತರಲ್ಲಿ ವ್ಯವಸಾಯದ ತಾಂತ್ರಿಕತೆಯ ಬಗ್ಗೆ ವಿಶೇಷ ಸಂವಾದವನ್ನು ಫುಡ್ ಚೈನ್ ಕ್ಯಾಂಪೇನ್ ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಈ ಸಂವಾದದಲ್ಲಿ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, ಫುಡ್ ಚೈನ್ ನ ಸಂಸ್ಥಾಪಕರಾದ ಡಾ. ಸೌರಿಷ್ ಹೆಗ್ಡೆ ಮತ್ತು ಯತೀಶ್ ಜೊತೆ ಹಲವಾರು ರೈತರು ಹಾಗೂ ವಿದ್ಯಾರ್ಥಿಗಳು ಇದ್ದರು.

### ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ

## ಜಿಲ್ಲಾ ಕೇಂದ್ರದಲ್ಲಿ ಮಹಿಳಾ ಆಯೋಗದ ಸೆಲ್

**ಕಲಬುರಗಿ:** ಕೌಟುಂಬಿಕ ದೌರ್ಜನ್ಯ, ಲೈಂಗಿಕ ದೌರ್ಜನ್ಯ ಹೀಗೆ ವಿವಿಧ ಪ್ರಕರಣಗಳಲ್ಲಿ ಮಹಿಳೆ ಯರು ದೂರು ನೀಡಲು ಅನುಕೂಲವಾಗುವಂತೆ ರಾಜ್ಯ ಮಹಿಳಾ ಆಯೋಗದ ಸೆಲ್ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಹೇಳಿದರು. ಆಯೋಗಕ್ಕೆ ದೂರು ಸಲ್ಲಿಸಲು ಜಿಲ್ಲಾ ಹಂತದಲ್ಲಿ ವ್ಯವಸ್ಥೆಯಾದರೆ ಇನ್ನು ಅನುಕೂಲ ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಚೇರಿಯಲ್ಲಿಯೇ ಒಂದು ಸೆಲ್ ಸ್ಥಾಪಿಸಿ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ದೂರದ ಬೆಂಗಳೂರಿಗೆ ಬರುವುದು ತಪ್ಪಲಿದೆ ಎಂದರು.

ಕಲಬುರಗಿ, ಕೋಲಾರದಂತಹ ಗಡಿ ಪ್ರದೇಶದಲ್ಲಿ ಮಹಿಳೆಯರ ಕಳ್ಳ ಸಾಗಾಣೆಗೆ ಕಡಿವಾಣ ಹಾಕಬೇಕಿದೆ. ಅಪಹರಣಕ್ಕೊಳಗಾಗುವ ಬಾಲಕಿಯರು, ಮಹಿಳೆಯರನ್ನು ಕಾನೂನು ಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳುವ ದೊಡ್ಡ ಮಾಫಿಯಾ ಇದ್ದು, ಇದಕ್ಕಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಬೇಕಿದೆ.

**-ಡಾ.ನಾಗಲಕ್ಷ್ಮೀ ಚೌಧರಿ**, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

## ನಂಜುಂಡೇಶ್ವರನ ಹುಂಡಿಯಲ್ಲಿ 1.69 ಕೋಟಿ ರು. ನಗದು

**ಮೈಸೂರು:** ಐತಿಹಾಸಿಕ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನಕ್ಕೆ ಭಕ್ತಾದಿಗಳು ಒಂದೇ ತಿಂಗಳಲ್ಲಿ 1.69 ಕೋಟಿ ಹಾಗೂ ಚಿನ್ನಾಭರಣವನ್ನು ಕಾಣಿಕೆಯಾಗಿ ನೀಡಿದ್ದಾರೆ. ಹುಂಡಿಯಲ್ಲಿ 1,69,69,867 ನಗದು, 134 ಗ್ರಾಂ ಚಿನ್ನ, 2.350 ಕೆಜಿ ಬೆಳ್ಳಿ, 23 ವಿದೇಶಿ ಕರೆನ್ಸಿಗಳು ಸಿಕ್ಕಿವೆ. ದೇವಾಲಯದ ದಾಸೋಹ ಭವನದಲ್ಲಿ, ದೇವಸ್ಥಾನದ ಸಿಬ್ಬಂದಿ, ಬ್ಯಾಂಕ್ ಆಫ್ ಬರೋಡಾ ಸಿಬ್ಬಂದಿ ಹಾಗೂ ಸ್ವಸಹಾಯ ಸಂಘದ ನೂರಕ್ಕೂ ಹೆಚ್ಚು ಮಹಿಳಾ ಸದಸ್ಯರು ಹುಂಡಿಯಲ್ಲಿರುವ ಹಣ, ಚಿನ್ನಾಭರಣವನ್ನು ಎಣಿಕೆ ಮಾಡಿದರು. ಈ ವೇಳೆಯಲ್ಲಿ ನಂಜುಂಡೇಶ್ವರ ದೇವಸ್ಥಾನದ ಕಾರ್ಯನಿರ್ವಾಧಿಕಾರಿ ಜಗದೀಶ್ ಕುಮಾರ್ ತಹಸೀಲ್ದಾರ್ ವಿದ್ಯುಲತಾ, ಎಇಒ ಸತೀಶ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಬ್ಯಾಂಕ್ ಆಫ್ ಬರೋಡಾ ವ್ಯವಸ್ಥಾಪಕ ಟಿ.ಕೆ. ನಾಯಕ್ ಇದ್ದರು.

# ರಾಜ್ಯದಲ್ಲಿ ಡಿಸಿಎಂ ಹುದ್ದೆ ಖಾಲಿ ಇಲ್ಲ

**ಬೆಳಗಾವಿ:** ರಾಜ್ಯದಲ್ಲಿ ಡಿಸಿಎಂ ಹುದ್ದೆ ಖಾಲಿ ಇಲ್ಲ. ನಾನು ಯಾರು ಪರ ಹಾಗೂ ಯಾರ ವಿರೋಧ ಇಲ್ಲ. ಡಿಸಿಎಂ ಸ್ಥಾನ ಖಾಲಿ ಇದ್ದಾಗ ಹೈಕಮಾಂಡ್ ನೋಡುತ್ತದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮದು ಜಾತ್ಯಾತೀತ ನಿಲುವು ಇರುವ ಪಕ್ಷ ಕಾಂಗ್ರೆಸ್. ವೈಯಕ್ತಿಕವಾಗಿ ಕೆಲವರು ಮಾತನಾಡಿದ್ದನ್ನು ಪಕ್ಷ ತೀರ್ಮಾನ ಮಾಡುತ್ತದೆ. ಜವಾಬ್ದಾರಿ ಸ್ಥಾನದಲ್ಲಿ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿ ಇದ್ದು ಅವರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಈ ಕುರಿತು ನಾನು ಮಾತನಾಡುವುದಿಲ್ಲ ಎಂದರು. ಚನ್ನಪಟ್ಟಣದಲ್ಲಿ ಡಿಕೆ ಶಿವಕುಮಾರ್ ವಾಸ್ತವ್ಯ ವಿಚಾರವಾಗಿ ಮಾತನಾಡಿದ ಅವರು, ಚನ್ನ ಪಟ್ಟಣಕ್ಕೆ ಯಾವಾಗ ಬೇಕಾದರೂ ಚುನಾವಣೆ ಘೋಷಣೆ ಆಗಬಹುದು. ಡಿಕೆಶಿ ಅಥವಾ ಡಿಕೆ ಸುರೇಶ್ ಯಾರು ಅಂತಾ ತೀರ್ಮಾನ ಆಗಿಲ್ಲ. ಈ ಬಗ್ಗೆ ಸಿಎಂ, ಡಿಸಿಎಂ ಕುಳಿತು ಚರ್ಚೆ ಮಾಡುತ್ತಾರೆ ಎಂದರು.

ಮಂಡ್ಯದಲ್ಲಿ ನನ್ನ ಸೋಲಿಸಲು ಯತ್ನಿಸಿದ್ರೂ ಎಂಬ ಕುಮಾರಸ್ವಾಮಿ ಹೇಳಿಕೆ ವಿಚಾರಕ್ಕೆ ಉತ್ತರಿಸಿದ ಅವರು, ನಮ್ಮನ್ನ ಸೋಲಿಸಲು ನೋಡಿದರೂ ಆಗ ನಾವು ಗೆದ್ದೆವು. ನಾನು ಜೆಡಿಎಸ್ ನಲ್ಲಿ ಇಲ್ಲಾ ನಮ್ಮ ಪಕ್ಷದ ಪರವಾಗಿ ಕೆಲಸ ಮಾಡಬೇಕು. ನಮ್ಮ ಅಭ್ಯರ್ಥಿ ಗೆಲ್ಲಿಸಲು ಕೆಲಸ ಮಾಡಿದ್ದೇವೆ. ಕುಮಾರಸ್ವಾಮಿ ಅವರು ಕೆಲಸ ಮಾಡಲಿ ಒಂದು ವರ್ಷ ಏನೂ ಮಾತಾಡಲ್ಲ. ಕುಮಾರ ಸ್ವಾಮಿ ಹೊಸದಾಗಿ ಕೇಂದ್ರದಲ್ಲಿ ಮಂತ್ರಿ ಆಗಿ ದ್ದಾರೆ. ತಂದೆ ಮಾಡಲು ಆಗದ್ದನ್ನ ಕೆಲಸ ಮಾಡುತ್ತೇನೆ ಎಂದು ಭರವಸೆ ಕೊಟ್ಟಿದ್ದಾರೆ. ಅವರು ಕೆಲಸ ಮಾಡಿದರೆ ನಾನು ಹೆಚ್ಚು ಖುಷಿ ಪಡುತ್ತೇನೆ. ಈಗ ಕುಮಾರಸ್ವಾಮಿ ಬಗ್ಗೆ ಟೀಕೆ ಟಿಪ್ಪಣಿ ಮಾಡುವುದಿಲ್ಲ ಎಂದರು.

### ರಾಜ್ಯದಲ್ಲಿ 7 ಹೊಸ ಕೃಷಿ ತರಬೇತಿ ಕೇಂದ್ರ

ರಾಜ್ಯದಲ್ಲಿ ಈ ವರ್ಷ 7 ಜಿಲ್ಲೆಗಳಲ್ಲಿ ಹೊಸದಾಗಿ ಕೃಷಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಕೃಷಿಕರಿಗೆ ಯೋಜಿತ ತರಬೇತಿ ನೀಡಿ ಸಾಮರ್ಥ್ಯ ಅಭಿವೃದ್ಧಿಗೆ ಕ್ರಮವಹಿಸಲಾಗುತ್ತಿದೆ . ವಿಜಯನಗರ ಯಾದಗಿರಿ ,ಗದಗ ,ಕೋಲಾರ, ಚಾಮರಾಜನಗರ, ರಾಮನಗರ,ಉಡುಪಿ ಜಿಲ್ಲೆಗಳಲ್ಲಿ ಹೊಸ ಕೃಷಿ ತರಬೇತಿ ಕೇಂದ್ರ ಪ್ರಾರಂಭ ಮಾಡಲಾಗುವುದು ಎಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

## ಚುನಾವಣೆಯಲ್ಲಿ ಸೋತಿರುವೆ, ಸತ್ತಿಲ್ಲ

**ಕುಣಿಗಲ್:** ಲೋಕಸಭಾ ಚುನಾವಣೆಯಲ್ಲಿ ಸೋತಿರುವೆ, ಸತ್ತಿಲ್ಲ. ತಾಲೂಕಿನ ಜನರಿಗೆ ಹೇಮಾವತಿ ನೀರಿನ ವಿಚಾರವಾಗಿ ಆಗಿರುವ ಅನ್ಯಾಯ ಸರಿ ಪಡಿಸಲು ನಿರಂತರ ಹೋರಾಟ ಮುಂದುವರೆಸಲಾಗುವುದು ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತ ನಾಡಿ, ಹೇಮಾವತಿ ನಾಲಾ ಯೋಜನೆ ರೂಪಿತವಾಗಿದ್ದೆ ತಾಲೂಕಿನ ನೀರಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರವಾಗಿ. ಆದರೆ ನೀರಿಗಾಗಿ ಹೋರಾಟ ಮಾಡಿ ಜನಮನದಲ್ಲಿ ಶಾಶ್ವತ ಸ್ಥಾನ ಪಡೆದ ಹುಚ್ಚಮಾಸ್ತಿಗೌಡ, ವೈ.ಕೆ. ರಾಮಯ್ಯ ಶ್ರಮ ಸಾರ್ಥಕವಾಗಿಲ್ಲ. ಮೂಲ ಯೋಜನೆಯ ಪ್ರಕಾರ ಕುಣಿಗಲ್ ಭಾಗಕ್ಕೆ ಹರಿಯಬೇಕಿದ್ದ ನೀರು, ಜಿಲ್ಲೆಯ ಇತರೆ ಅಂದರೆ ಮೂಲ ಯೋಜನೆಯಲ್ಲಿಲ್ಲದ ಮತ್ತೂ ಕೃಷ್ಣ ಮೇಲ್ದಂಡೆ ಪ್ರದೇಶ ಗಳಿಗೆ ಹರಿಯುತ್ತಿದೆ.

ತಾಲೂಕಿನ ರೈತರಿಗೆ ಎರಡು ದಶಕಗಳಿಂದ ಆಗುತ್ತಿರುವ ಅನ್ಯಾಯ ಸರಿಪಡಿಸುವ ಉದ್ದೇಶದಿಂದ ಲಿಂಕ್ ಕೆನಾಲ್ ಯೋಜನೆ ಜಾರಿಗೆ ಬಂದಿದೆ. ಯೋಜನೆಯ ಸಫಲತೆಗಾಗಿ ಜಿಲ್ಲೆ ಜನಪ್ರತಿನಿಧಿಗಳು ಸಮಯ ನೀಡಿದರೆ ಮಾತುಕತೆ ನಡೆಸುವುದಾಗಿ ತಿಳಿಸಿದರು. ಸದ್ಯಕ್ಕೆ ಕ್ಷೇತ್ರದ ಜನತೆ ವಿಶ್ರಾಂತಿ ನೀಡಿದ್ದಾರೆ. ಚುನಾವಣಾ ರಾಜಕಾರಣದಿಂದ ದೂರವಿರುವುದಾಗಿ ತಿಳಿಸಿದರೂ ಪಕ್ಷದ ನಿರ್ಧಾರಗಳಿಗೆ ಬದ್ಧ ಎಂದರು.

## ಬೆಲೆ ಏರಿಸಿದ ಸಿದ್ದರಾಮಯ್ಯ ವಚನ ಭ್ರಷ್ಟರು



**ಮೈಸೂರು:** ಮುಖ್ಯ ಮಂತ್ರಿಗಳು ಸದನ ಕರೆಯ ಬೇಕು. ಯಾಕೆಂದರೆ ಸಾಮಾನ್ಯ ಜನರಿಗೆ ಹೊರೆಯಾಗು ವಂತೆ ಅಗತ್ಯ ವಸ್ತುಗಳ ಬೆಲೆ ಏರಿಸುವುದಿಲ್ಲ ಎಂದು ಅವರು ವಚನ ಕೊಟ್ಟಿದ್ದರು. ಈಗ ದಿಢೀರ್ ಎಂದು ಹಾಲಿನ ದರ ಏರಿಸಿದ್ದಾರೆ. ವಚನ ಕೊಟ್ಟು ದರ ಏರಿಸಿದ ನೀವು ವಚನ ಭ್ರಷ್ಟರಾಗಿದ್ದೀರಿ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಗೆ ಮುನ್ನ ಜನರಿಗೆ ಯಾವುದೇ ಬೆಲೆ ಹೆಚ್ಚಿಸುವುದಿಲ್ಲ ಎಂದು ವಚನ ನೀಡಿದ್ದರು ಎಂದು ಕಿಡಿ ಕಾರಿದರು.

## ಮೋದಿ ಸುಳ್ಳಾಟ ಬಯಲಿಗೆ ಎಳೆಯಲು ಅವಕಾಶ

**ಧಾರವಾಡ:** ಈಗ ರಾಹುಲ್ ಗಾಂಧಿ ವಿಪಕ್ಷ ನಾಯಕರಾಗಿದ್ದಾರೆ. ಈಗ ವೇಡಯವರ ಸುಳ್ಳಾಟ ಬಯಲಿಗೆ ಎಳೆಯಲು ಒಳ್ಳೆಯ ಅವಕಾಶವಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಲೋಕಸಭೆ ವಿಪಕ್ಷ ನಾಯಕರಾಗಿ ರಾಹುಲ್ ಗಾಂಧಿ ಆಯ್ಕೆ ವಿಚಾರದ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವುದು ಖುಷಿ ಇದೆ. ರಾಹುಲ್ ಗಾಂಧಿ ಸಮರ್ಥರಿದ್ದಾರೆ ಎಂದು ತಿಳಿಸಿದರು.

### ಆಪ್ತ ಶಿವಕುಮಾರ್ ಗಂಭೀರ ಆರೋಪ | ಸಲಿಂಗ ದೌರ್ಜನ್ಯದ ಎರಡನೇ ಪ್ರಕರಣ ದಾಖಲು

# ಸೂರಜ್ ರೇವಣ್ಣ ವಿರುದ್ಧ ಮತ್ತೊಂದು ದೂರು

**ಬೆಂಗಳೂರು/ಹಾಸನ:** ಜೆಡಿಎಸ್ ಕಾರ್ಯಕರ್ತನ ಮೇಲೆ ದೌರ್ಜನ್ಯ ಎಸಗಿದ ಪ್ರಕರಣ ದಲ್ಲಿ ಸಿಐಡಿ ವಶದಲ್ಲಿರುವ ಜೆಡಿಎಸ್ ಎಂಎಲ್ಸಿ ಡಾ. ಸೂರಜ್ ರೇವಣ್ಣಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಸೂರಜ್ ರೇವಣ್ಣ ವಿರುದ್ಧ ಎರಡನೇ ಪ್ರಕರಣ ದಾಖಲಾಗಿದೆ. ಸೂರಜ್ ರೇವಣ್ಣ ಆಪ್ತ ಶಿವಕುಮಾರ್ ಎನ್ನುವವರು ಹೊಳೆ ನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಸೂರಜ್ ರೇವಣ್ಣ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದ ಸಂತ್ರಸ್ತನ ಮೇಲೆ ಶಿವಕುಮಾರ್ ದೂರು ಕೊಟ್ಟಿದ್ದರು. ಹಣಕ್ಕಾಗಿ ಬೇಡಿಕೆ ಇಟ್ಟಿದ್ದ, ಹಣ ಕೊಡದ ಕಾರಣ ಸೂರಜ್ ರೇವಣ್ಣ ವಿರುದ್ಧ ಸಂತ್ರಸ್ತ ಸುಳ್ಳು ಆರೋಪ ಮಾಡುತ್ತಿದ್ದಾನೆ ಎಂದು ಶಿವಕುಮಾರ್ ದೂರು ಕೊಟ್ಟಿದ್ದರು. ಈಗ ಅದೇ ಶಿವಕುಮಾರ್ ಸೂರಜ್ ರೇವಣ್ಣ ವಿರುದ್ಧವೇ ದೂರು ಕೊಟ್ಟಿದ್ದು, ಪ್ರಕರಣ ಮತ್ತೊಂದು ತಿರುವು ಪಡೆದಿದೆ.

### ಶಿವಕುಮಾರ್ ಆರೋಪಗಳೇನು?

ಸೂರಜ್ ರೇವಣ್ಣ ನನ್ನನ್ನು ಬೆದರಿಸಿ ಸಂತ್ರಸ್ತನ ವಿರುದ್ಧ ದೂರು ಕೊಡಿಸಲಾಗಿತ್ತು ಎಂದು ಶಿವಕುಮಾರ್ ಆರೋಪಿಸಿದ್ದಾರೆ. ಅಲ್ಲದೆ ಸೂರಜ್ ರೇವಣ್ಣ ನನ್ನ ಮೇಲೂ ಲೈಂಗಿಕ ದೌರ್ಜನ್ಯ ಎಸಗಿದ್ದರು ಎಂದು ಮತ್ತೊಂದು ಗಂಭೀರ ಆರೋಪ ಮಾಡಿದ್ದಾರೆ. ಶಿವಕುಮಾರ್ ಹೇಳಿಕೆಗಳನ್ನು ಪೊಲೀಸರು ದಾಖಲಿಸಿಕೊಂಡಿದ್ದು, ಸೂರಜ್ ರೇವಣ್ಣಗೆ ಮತ್ತೊಂದು ಸಂಕಷ್ಟ ಎದುರಾಗಲಿದೆ.

### ಮತ್ತೊಂದು ಪ್ರಕರಣ ಸಿಐಡಿಗೆ

ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ವಿರುದ್ಧದ ಅಸಹಜ ಲೈಂಗಿಕ ದೌರ್ಜನ್ಯ ಆರೋಪದ ಎರಡನೇ ಪ್ರಕರಣ ಕೂಡ ಸಿಐಡಿಗೆ ಹಸ್ತಾಂತರ ಮಾಡಿ ಸರಕಾರ ಆದೇಶಿಸಿದೆ. ಹಾಸನ ಜಿಲ್ಲೆಯ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಜೂ.22 ರಂದು ಮೊದಲ ಪ್ರಕರಣ ದಾಖಲಾಗಿತ್ತು. ಜೂ.23ರಂದು ಪ್ರಕರಣದ ತನಿಖೆ ಸಿಐಡಿಗೆ ಹಸ್ತಾಂತರ ಮಾಡಿ ಆದೇಶಿಸಿತ್ತು. ಇನ್ನು ಹೊಳೆ ನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಜೂ.25 ರಂದು ಮತ್ತೊಂದು ಪ್ರಕರಣ ದಾಖಲಾದ ಹಿನ್ನಲೆ ಎರಡನೇ ಪ್ರಕರಣವನ್ನು ಕೂಡ ಸಿಐಡಿಗೆ ಹಸ್ತಾಂತರ ಮಾಡಿ ಆದೇಶಿಸಲಾಗಿದೆ. ಅದರಂತೆ ಪ್ರಕರಣದ ಕಡತಗಳನ್ನು ಸಿಐಡಿಗೆ ಪೊಲೀಸರು ಹಸ್ತಾಂತರಿಸಲಿದ್ದಾರೆ. ಇನ್ನು ಮೊದಲ ಪ್ರಕರಣದಲ್ಲಿ ಅರಕಲಗೂಡು ಮೂಲದ ಯುವಕ ದೂರು ನೀಡಿದ್ದರೆ, 2ನೇ ಪ್ರಕರಣದಲ್ಲಿ ಹೊಳೆನರಸೀಪುರ ಮೂಲದ ಯುವಕ ದೂರು ನೀಡಿದ್ದ. ಇದೀಗ ಎರಡೂ ಪ್ರಕರಣಗಳ ತನಿಖೆ ಸಿಐಡಿಗೆ ಹಸ್ತಾಂತರ ಮಾಡಲಾಗಿದೆ.

### ಸೀರೆ ಉಡುತ್ತಿದ್ದ ಸೂರಜ್: ಸಂತ್ರಸ್ತ

ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಈಗ ಪೊಲೀಸ್ ವಶದಲ್ಲಿರುವ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಬಗ್ಗೆ ಸಂತ್ರಸ್ತ ಯುವಕ ಕುತೂಹಲಕಾರಿ ಹೇಳಿಕೆ ನೀಡಿದ್ದಾನೆ. ಸೂರಜ್ ರೇವಣ್ಣ ಅಮಾವಾಸ್ಯೆ ದಿನ ಬಳೆ ತೊಟ್ಟು, ಸೀರೆ ಉಡುತ್ತಾರೆ ಎಂದು ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ಸೂರಜ್ ರೇವಣ್ಣ ಅವರ ಕುರಿತು ಜೆಡಿಎಸ್ ಕಾರ್ಯಕರ್ತ ಹಾಗೂ ಸಂತ್ರಸ್ತ ಯುವಕ ಖಾಸಗಿ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಬೆಚ್ಚಿಬೀಳುವಂತಹ ಮಾಹಿತಿ ನೀಡಿದ್ದಾನೆ. 2019ರ ಚುನಾವಣೆ ಸಂದರ್ಭದಲ್ಲಿ ನಾನು ಅವರನ್ನು ಭೇಟಿ ಮಾಡಿದ್ದೆ. ಅರಕಲಗೂಡಿನಲ್ಲಿ ಜೆಡಿಎಸ್ ಕಾರ್ಯಕ್ರಮ ಚೆನ್ನಾಗಿ ಮಾಡಿದ್ದೀಯ ಎಂದು ನನ್ನನ್ನು ಹೊಗಳಿ ನನ್ನ ಫೋನ್ ನಂಬರ್ ತೆಗೆದುಕೊಂಡರು. ನಂತರ ಅವರ ವಿಸಿಟಿಂಗ್ ಕಾರ್ಡ್ ಕೊಟ್ಟರು. ನಂತರ ಅವರು ನನ್ನ ಜತೆಗೆ ದೂರವಾಣಿಯಲ್ಲಿ ಮಾತನಾಡಿದರು. ಸೂರಜ್ ರೇವಣ್ಣ ಅವರು ಗುಡ್ ಈವನಿಂಗ್ ಸಂದೇಶ ಜತೆ ಲವ್ ಸಿಂಬಲ್ ಕಳಿಸಿ ಮಾತು ಆರಂಭಿಸಿದರು. ಬಳಿಕ ಫಾರ್ಮ್‌ಹೌಸ್‌ಗೆ ಕರೆಸಿಕೊಂಡು ಬಲಾತ್ಕಾರದಿಂದ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಸಂತ್ರಸ್ತ ಜೆಡಿಎಸ್ ಕಾರ್ಯಕರ್ತ ಹೇಳಿದ್ದಾನೆ.

### ಶಿವಕುಮಾರ ವಿರುದ್ಧ ದುರ್ಬಳಕೆ ಆರೋಪ

**ಹಾಸನ:** ಸೂರಜ್ ರೇವಣ್ಣಗೆ ಬ್ಲಾಕ್ ಮೇಲ್ ಮಾಡಲಾಗಿದೆ ಎಂದು ಈ ಮೊದಲು ದೂರು ನೀಡಿದ್ದ ಶಿವಕುಮಾರಗೆ ಸಂಕಷ್ಟ ಎದುರಾಗಿದ್ದು, ಹಣ ದುರುಪಯೋಗ ಆರೋಪದಡಿ ಎಫ್ಐಆರ್ ದಾಖಲಾಗಿದೆ. ಶ್ರೀರಾಮ್ ಫೈನಾನ್ಸ್ ರಾಮನಾಥಪುರ ಶಾಖೆಯಲ್ಲಿ ಉದ್ಯೋಗದಲ್ಲಿದ್ದ ಶಿವಕುಮಾರ, ವಾಹನ ಸಾಲ ಪಡೆದು ಸಂಸ್ಥೆಗೆ ಹಣ ಕಟ್ಟಲು ಗ್ರಾಹಕರು ನೀಡಿದ್ದ ಸುಮಾರು 3 ಲಕ್ಷ ಹಣ ದುರ್ಬಳಕೆ ಮಾಡಿಕೊಂಡಿದ್ದಾನೆ ಎಂದು ದೂರಲಾಗಿದೆ. ಈ ಸಂಬಂಧ ಕೊಣನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಜೂ.21 ರಂದು ರಾಮನಾಥಪುರ ಶಾಖೆ ಮ್ಯಾನೇಜರ್ ಕೇಶವಮೂರ್ತಿ ದೂರು ನೀಡಿದ್ದರು.

## ಮತ್ತೊಮ್ಮೆ ಚೆನ್ನಾಂಬಿಕಾ ನಿವಾಸದಲ್ಲಿ ಸ್ಥಳ ಮಹಜರು

**ಹೊಳೆನರಸೀಪುರ:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣ ಹಿನ್ನೆಲೆ ಬುಧವಾರ ಎಸ್‌ಐಟಿ ಪೊಲೀಸರು ಪಟ್ಟಣದ ಪ್ರಜ್ವಲ್ ನಿವಾಸದಲ್ಲಿ ಸ್ಥಳ ಮಹಜರು ನಡೆಸಿದರು.

ಪ್ರಜ್ವಲ್ ವಿರುದ್ಧದ ಮೂರನೇ ಪ್ರಕರಣದಲ್ಲಿ ಎಸ್‌ಐಟಿ ತಂಡ ಸ್ಥಳ ಮಹಜರ್‌ಗೆ ಪ್ರಜ್ವಲ್ ಕರೆತಂದಿತ್ತು. ತಂದೆ ಎಚ್.ಡಿ.ರೇವಣ್ಣ ಅವರ ಚೆನ್ನಾಂಬಿಕಾ ನಿವಾಸಕ್ಕೆ ಕರೆತಂದು ಸುಮಾರು 2 ಗಂಟೆ ಕಾಲ ಶೋಧನೆ ನಡೆಸಿತು.

ನ್ಯಾಯಾಂಗ ಬಂಧನದಲ್ಲಿದ್ದ ಪ್ರಜ್ವಲ್ ಅವರನ್ನು ಮೂರನೇ ಪ್ರಕರಣದಲ್ಲಿ ಮತ್ತೆ ಕಸ್ಟಡಿಗೆ ಪಡೆದಿರುವ ಎಸ್‌ಐಟಿ, ಇದರ ಮುಂದುವರಿದ ಭಾಗವಾಗಿ ಪಟ್ಟಣಕ್ಕೆ ಕರೆ ತಂದು ವಿಚಾರಣೆ ನಡೆಸಿತು. ಎಸ್‌ಐಟಿ ತಂಡದಲ್ಲಿರುವ ಹಾಸನ ಡಿವೈಎಸ್ಪಿ ತಮ್ಮಯ್ಯ ಸಹ ಇದ್ದರು. ಸ್ಥಳ ಮಹಜರ್ ನಡೆಸಿ ಎಸ್‌ಐಟಿ ತಂಡ ಮತ್ತೆ ಬೆಂಗಳೂರಿಗೆ ತೆರಳಿತು. ಮುನ್ನೆಚ್ಚರಿಕೆ ಕ್ರಮವಾಗಿ ಚೆನ್ನಾಂಬಿಕಾ ನಿವಾಸದಲ್ಲಿ ಪೊಲೀಸ್ ಬಂದೋ ಬಸ್ತ್ ಏರ್ಪಡಿಸಲಾಗಿತ್ತು.

## ನಿತ್ಯ ಫೋನ್ ಮಾಡಿ ಬಟ್ಟೆ ಕಳಚಲು ಹೇಳುತ್ತಿದ್ದ ಪ್ರಜ್ವಲ್

**ಬೆಂಗಳೂರು:** ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ನಾಲ್ಕನೇ ಪ್ರಕರಣ ದಾಖಲಾಗಿದ್ದು, ಆರೋಪಿಯ ಕುರಿತು ಇನ್ನಷ್ಟು ವಿಕೃತಿಯ ದೂರುಗಳು ದಾಖಲಾಗಿವೆ.

ಸಿಐಡಿ ಸೈಬರ್ ಕ್ರೈಂ ಠಾಣೆಯಲ್ಲಿ ಸಂತ್ರಸ್ತೆ ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಾಗಿದೆ. ಮಗನ ಶಾಲೆ ವಿಚಾರಕ್ಕೆ ಪ್ರಜ್ವಲ್‌ನನ್ನು ಸಂತ್ರಸ್ತ ಮಹಿಳೆ ಭೇಟಿಯಾಗಿದ್ದರು. ಭೇಟಿ ವೇಳೆ ಸಂತ್ರಸ್ತೆಯಿಂದ ಪ್ರಜ್ವಲ್ ಫೋನ್ ನಂಬರ್ ಪಡೆದಿದ್ದ. ನಂಬರ್ ಪಡೆದು ವಿಡಿಯೊ ಕಾಲ್ ಮಾಡಿ ದಿನ ನಿತ್ಯ ಮಾತನಾಡುತ್ತಿದ್ದ. ನಂತರ ಮಹಿಳೆಗೆ ವಿಡಿಯೊ ಕಾಲ್ ಮಾಡಿ ವಿವಸ್ತ್ರವಾಗುವಂತೆ ಒತ್ತಾಯಿಸುತ್ತಿದ್ದ. ವಿವಸ್ತ್ರಗೊಂಡ ಮಹಿಳೆಯನ್ನು ನೋಡುತ್ತ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದ. ವಿವಸ್ತ್ರವಾಗಲು ಒಪ್ಪದಿದ್ದಾಗ ವಿಡಿಯೊ ಸೇವ್ ಮಾಡಿಕೊಂಡಿರುವುದಾಗಿಯೂ, ವೈರಲ್ ಮಾಡುವುದಾಗಿಯೂ ಬೆದರಿಕೆ ಹಾಕಿದ್ದ ಎಂದು ಆರೋಪಿಸಲಾಗಿದೆ.

ನಂತರ ಏಕಾಏಕಿ ಸಾಮಾಜಿಕ ಜಾಲತಾಣದಲ್ಲಿ ಈ ಫೋಟೊ ವೈರಲ್ ಆಗಿರುವ ವಿಚಾರ ಸಂತ್ರಸ್ತೆ ಗಮನಕ್ಕೆ ಬಂದಿದೆ. ಈ ಕುರಿತು ಪ್ರಜ್ವಲ್‌ನನ್ನು ಸಂತ್ರಸ್ತ ಮಹಿಳೆ ಸಂಪರ್ಕ ಮಾಡಿದ್ದಾರೆ. ಆಗ ತಡೆಯಾಜ್ಞೆ ತಂದಿದ್ದೇನೆ, ಏನೂ ಆಗಲ್ಲ ಎಂದಿದ್ದ. ಎರಡನೇ ಬಾರಿ ಫೋಟೊ ವೈರಲ್ ಆದಾಗ ಸಂತ್ರಸ್ತೆ ದೂರು ನೀಡಲು ಮುಂದಾಗಿದ್ದರು. ವೈರಲ್ ಆದ ಕೆಲವು ಫೋಟೊಗಳನ್ನು ಕಿರಣ್, ಶರತ್ ಹಾಗೂ ಪ್ರೀತಂ ಗೌಡ ವೈರಲ್ ಮಾಡಿಸಿರುವ ಆರೋಪ ಇದೆ. ಈ ಹಿನ್ನೆಲೆಯಲ್ಲಿ ಒಟ್ಟು ನಾಲ್ಕು ಜನರ ಮೇಲೆ ದೂರು ನೀಡಲು ಮಹಿಳೆ ಮುಂದಾಗಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಎಸ್‌ಐಟಿ ಅಧಿಕಾರಿಗಳಿಂದ ತನಿಖೆ ಚುರುಕು ಪಡೆದಿದೆ.

## ವಿಶ್ವವಾಣಿ

### ಸಂಪಾದಕೀಯ

## ದೇಶದ ಹಿತವೇ ಸದ್ಯದ ತುರ್ತು

18ನೇ ಲೋಕಸಭೆ ತನ್ನ ಮೊದಲ ಅಧಿವೇಶನದಲ್ಲಿಯೇ 1975ರ ತುರ್ತು ಪರಿಸ್ಥಿತಿ ಹೇರಿಕೆಯನ್ನು ಖಂಡಿಸಿ ನಿರ್ಣಯ ಅಂಗೀಕರಿಸಿದೆ. ಪ್ರಧಾನಿ ಇಂದಿರಾಗಾಂಧಿ ಅವರು 21 ತಿಂಗಳ ಕಾಲ ದೇಶದ ಪ್ರಜಾಪ್ರಭುತ್ವವನ್ನು ಹತ್ತಿಕ್ಕಿ, ಸರ್ವಾಧಿಕಾರದ ಆಡಳಿತ ನಡೆಸಿದ ದಿನಗಳನ್ನು ಯಾರೂ ಮರೆಯಲಾಗದು. ಇದು ದೇಶದ ರಾಜಕೀಯ ಚರಿತ್ರೆಗೆ ನಿರ್ಣಾಯಕ ತಿರುವು ಕೊಟ್ಟ ಘಟನೆಯೂ ಹೌದು. ಈ ಅವಧಿಯಲ್ಲಿ ನಡೆದ ಆಡಳಿತದ ಅತಿರೇಕಗಳ ಬಗ್ಗೆ ಈಗಲೂ ಚರ್ಚೆ ನಡೆಯುತ್ತಿದೆ. ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಹೋರಾಟವೇ 1977ರಲ್ಲಿ ಮೊಟ್ಟ ಮೊದಲ ಕಾಂಗ್ರೆಸ್ಸೇತರ ಸರಕಾರ ರಚನೆಗೆ ಅವಕಾಶ ಮಾಡಿಕೊಟ್ಟಿತು. ಈ ಸರಕಾರ ತನ್ನದೇ ವೈರುಧ್ಯಗಳಿಂದ ಉರುಳಿದಾಗ ಜನರು ಎಮರ್ಜೆನ್ಸಿಯ ಅತಿರೇಕ ಗಳನ್ನು ಮರೆತು ಇಂದಿರಾ ಅವರನ್ನು ಮರು ಆಯ್ಕೆ ಮಾಡಿದ್ದೂ ಚರಿತ್ರೆಯಲ್ಲಿ ದಾಖಲಾದ ಅಂಶ. ಈ ಬಳಿಕದ 50 ವರ್ಷಗಳಲ್ಲಿ ದೇಶದ ರಾಜಕೀಯ ಸಾಕಷ್ಟು ಸ್ಥಿತ್ಯಂತರಗಳನ್ನು ಕಂಡಿದೆ. ದೇಶಕ್ಕೇ ತಾನೇ ಪರ್ಯಾಯ ಎಂದು ಮೆರೆಯುತ್ತಿದ್ದ ಕಾಂಗ್ರೆಸ್, 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಕೇವಲ 44 ಸೀಟುಗಳಿಗೆ ಸೀಮಿತವಾಗಿದ್ದೂ ಉಲ್ಲೇಖನೀಯ. ಅಂದು ಕಾಂಗ್ರೆಸ್ ವಿರುದ್ಧ ಹೋರಾಡಲು ಜನತಾ ಪರಿವಾರದೊಂದಿಗೆ ಕೈ ಜೋಡಿಸಿದ್ದ ಜನಸಂಘ, ಇಂದು ಬಿಜೆಪಿ ಹೆಸರಿನಲ್ಲಿ ರೂಪಾಂತರಗೊಂಡು ಆಡಳಿತಾರೂಢ ಪಕ್ಷ ವಾಗಿದೆ. ಅಂದಿನ ಜನತಾ ಪರಿವಾರದ ಹೆಚ್ಚಿನ ಸದಸ್ಯರು ಇಂದು ಕಾಂಗ್ರೆಸ್ ನೇತೃತ್ವದ 'ಇಂಡಿಯ' ಒಕ್ಕೂಟದಲ್ಲಿದ್ದಾರೆ. ಬಿಜೆಪಿ ಅಂದಿನ ದಿನಗಳನ್ನು ನೆನಪಿಸಿ, ಕಾಂಗ್ರೆಸ್‌ಗೆ ತಿರುಗೇಟು ಕೊಡುವ ಪ್ರಯತ್ನ ಮಾಡಿದರೆ, ಕೈ ಪಕ್ಷ ಇಂದಿನ ದಿನಗಳು ಅಘೋಷಿತ ತುರ್ತುಪರಿಸ್ಥಿತಿಯ ಕಾಲ ಎಂದು ಮಾರುತ್ತರ ನೀಡಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ನಿಜ ವಾರಸುದಾರರು ಯಾರೆಂಬ ಬಗ್ಗೆ ಎರಡೂ ಪಕ್ಷಗಳ ನಡುವೆ ವಾಗ್ವಾದ ನಡೆಯುತ್ತಲೇ ಇದೆ. ಇದೆಲ್ಲದರ ನಡುವೆ ತುರ್ತುಪರಿಸ್ಥಿತಿಯ ವಿರುದ್ಧ ಹೋರಾಡಿ, ಕಷ್ಟ ನಷ್ಟ ಅನುಭವಿಸಿದ ಹಲವರು ಕಾಲ ಗರ್ಭ ಸೇರಿದ್ದಾರೆ. ಅಂದು ಹೋರಾಟದ ಕಲಿಗಳಾಗಿದ್ದ ಕೆಲವರು ಇಂದು ತಾವೇ ಸರ್ವಾಧಿಕಾರಿಗಳ ಪೋಷಾಕು ಧರಿಸಿದ್ದಾರೆ. ಇದೇನೇ ಇರಲಿ, ದೇಶಕ್ಕೆ ಸ್ವಾತಂತ್ರ್ಯ ದೊರೆತು 3 ದಶಕಗಳಾಗುವ ಮುನ್ನವೇ ಪ್ರಜಾಪ್ರಭುತ್ವ ಕತ್ತಲೆಗೆ ಸರಿದಾಗ, ದೇಶವಾಸಿಗಳ ಹೃದಯದಲ್ಲಿದ್ದ ಪ್ರಜಾಸತ್ತೆಯ ಹಂಬಲಕ್ಕೆ ಕಿಚ್ಚು ಹಚ್ಚಿದ್ದು ತುರ್ತು ಪರಿಸ್ಥಿತಿ ಘೋಷಣೆ. ದೇಶದ ಸಾಮಾನ್ಯ ಪ್ರಜೆಯಿಂದ ಹಿಡಿದು ಜಯಪ್ರಕಾಶ ನಾರಾಯಣರಂತಹ ನೇತಾರರ ತನಕ ಅಂದು ನಡೆಸಿದ ಹೋರಾಟ 2ನೇ ಸ್ವಾತಂತ್ರ್ಯ ಹೋರಾಟಕ್ಕಿಂತ ಕಡಿಮೆಯದ್ದೇನಾಗಿರಲಿಲ್ಲ. ಮುಂದೆಯೂ ಈ ಘಟನೆ ನಮಗೆ ಎಚ್ಚರಿಕೆಯ ಗಂಟೆಯಾಗಬೇಕು. ರಾಜಕೀಯ ಕೆಸರೆರಚಾಟಕ್ಕಿಂತ ದೇಶದ ಹಿತ ಎಲ್ಲ ಪಕ್ಷಗಳಿಗೂ ಮುಖ್ಯವಾಗಬೇಕು. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ಪೂಜೆ ಗಿಂತ ಸಾಂಘಿಕ ಶಕ್ತಿ, ಸಾಮುದಾಯಿಕ ಶ್ರಮಕ್ಕೆ ಹೆಚ್ಚು ಬೆಲೆ. ಪ್ರಜಾತಂತ್ರದ ತೇರನ್ನು ಎಳೆಯುವಲ್ಲಿ ಭಾರತೀಯರಾದ ನಮಗೆಲ್ಲರಿಗೂ ಸಮಾನ ಪಾತ್ರವಿದೆ.

### ಸೊಂಪಾದಕೀಯ

## ಸ್ಟಾಪ್ ದಿಸ್ ನಾನ್ ಸೆನ್ಸ್

ಕೆಎಸ್‌ಆರ್‌ಟಿಸಿ ಬಸ್ಸುಗಳ ಊಟದ ಸ್ಟಾಪ್ ವಿಷಯದಲ್ಲಿ ಎದ್ದಿದ್ದ ಸಮಸ್ಯೆಗೆ ಈಗ ಪರಿಹಾರ ಸಿಕ್ಕಿದೆ. ಉಪಹಾರದ ವಿಷಯದಲ್ಲಿ ನಮ್ಮ ಸಾರಿಗೆ ಬಸ್ಸುಗಳ ಡ್ರೈವರ್ ಮತ್ತು ಕಂಡಕ್ಟರ್‌ಗಳು ತಾವು ಲಾಭ ಮಾಡಿಕೊಳ್ಳಲು ಪ್ರಯಾಣಿಕರಿಗೆ ಸಂಕಷ್ಟ ತಂದೊಡ್ಡುತ್ತಿದ್ದರು. ತಮಗೆ ಬೇಕಾದ ಊಟವನ್ನು ಫ್ರೀ ಕೊಡುವ ಅಥವಾ ಜೊತೆಗೆ ಕಮಿಷನ್ ಕೊಡುವ ಕಳಪೆ ಹೋಟೇಲ್‌ಗಳ ಮುಂದೆ ಊಟದ ಸಮಯದಲ್ಲಿ ಬಸ್ಸು ನಿಲ್ಲಿಸಿ ಪ್ರಯಾಣಿಕರು ಆ ಹೋಟೆಲ್‌ನವರು ಕೊಟ್ಟ ಕಳಪೆ ಊಟ ಮಾಡಲೇಬೇಕಾದ ಒತ್ತಡ ಹಾಕ್ತಾ ಇದ್ರು. ಅಲ್ಲದೆ ಇಂಥ ಹೋಟೇಲ್ ಗಳಲ್ಲಿ ಸ್ವಚ್ಛತೆ ಇರ್ತಾ ಇರ್ಲಿಲ್ಲ. ಮತ್ತು ಶೌಚಾಲಯಗಳಂತೂ ಕೇಳಲೇಬೇಡಿ ಅನ್ನೋ ಹಾಗಿದ್ದವು. ಹಾಗಾಗಿ ಪ್ರಯಾಣಿಕರು ಇದರ ವಿರುದ್ಧ ದನಿ ಎತ್ತಿದ್ದರು. ಈಗ ಈ ಉಪಹಾರದ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಸರಕಾರ ಹೊರಡಿಸಿರುವ ಹೊಸ ನಿಯಮದ ಪ್ರಕಾರ ಈಗ ಬಸ್ಸುಗಳನ್ನು ತಮಗೆ ಇಷ್ಟ ಬಂದ ಹೋಟೇಲ್‌ಗಳ ಮುಂದೆ ನಿಲ್ಲಿಸುವಂತಿಲ್ಲ. ಊಟದ ಸ್ಟಾಪ್ ವಿಷಯದಲ್ಲಿ ಸ್ಟಾಪ್ ದಿಸ್ ನಾನ್ ಸೆನ್ಸ್ ಅಂತ ಸರಕಾರ ಖಡಕ್ ಆದೇಶ ಹೊರಡಿಸಿರೋದ್ರಿಂದ ಇನ್ನು ಕೆಎಸ್ಸಾರ್ಟಿಸಿ ಬಸ್ಸುಗಳು ಸರಕಾರ ಹೇಳಿದ ಹೋಟೇಲ್ ಮುಂದೆ ಬಸ್ಸು ನಿಲ್ಲಿಸಬೇಕಂತೆ. ಹಾಗಾಗಿ ಇದರಿಂದ ಡ್ರೈವರ್ ಮತ್ತು ಕಂಡಕ್ಟರ್‌ಗಳ ಸರ್ವಾಧಿಕಾರಿ ಧೋರಣೆಗೆ ಬ್ರೇಕ್ ಬಿದ್ದಿದೆ. ಇಂಥ ರೂಟಿನ ಬಸ್ಸುಗಳನ್ನು ಇಂಥ ಹೊಟೇಲ್ ಮುಂದೆಯೇ ಊಟಕ್ಕೆ ನಿಲ್ಲಿಸಬೇಕು ಅಂತ ಹೇಳಿರುವ ಸರಕಾರ ಡ್ರೈವರ್ ಕಂಡಕ್ಟರ್‌ಗಳ ಆಟಾಟೋಪವನ್ನು ನಿಲ್ಲಿಸಲು ಹೇಳಿದೆ. ಸಾರಿಗೆ ಸಂಸ್ಥೆ ಹೋಟೇಲು ಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಿದೆಯಂತೆ. ಮಿತಿ ಮೀರದ ರೇಟು, ಸ್ವಚ್ಛತೆ ಎಲ್ಲದರ ಬಗ್ಗೆಯೂ ನಿಯಮ ಜಾರಿಗೆ ತಂದಿರೋ ಸರಕಾರ ಹೋಟೇಲುಗಳಿಗೆ ಆಟಾಟೋಪಕ್ಕೆ ಕಡಿವಾಣ ಹಾಕಿದೆ. ಅಷ್ಟೇ ಅಲ್ಲದೆ ಇನ್ನುಮುಂದೆ ಕಂಡಕ್ಟರ್ ಕೊಡುವ ಟಿಕೇಟುಗಳಲ್ಲೇ ಇಂಥ ಹೊಟೇಲ್ ಮುಂದೆ ಊಟಕ್ಕೆ ನಿಲ್ಲಿಸಲಾಗುತ್ತದೆ ಅಂತ ಪ್ರಿಂಟ್ ಕೂಡಾ ಮಾಡಬೇಕಾಗುತ್ತದೆ. ಹಾಗಾಗಿ ಇನ್ನುಮುಂದೆ ಪ್ರಯಾಣಿಕರು ತಮ್ಮ ಊರನ್ನು ತಲುಪುವಾಗ ಬಸ್ಸಿನ ಓಟದ ಬಗ್ಗೆ ಮಾತ್ರ ತಲೆಕೆಡಿಸಿಕೊಂಡರೆ ಸಾಕು, ದುಬಾರಿ ಮತ್ತು ಶುಚಿತ್ವ ಇಲ್ಲದ ಊಟದ ಬಗ್ಗೆ ಅಲ್ಲ.

### ಸಂಪಾದಕರ ಸದ್ಯಶೋಧನೆ

## ಮಗ ಮತ್ತು ಹೇರ್ ಸ್ಟೈಲ್

Life is not perfect but your hair can be ಎಂಬ ಮಾತಿದೆ. ತಮ್ಮ ಜೀವನಕ್ಕಿಂತ ಕೂದಲು ಅಥವಾ ಕೇಶ ವಿನ್ಯಾಸ (Hair Style)ಕ್ಕೆ ಯಾರು ಹೆಚ್ಚು ಮಹತ್ವ ಕೊಡುತ್ತಾರೋ, ಅವರಿಗೆ ಈ ಮಾತು ಹೇಳುವುದುಂಟು. ಅಂಥವರು ಕನ್ನಡಿ ಮುಂದೆ ಕೇಶ ವಿನ್ಯಾಸದಲ್ಲೇ ಬಹಳ ಸಮಯ ಕಳೆಯುತ್ತಾರೆ. ಸದಾ ತಮ್ಮ ಕೂದಲನ್ನು 'ಇಸ್ತ್ರಿ' ಹಾಕಿ ಉಜ್ಜಿದಂತೆ ತೀಡುತ್ತಿರುತ್ತಾರೆ. 'ಜೀವನವೇ ಸೊಟ್ಟ, ಈತ ಕೂದಲನ್ನು ನೆಟ್ಟಗೆ ಮಾಡುತ್ತಿದ್ದಾನೆ' ಎಂದು ಗೇಲಿ ಮಾಡುವಾಗ, ಈ ಮಾತನ್ನು ಹೇಳುತ್ತಾರೆ. ಇದೇ ರೀತಿ ಉದ್ದ ಕೂದಲು ಬಿಟ್ಟವರಿಗೆ, Life is short, but your hair doesn't have to be ಎಂದು ಹೇಳುವುದುಂಟು. ಅನೇಕರು ತಮ್ಮ ತಲೆಗೂದಲಿಗೆ ಕೊಡುವಷ್ಟು ಮಹತ್ವ ಮತ್ತು ಆದ್ಯತೆಯನ್ನು ತಲೆಗೆ ಕೊಟ್ಟಿದ್ದರೆ, ಅವರ ಜೀವನವೇ ಬದಲಾಗುತ್ತಿತ್ತು. ಇದನ್ನು ಹೆಂಗಸರಿಗೆ ಅನ್ವಯಿಸಿ, A woman who cuts her hair is about to change her life ಎಂದು ಹೇಳುತ್ತಾರೆ. ಹೇರ್ ಸ್ಟೈಲ್ ಬಗ್ಗೆ ಏನೇ ಬರೆದರೂ ಓದುತ್ತಾರೆ ಎಂಬುದು ಸುದ್ದಿಮನೆಯಲ್ಲಿ ಚಾಲ್ತಿಯಲ್ಲಿರುವ ಮಾತು. ನೀವು ಜೀವನದಲ್ಲಿ ಯಾರನ್ನಾದರೂ ಬದಲಿಸಬಹುದು, ಆದರೆ ಅವರ ಹೇರ್ ಸ್ಟೈಲನ್ನು ಅಲ್ಲ. ಕೆಲವು ವರ್ಷಗಳ ಹಿಂದೆ, ಭಾರತೀಯ ವಾಯು ಸೇನೆಯ ಹಿರಿಯ ಅಧಿಕಾರಿಯೊಬ್ಬರು ಬೆಂಗಳೂರಿಗೆ ಬಂದಿದ್ದರು. 'ಸಂಕಷ್ಟದ ಸಮಯದಲ್ಲಿ ನಾಯಕತ್ವ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಆಗ ಅವರು, ಭಾರತೀಯ ಸೇನೆಯಲ್ಲಿರುವ ಸೈನಿಕರ ಹೇರ್ ಸ್ಟೈಲ್ ಬಗ್ಗೆ ಪ್ರಸ್ತಾಪಿಸಿದರು. 'ಸೈನಿಕರಾದವರು ತಮ್ಮ ಸಮವಸ್ತ್ರಕ್ಕೆ ನೀಡುವಷ್ಟೇ ಪ್ರಾಮುಖ್ಯವನ್ನು ಹೇರ್ ಸ್ಟೈಲ್‌ಗೂ ನೀಡಬೇಕು. ಅದಕ್ಕಾಗಿ ಸೈನಿಕರ ಹೇರ್ ಸ್ಟೈಲ್‌ಗೆ' ಮಿಲಿಟರಿ ಹೇರ್ ಕಟ್' ಎಂದು ಹೇಳುತ್ತಾರೆ. ಬೇಕಾಬಿಟ್ಟಿ ಕೂದಲು ಬಿಟ್ಟ ಸೈನಿಕರನ್ನು ನೋಡಲು ಸಾಧ್ಯವಿಲ್ಲ. ಹಿಪ್ಪಿಗಳನ್ನಂತೂ ನೋಡಲು ಸಾಧ್ಯವೇ ಇಲ್ಲ. ಸುಕ್ಕಾದ ಸಮವಸ್ತ್ರ ಧರಿಸಿದ ಸೈನಿಕರನ್ನು ನೋಡುವುದು ಹೇಗೆ ಸಾಧ್ಯವಿಲ್ಲವೋ, ಅದೇ ರೀತಿ ಕೆದರಿದ ಕೂದಲಿನ ಸೈನಿಕರನ್ನು ನೋಡುವುದು ಸಾಧ್ಯವಿಲ್ಲ. ಸೇನೆಯಲ್ಲಿ ಹೇರ್ ಸ್ಟೈಲ್‌ಗೆ ಅಷ್ಟೊಂದು ಮಹತ್ವ' ಎಂದು ವಿವರಿಸಿದರು. ಆ ಸಂದರ್ಭದಲ್ಲಿ ಅವರು ತಮ್ಮ ಅನುಭವವನ್ನು ಹಂಚಿಕೊಂಡರು. 'ನನಗೆ ಅಧಿಕಾರ ಕೊಟ್ಟರೆ ನನ್ನ ಜತೆಯಲ್ಲಿ ಕೆಲಸ ಮಾಡುವ ಇಪ್ಪತ್ತು ಸಾವಿರ ಸೈನಿಕರ ಹೇರ್ ಸ್ಟೈಲ್‌ನ್ನು ಒಂದೇ ದಿನದಲ್ಲಿ ಬದಲಿಸಬಲ್ಲೆ. ಆದರೆ ನನ್ನ ಒಬ್ಬ ಮಗನ ಹೇರ್ ಸ್ಟೈಲ್‌ನ್ನು ಈ ಜನ್ಮದಲ್ಲಿ ಬದಲಿಸಲಾರೆ. ನಾನು ಕಳೆದ ನಾಲ್ಕು ವರ್ಷಗಳಿಂದ, ನನ್ನ ಮಗನ ಹೇರ್ ಸ್ಟೈಲ್ ಬದಲಿಸಲು ಪ್ರಯತ್ನಿಸಿ ಸೋತು ಹೋಗಿದ್ದೇನೆ. ಈ ವಿಷಯ ಪ್ರಸ್ತಾಪಿಸಿದರೆ ನನ್ನ ಮತ್ತು ಮಗನ ಮಧ್ಯೆ ಭಾರತ - ಪಾಕಿಸ್ತಾನ! ನಾನು ನನ್ನ ಜೀವನದಲ್ಲಿ ಎಂದೂ ಸೋಲನ್ನು ಒಪ್ಪಿಕೊಂಡವನಲ್ಲ, ಒಪ್ಪಿಕೊಳ್ಳುವುದೂ ಇಲ್ಲ. ಆದರೆ ನನ್ನ ಮಗನ ಹೇರ್ ಸ್ಟೈಲ್ ಬದಲಿಸುವ ವಿಷಯದಲ್ಲಿ ನಾನು ದಯನೀಯವಾಗಿ ಸೋತು ಹೋಗಿದ್ದೇನೆ. ನನಗೆ ಬೇಕಾದ ರೀತಿಯಲ್ಲಿ ಹೇರ್ ಸ್ಟೈಲ್ ಮಾಡುವ ಸ್ವಾತಂತ್ರ್ಯ ನನಗಿಲ್ಲವಾ ಎಂದು ಆತ ವಾದಿಸುತ್ತಾನೆ. ಕೂದಲನ್ನು ಬಾಚಿಕೊಳುವುದಿಲ್ಲ, ಅದೇ ನನ್ನ ಸ್ಟೈಲ್ ಅಂತಾನೆ. ಈ ವಿಷಯದಲ್ಲಿ ನನ್ನಂತೆ ಅದೆಷ್ಟೋ ಅಸಂಖ್ಯ ತಂದೆಯರಿದ್ದಾರೆ. ಅವರು ತಮ್ಮ ಸುತ್ತಲಿನ ಜನ ಮತ್ತು ಪರಿಸರವನ್ನು ಬದಲಿಸಿ ಸಾಧಕರು ಎಂದು ಕರೆಯಿಸಿಕೊಂಡಿದ್ದಾರೆ. ಆದರೆ ತಮ್ಮ ಮಕ್ಕಳ ಹೇರ್ ಸ್ಟೈಲ್ ಬದಲಿಸಲು ಹೋಗಿ ಸೋತು ಸುಣ್ಣವಾಗಿದ್ದಾರೆ' ಎಂದು ಹೇಳಿದರು. ಇಡೀ ಸಭೆ ಜೋರಾಗಿ ನಕ್ಕಿತು. ಈ ಬಗ್ಗೆ ನನ್ನದೊಂದು ವಕ್ರತುಂಡೋಕ್ತಿಯಿದೆ – ನಿಮ್ಮ ಮಗ ಹೇರ್ ಸ್ಟೈಲ್ ವಿಷಯದಲ್ಲಿ ಇನ್ನೂ ನಿಮ್ಮ ಮಾತನ್ನು ಕೇಳುತ್ತಾನೆ ಅಂದ್ರೆ ಅವನಿನ್ನೂ ಚಿಕ್ಕವನು ಎಂದರ್ಥ!

# ಎಂದೆಂದೂ ಬದಲಾಗದವರೆಂದರೆ ಇವರು ಮಾತ್ರ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಸುಮಾರು ಎಂಬತ್ತೈದು ವರ್ಷಗಳ ಹಿಂದೆಯೇ ಅಮೆರಿಕದ ಖ್ಯಾತ ನಟ ಹಾಗೂ ಕಮಿಡಿಯನ್, ರಾಜಕಾರಣಿಗಳ ಬಗ್ಗೆ ಹೇಳಿದ ಮಾತು ಇಂದಿಗೂ ಪ್ರಸ್ತುತ. Everything is changing. People are taking their comedians seriously and the Politicians as a joke (ಪ್ರತಿಯೊಂದು ಬದಲಾಗುತ್ತಿದೆ. ಜನರು ತಮ್ಮ ಕಮಿಡಿಯನ್‌ಗಳನ್ನು ಗಂಭೀರವಾಗಿಯೂ, ರಾಜಕಾರಣಿಗಳನ್ನು ಜೋಕ್ ಆಗಿಯೂ ಪರಿಗಣಿಸುತ್ತಿದ್ದಾರೆ). ಇತ್ತೀಚಿನ ವಿದ್ಯಮಾನ ಕಂಡು ರಾಜಕಾರಣ ಹಾಳಾಗಿಹೋಯಿತು, ರಾಜಕಾರಣಿಗಳು ಕೆಟ್ಟು ಹೋದರು ಎಂದು ನಾವು ಅಂದುಕೊಂಡಿದ್ದರೆ ಅದು ಶುದ್ಧ ತಪ್ಪು. ಇಂದಿನ ರಾಜಕಾರಣಿಗಳನ್ನು ನೋಡಿ ಇವರೆಲ್ಲ ಮಹಾಮೋಸಗಾರರು, ಮನೆಹಾಳರು, ಜನರನ್ನು ಶೋಷಿಸುವವರು, ಭ್ರಷ್ಟರು, ಮಹಾಸುಳ್ಳರು ಎಂದೆಲ್ಲ ಜರೆಯ ಬೇಕಿಲ್ಲ. ರಾಜಕಾರಣ ಇರುವುದೇ ಹೀಗೆ. ರಾಜಕಾರಣಿಗಳು ಇರುವುದೇ ಹೀಗೆ. ಈ ವಿಷಯದಲ್ಲಿ ಅವರನ್ನು ಮೆಚ್ಚಲೇಬೇಕು. ಯಾವುದೇ ಕಾಲವಿರಬಹುದು, ಯಾವುದೇ ಶತಮಾನವಿರಬಹುದು ಅವರು ಇರುವುದೇ ಹೀಗೆ. ನಡೆದುಕೊಳ್ಳುವುದೂ ಹೀಗೆ. ಇದಕ್ಕೆ ಯಾವ ದೇಶವೂ ಹೊರತಲ್ಲ. ಈ ಕಾರಣದಿಂದ ನಮ್ಮ ದೇಶದ, ನಮ್ಮ ಊರಿನ ರಾಜಕಾರಣಿಗಳನ್ನು ಮಾತ್ರ ದೂರಬೇಕಿಲ್ಲ. ರಾಜಕಾರಣಿ ಅಂದ್ರೆ ಸಾಕು, ಅವರು ಇರುವುದೇ ಹೀಗೆ ಎಂಬ ತೀರ್ಮಾನಕ್ಕೆ ಬಂದು ಬಿಡಬಹುದು.

ಅಮೆರಿಕದ ಡಾಲರ್‌ಗಿಂತ ದೊಡ್ಡ ಕರೆನ್ಸಿ ಯಾವುದೂ ಇಲ್ಲವಂತೆ. ಕಾರಣ ಅದು ವಿಶ್ವದ ಎಲ್ಲೆಡೆಯೂ ಚಲಾವಣೆಯಲ್ಲಿದೆ. ಡಾಲರ್‌ಗಿಂತ ಹೆಚ್ಚು ಚಲಾವಣೆಯಲ್ಲಿರುವವರೆಂದರೆ ಪಾಲಿಟಿಶಿಯನ್‌ಗಳು. ಡಾಲರ್‌ಗೆ ಒಂದೊಂದು ದೇಶದಲ್ಲಿ ಒಂದೊಂದು ಮೌಲ್ಯವಿದೆ. ಆದರೆ ಪಾಲಿಟಿಶಿಯನ್‌ಗಳಿಗೆ ಹಾಗಲ್ಲ. ಎಲ್ಲ ದೇಶಗಳಲ್ಲೂ ಒಂದೇ ಮೌಲ್ಯ ಹಾಗೂ ಆ ಮೌಲ್ಯ ಎಲ್ಲೆಡೆ ಅಧಃಪತನ ಹೊಂದಿರುತ್ತದೆ. ಜಗತ್ತಿನ ಒಂದೊಂದು ದೇಶದ ಜನ ಒಂದೊಂದು ರೀತಿಯವರಾಗಿರುತ್ತಾರೆ. ಆದರೆ ರಾಜಕಾರಣಿಗಳು ಮಾತ್ರ ಒಂದೇ. ಅಮೆರಿಕ ಮುಂದುವರಿದ ದೇಶ, ಆದ್ದರಿಂದ ಆ ದೇಶದ ರಾಜಕಾರಣಿಗಳು ಸತ್ಯವಂತರು ಎಂದು ಭಾವಿಸಬೇಕಿಲ್ಲ. ಅವರೂ ನಮ್ಮ ಊರಿನ, ನಮ್ಮ ದೇಶದ ರಾಜಕಾರಣಿಗಳಂತೆ, ಅನುಮಾನ ಬೇಡ. ಆದರೆ ಅವರು ರಸ್ತೆ, ಸೇತುವೆಗಾಗಿ ಮೀಸಲಿಟ್ಟ ಹಣದಲ್ಲಿ ಪುಡಿಗಾಸು ತಿನ್ನಬಹುದು, ನಮ್ಮ ರಾಜಕಾರಣಿಗಳ ಹಾಗೆ ರಸ್ತೆಗೆ ರಸ್ತೆಯನ್ನೇ ತಿನ್ನಲಿಕ್ಕಿಲ್ಲ, ಸೇತುವೆಯನ್ನೇ ಕಬಳಿಸಲಿಕ್ಕಿಲ್ಲ. ಅಷ್ಟರಮಟ್ಟಿಗಿನ ವ್ಯತ್ಯಾಸವನ್ನು ಕಾಣಬಹುದು. ಅಷ್ಟರಮಟ್ಟಿಗಿನ ಹೋಲಿಕೆ, ಸಾಮ್ಯತೆಯನ್ನು ಗುರುತಿಸಬಹುದು.

ಉತ್ತರಪ್ರದೇಶ ಹಾಗೂ ಬಿಹಾರದಲ್ಲಿ ರಾಜಕಾರಣಿಗಳನ್ನು ಡಕಾಯಿತರು ಎಂದು ಕರೆಯುವುದುಂಟು. 1996ರಲ್ಲಿ ಡಕಾಯಿತರ ರಾಣಿ (Bandit Queen) ಎಂದೇ ಹೆಸರಾದ ಫೂಲನ್ ದೇವಿಗೆ ಉತ್ತರಪ್ರದೇಶದ ಮಿರ್ಜಾಪುರದಿಂದ ಸ್ಪರ್ಧಿಸಲು ಸಮಾಜವಾದಿ ಪಕ್ಷ ಟಿಕೆಟ್ ನೀಡಿತು. ಆ ಪಕ್ಷದ ನಾಯಕ ಮುಲಾಯಂಸಿಂಗ್ ಯಾದವ್ ಅವರನ್ನು ಪತ್ರಕರ್ತರು ತರಾಟೆಗೆ ತೆಗೆದುಕೊಂಡರು. 'ಡಕಾಯಿತರಿಗೆಲ್ಲ ಟಿಕೆಟ್ ನೀಡುತ್ತೀರಲ್ಲ? ನಿಮಗೆ ಮಾನ-ಮರ್ಯಾದೆ ಇದೆಯಾ? ಅವಳಿಗೆ ಟಿಕೆಟ್ ನೀಡುವುದನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?' ಎಂದು ಯಾದವ್ ಅವರನ್ನು ಕೇಳಿದರು. ಆಗ ಅವರು ಹೇಳಿದ್ದೇನು ಗೊತ್ತಾ? 'ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ನಮ್ಮ ರಾಜಕೀಯ ವೈರಿಗಳನ್ನು ಎದುರಿಸಲು ಫೂಲನ್ ದೇವಿಯೇ ಯೋಗ್ಯ ಅಭ್ಯರ್ಥಿ' ಎಂದರು. ಅಂದರೆ ತಮ್ಮ ರಾಜಕೀಯ ವೈರಿಗಳೂ 'ಡಕಾಯಿತರು' ಎಂದು ಪರೋಕ್ಷವಾಗಿ ಹೇಳಿದರು.

ಚುನಾವಣಾ ಫಲಿತಾಂಶ ಬಂತು.

ಫೂಲನ್ ದೇವಿ ಗೆದ್ದಳು! ಮೊದಲ ಪಾರ್ಲಿಮೆಂಟ್ ಅಧಿವೇಶನ ಮುಗಿಸಿದ ಬಳಿಕ 'ಇಂಡಿಯಾ ಟುಡೇ' (ಪತ್ರಿಕೆ) 'ಡಕಾಯಿತರಾಣಿ'ಯ ಸಂದರ್ಶನವನ್ನು ಪ್ರಕಟಿಸಿತು. ಅದರಲ್ಲಿ ಆಕೆ ಹೇಳಿದ್ದಳು– 'ನೀವೆಲ್ಲ ನನ್ನನ್ನು (ನೀವು ಪತ್ರಿಕೆಯವರೂ ಸೇರಿ) ಡಕಾಯಿತ ರಾಣಿ ಎಂದು ಕರೆಯುತ್ತೀರಿ. ನಾನು ಪರಿಸ್ಥಿತಿ ಒತ್ತಡದಿಂದ, ನನ್ನ ಶೀಲ ಕಾಪಾಡಿಕೊಳ್ಳಲು, ಜಮೀನ್ದಾರರ ಕಾಮ ಪೈಶಾಚಿಕತೆಯಿಂದ ಬಚಾವ್ ಆಗಲು ಡಕಾಯಿತಳಾದೆ. ಆದರೆ ಪಾರ್ಲಿಮೆಂಟ್ ಅಧಿವೇಶನದಲ್ಲಿ ಪಾಲ್ಗೊಂಡ ನಂತರ ನನಗನಿಸುತ್ತಿದೆ, ಅಲ್ಲಿ ನನಗಿಂತ ದೊಡ್ಡ ದೊಡ್ಡ ಡಕಾಯಿತರು ಇದ್ದಾರೆ. ಅವರು ಡಕಾಯಿತರಾಗಲು ನನಗಿದ್ದಂಥ ಅನಿವಾರ್ಯ ಇದ್ದಿರಲಾರದು. ಅದೇನೇ ಇರಲಿ, ನನ್ನ ಒಳಮನಸ್ಸು ಹೇಳುತ್ತಿದೆ, ಈ ಡಕಾಯಿತರ ಮುಂದೆ ನಾನು ಯಶಸ್ವಿಯಾಗುವುದಿಲ್ಲ' ಎಂದು. ಅದಾಗಿ ಎರಡು ವರ್ಷಗಳ ನಂತರ ನಡೆದ ಲೋಕಸಭೆ ಚುನಾವಣೆಯಲ್ಲಿ (1998) ಫೂಲನ್ ದೇವಿ ಸೋತು ಹೋದಳು.

ಚುನಾವಣೆಯಲ್ಲಿ ಸೋತಾಗ ಪತ್ರಕರ್ತರು ಆಕೆಯನ್ನು ಮಾತಾಡಿಸಿದರು. ಆಗ ಆಕೆ ಹೇಳಿದ್ದು– 'ನಾನು ಚುನಾವಣೆಯಲ್ಲಿ ಗೆದ್ದ ಬಳಿಕ ಉತ್ತಮ ಜನಪ್ರತಿನಿಧಿಯಾಗಲು ನಿರ್ಧರಿಸಿದೆ. ಡಕಾಯಿತ ರಾಣಿ ಎಂಬ ಹಣೆಪಟ್ಟಿ ಹೊಡೆದು ಹಾಕಿ ಉತ್ತಮ ಮಹಿಳೆಯಾಗಲು, ರಾಜಕಾರಣಿಯಾಗಲು ಹಂಬಲಿಸಿದೆ. ಅದೇ ನಾನು ಮಾಡಿದ ತಪ್ಪು.' ತಾನು ಡಕಾಯಿತ ರಾಣಿಯಂತೆ ವರ್ತಿಸಬೇಕಿತ್ತು ಎಂಬುದು ಅವಳ ಮಾತಿನ ಒಳಮರ್ಮವಾಗಿತ್ತು. 1999ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಫೂಲನ್ ದೇವಿ ಎರಡನೆ ಬಾರಿಗೆ ಆಯ್ಕೆಯಾದಳು! ಅದಕ್ಕೆ ರಾಜಕಾರಣದ ಬಗ್ಗೆ ಅವಳ ಮನಸ್ಸಿನಲ್ಲಾದ ಪರಿವರ್ತನೆಯೇ ಕಾರಣವಾಯಿತಾ, ಗೊತ್ತಿಲ್ಲ.

ರಷ್ಯಾದ ಖ್ಯಾತ ನಾಯಕ ನಿಕಿತಾ ಕ್ರುಶ್ಚೇವ್ ರಾಜಕಾರಣಿಗಳ ಬಗ್ಗೆ ಹೇಳಿದ ಮಾತು ಮನನೀಯ. 'ನಾನು ಜಗತ್ತಿನ ಬಹುತೇಕ ಎಲ್ಲ ದೇಶಗಳಿಗೆ ಹೋಗಿದ್ದೇನೆ. ಎಲ್ಲ ದೇಶಗಳ ನಾಯಕ (ರಾಜಕಾರಣಿಗಳು)ರೊಂದಿಗೆ ಸಮಾಲೋಚನೆ ಮಾಡಿದ್ದೇನೆ. ನನಗೆ ಅವರ ಗುಣ, ಸ್ವಭಾವ, ಮಾತಿನಲ್ಲಿ ಹೆಚ್ಚಿನ ವ್ಯತ್ಯಾಸ ಕಂಡಿಲ್ಲ. ಸುಳ್ಳು ಹೇಳುವುದರಲ್ಲಿ, ಜನರನ್ನು ಹಾದಿ ತಪ್ಪಿಸುವುದರಲ್ಲಿ ಎಲ್ಲ ದೇಶಗಳ ರಾಜಕಾರಣಿಗಳು ಸಮಾನ ಮನಸ್ಕರು ಎಂಬುದು ನನಗೆ ಪ್ರತಿ ದೇಶಕ್ಕೆ ಹೋದಾಗಲೂ ಮನವರಿಕೆಯಾಗಿದೆ. ಆದರೂ ನಾನು ನೋಡಿಲ್ಲದ ದೇಶಕ್ಕೆ ಹೊರಟಾಗ ಅಲ್ಲಿನ ನಾಯಕರು ಭಿನ್ನವಾಗಿದ್ದಿರಬಹುದಾ ಎಂಬ ಪ್ರಶ್ನೆ ಮೂಡಿದರೂ, ವಾಪಸ್ ಬರುವ ಹೊತ್ತಿಗೆ ನನ್ನ ಅಭಿಪ್ರಾಯ ಸಂಪೂರ್ಣ ಬದಲಾಗಿರುತ್ತಿತ್ತು. ನದಿಯೇ ಇಲ್ಲದ ಕಡೆ ಸೇತುವೆ ಕಟ್ಟುತ್ತೇವೆ ಎಂದು ಹೇಳಿ ನಂಬಿಸುವವರೆಂದರೆ ಅವರು ರಾಜಕಾರಣಿಗಳು. ಇತ್ತೀಚಿನ ನನ್ನ ವರ್ತನೆಯನ್ನು ನೋಡಿದರೆ, ನಾನು ರಾಜಕಾರಣಕ್ಕೆ ಒಗ್ಗಿಕೊಳ್ಳುತ್ತಿದ್ದೇನೆ ಎಂದೆನಿಸುತ್ತದೆ' ಎಂದು ಹೇಳುವ ಮೂಲಕ ತಾವೂ ಸುಳ್ಳು ಹೇಳುತ್ತಿರುವುದನ್ನು ಕ್ರುಶ್ಚೇವ್ ಒಪ್ಪಿಕೊಂಡಿದ್ದರು.

ಶಾಸನ ಸಭೆಗಳಲ್ಲಿ ಜನಪ್ರತಿನಿಧಿಗಳು ಮೈಕ್ ಕಿತ್ತು ಬಿಸಾಡುವುದು, ಕೈಕೈ ಬಡಿದಾಡುವುದನ್ನು ನಾವು ನೋಡಿದ್ದೇವೆ. ಆದರೆ ಇದೇ ಕ್ರುಶ್ಚೇವ್ 1960ರಲ್ಲಿ ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡುವಾಗ, ಫಿಲಿಪ್ಪೈನ್ ಪ್ರತಿನಿಧಿಗಳು ಯುರೋಪಿನ ಪೂರ್ವಭಾಗದ ಕೆಲವು ಪ್ರದೇಶಗಳನ್ನು ರಷ್ಯಾ ಕಬಳಿಸುತ್ತಿದೆ ಎಂದು ಆರೋಪಿಸಿದಾಗ, ಕ್ರುಶ್ಚೇವ್ ತಾವು ಧರಿಸಿದ್ದ ಬೂಟನ್ನು ಕೈಗೆ ತೆಗೆದುಕೊಂಡು ಮೇಜಿಗೆ ಕುಟ್ಟಿದ್ದು ತೀವ್ರ ವಿವಾದಕ್ಕೆ ಗುರಿಯಾಗಿತ್ತು. ಅದಾದ ಬಳಿಕ ತಮ್ಮ ನಡೆಗೆ ಅವರು ವಿಷಾದ ವ್ಯಕ್ತಪಡಿಸಿದ್ದು ಬೇರೆ ಮಾತು. ಹಾಗೆ ವಿಷಾದ ವ್ಯಕ್ತಪಡಿಸುವುದಕ್ಕಿಂತ ಮೊದಲು 'ಬೆಲ್ಜಿಯಂ ಪ್ರಧಾನಿ ನನಗಿಂತ ಎಂಟು ವರ್ಷಗಳಷ್ಟು ಮುನ್ನ ವಿಶ್ವಸಂಸ್ಥೆಯಲ್ಲಿ ಬೂಟನ್ನು ಎಸೆದಿದ್ದರೆಂಬುದು ಗೊತ್ತಿರಲಿ' ಎಂದು ಹೇಳಿ ಇಂಥ ವರ್ತನೆ ಎಸಗಿದವರಲ್ಲಿ ತಾವೇ ಮೊದಲಿಗರಲ್ಲ ಎಂದು ಅಷ್ಟರಮಟ್ಟಿಗೆ ಕ್ರುಶ್ಚೇವ್ ಸಮಾಧಾನ ಪಟ್ಟುಕೊಂಡಿದ್ದರು.

ತಮ್ಮ ಮಕ್ಕಳು ರಾಜಕಾರಣಿಯಾಗಬೇಕೆಂದು ಯಾವ ತಂದೆ-ತಾಯಿಯೂ ಬಯಸುವುದಿಲ್ಲ ಎಂದು ಅಮೆರಿಕದ ಅಧ್ಯಕ್ಷ ಜಾನ್ ಎಫ್ ಕೆನಡಿ ಹೇಳಿದ್ದರು. ಭಾರತದಲ್ಲಿ ರಾಜಕಾರಣಿಗಳು ಮಾತ್ರ ತಮ್ಮ ಮಕ್ಕಳು ರಾಜಕಾರಣಿಯಾಗಲಿ ಎಂದು ಬಯಸುತ್ತಿರುವುದು ಬೇರೆ ಮಾತು. 'ರಾಜಕಾರಣವೇಕೆ ಅಷ್ಟು ಕಲುಷಿತವಾಗಿದೆ? ರಾಜಕಾರಣಿಗಳ ಬಗ್ಗೆ ಕೆಟ್ಟ ಅಭಿಪ್ರಾಯ ಏಕಿದೆ?' ಎಂದು ಕೆನಡಿ ಅವರನ್ನು ಪ್ರಶ್ನಿಸಿದಾಗ, American mothers all want their sons to grow up to be President, but they dont want them to become politicians in the process. (ಅಮೆರಿಕದ ತಾಯಂದಿರು ತಮ್ಮ ಮಕ್ಕಳು ರಾಷ್ಟ್ರಾಧ್ಯಕ್ಷರಾಗಬೇಕೆಂದು ಬಯಸುತ್ತಾರೆ. ಆದರೆ ಅವರಿಗೆ ತಮ್ಮ ಮಕ್ಕಳು ರಾಜಕಾರಣಿಗಳಾಗುವುದು ಬೇಕಿಲ್ಲ) ರಾಜಕಾರಣಿಯಾಗದೇ ಅಧ್ಯಕ್ಷರಾಗುವುದು ಸಾಧ್ಯವಿಲ್ಲ, ಮೊದಲು ನಿಮ್ಮ ಮಗನೋ, ಮಗಳೋ ರಾಜಕಾರಣಿಯಾಗಲಿ, ಆನಂತರ ಅಧ್ಯಕ್ಷರಾಗಬಹುದು ಎಂದು ಹೇಳಿದರೆ, ನಮಗೆ ಅವರು ರಾಜಕಾರಣಿಯಾಗುವುದು ಬೇಕಿಲ್ಲ ಎಂದು ಹೇಳುತ್ತಾರೆ. ಅಷ್ಟರಮಟ್ಟಿಗೆ ರಾಜಕಾರಣ ಹಾಳಾಗಿ ಹೋಗಿದೆ. ಒಂದು ವೇಳೆ ನಾನು ರಾಷ್ಟ್ರಾಧ್ಯಕ್ಷನಾಗುವ ಬದಲು, ಬರೀ ರಾಜಕಾರಣಿಯಷ್ಟೇ ಆಗಿದ್ದಿದ್ದರೆ ನನ್ನನ್ನೂ ಯಾರೂ ಹೆಚ್ಚು ಗೌರವಿಸುತ್ತಿರಲಿಲ್ಲವೇನೋ?' ಎಂದು ಹೇಳಿದ್ದರು.



ಬ್ರಿಟನ್ನಿನ ಪ್ರಧಾನಿಗಳ ಪೈಕಿ ವಿನ್‌ಸ್ಟನ್ ಚರ್ಚಿಲ್ ಅವರದ್ದು ಮೇರು ವ್ಯಕ್ತಿತ್ವ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅಸಾಧಾರಣ ನಾಯಕತ್ವ, ದಿಟ್ಟತನ ಪ್ರದರ್ಶಿಸಿದವರು ಚರ್ಚಿಲ್. ರಾಜಕಾರಣಕ್ಕೊಂದು ವಿಶೇಷ ಮೆರುಗು ತಂದವರು. ಬುದ್ಧಿಜೀವಿಗಳು ಸಹ ರಾಜಕಾರಣ ಪ್ರವೇಶಿಸಬಹುದೆಂದು ಆ ದಿನಗಳಲ್ಲಿ ಸಾಬೀತು ಪಡಿಸಿದವರು. ಆದರೆ ರಾಜಕಾರಣದ ಒಳಸುಳಿ, ಒತ್ತಡ, ಕರಾಮತ್ತುಗಳಿಂದ ಚರ್ಚಿಲ್ ಅದೆಷ್ಟು ಘಾಸಿಗೊಂಡಿದ್ದರೆಂದರೆ, ರಾಜಕೀಯದಿಂದ ದೂರ ಸರಿಯಲು, ನಿವೃತ್ತರಾಗಲು ಬಯಸಿದ್ದರು. ಈ ಬಗ್ಗೆ ಅವರು ಹೇಳಿದ್ದು– 'Iam never going to have anything more to do with politics and politicians. When this war is over I shall confine myself entirely to writing and painting.'

ಹಾಗೇ ಆಯಿತು. ಎರಡನೇ ಮಹಾ ಯುದ್ಧದಲ್ಲಿ ಬ್ರಿಟನ್‌ಗೆ ಜಯ ತಂದುಕೊಟ್ಟರೂ, ಆನಂತರ ನಡೆದ ಮಹಾಚುನಾವಣೆಯಲ್ಲಿ ಚರ್ಚಿಲ್ ದಯನೀಯವಾಗಿ ಸೋತು ಹೋದರು. ಅದಕ್ಕೆ ಅವರು ಬೇಸರಿಸಿಕೊಳ್ಳಲಿಲ್ಲ, ಹಾಗೆ ನೋಡಿದರೆ, ಅದನ್ನೇ ಅವರು ಬಯಸಿದ್ದರು. ಒಂದು ವೇಳೆ ಗೆದ್ದಿದ್ದರೂ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಳ್ಳುತ್ತಿರಲಿಲ್ಲ. ಸೋಲಿನ ಬಳಿಕ ಚರ್ಚಿಲ್ ಗಂಭೀರವಾಗಿ ಬರವಣಿಗೆಯಲ್ಲಿ, ಅಧ್ಯಯನದಲ್ಲಿ ತೊಡಗಿಸಿಕೊಂಡರು. ಬರವಣಿಗೆಯ ಮಧ್ಯೆ ಪೇಂಟಿಂಗ್ ಹುಚ್ಚನ್ನು ಹತ್ತಿಸಿಕೊಂಡರು. ಚರ್ಚಿಲ್ ಸಾಹಿತ್ಯ ರಚನೆಯಲ್ಲಿ ಎಂಥಾ ತಾದ್ಯಾತ್ಮ ಹಾಗೂ ತಲ್ಲೀನತೆ ಸಾಧಿಸಿದರೆಂದರೆ ಅವರು ರಾಜಕಾರಣಿಗಳನ್ನು ಭೇಟಿಯಾಗಲು ಸಹ ಬಯಸುತ್ತಿರಲಿಲ್ಲ. ಚರ್ಚಿಲ್‌ಗೆ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ನೊಬೆಲ್ ಪ್ರಶಸ್ತಿಯೂ ಬಂತು. 'ನಾನು ರಾಜಕಾರಣಕ್ಕೆ ಆಕಸ್ಮಿಕವಾಗಿ ಪ್ರವೇಶಿಸಿದೆ. ಅಲ್ಲಿಂದ ಹೊರಹಾಕಿಸಿಕೊಂಡು ಬಚಾವ್ ಆದೆ'. ಎಂದಿದ್ದರು ಚರ್ಚಿಲ್.

ಒಮ್ಮೆ ರಾಜಕಾರಣಿಯಾದವರು ರಾಜಕಾರಣಿಯಾಗಿಯೇ ಸಾಯುವುದು ಭಾರತದಲ್ಲಿ ಮಾತ್ರ. ಬೇಡವೆಂದು ಪದೇಪದೆ ಸೋಲಿಸಿದರೂ ಜನ ರಾಜಕೀಯದಿಂದ ನಿವೃತ್ತರಾಗುವುದಿಲ್ಲ. ಶಾಸಕರಾಗಿ, ಮಂತ್ರಿಯಾಗಿ, ಹಲವು ವರ್ಷ 'ಜನ ಸೇವೆ' ಮಾಡಿ, ರಾಜಕಾರಣ ಸಾಕು ಎಂದು ಸ್ವಯಂ ನಿವೃತ್ತಿ ಬಯಸಿದವರು ಕೈ ಬೆರಳೆಣಿಕೆಯಷ್ಟು ಮಂದಿ ಮಾತ್ರ. ಉಳಿದವರೆಲ್ಲ ಕೊನೆಯ ಉಸಿರು ಇರುವ ತನಕವೂ 'ದೇಶ ಸೇವೆ'ಗೆ ತಮ್ಮನ್ನು ಸಮರ್ಪಿಸಿಕೊಂಡವರೇ. ತೊಂಬತ್ತಾದರೂ ನವಚೈತನ್ಯ. ಅಮೆರಿಕದಲ್ಲಿ ಹೆಚ್ಚೆಂದರೆ ಎಂಟು ವರ್ಷಗಳ ಕಾಲ ಅಧ್ಯಕ್ಷರಾಗಿ ಅಧಿಕಾರದಲ್ಲಿರಬಹುದು. ಆನಂತರ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಲೇಬೇಕು. ಆದರೆ ನಮ್ಮ ದೇಶದಲ್ಲಿ ನಿವೃತ್ತಿ ಇಲ್ಲದ ಕ್ಷೇತ್ರವೆಂದರೆ ರಾಜಕೀಯವೊಂದೇ.

ಅದಿರಲಿ, ರಾಜಕಾರಣಿಗಳಾಗುವುದು ಸಾಮಾನ್ಯದ ವಿಷಯವಲ್ಲ. ಜನರನ್ನು ಯಾವಜ್ಜೀವ ನಂಬಿಸುವುದು, ಅವರು ಸದಾ ತಮ್ಮನ್ನು ಮೆಚ್ಚುವಂತೆ ಖುಷಿಯಲ್ಲಿಟ್ಟಿರುವುದು ಸಾಮಾನ್ಯ ಸಂಗತಿಯೇ? ಏಳೆಂಟು ಸಲ ಆರಿಸಿ ಬರುವುದು, ನಲವತ್ತು -ಐವತ್ತು ವರ್ಷಗಳಿಂದ ಒಂದೇ ಕ್ಷೇತ್ರದಿಂದ ಪದೇ ಪದೆ ಆರಿಸಿ ಬರುವುದು, ಸೋಲಿಲ್ಲದ ಸರದಾರನಂತೆ ಬೀಗುವುದು ಸಣ್ಣ ಮಾತೇನು? ಜನರಿಗೆ ಯಾವ ರೀತಿಯಲ್ಲಿ ಮಂಕುಬೂದಿ ಎರಚುತ್ತಾ ಬಂದಿರಬಹುದು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಒಬ್ಬ ರಾಜಕಾರಣಿಗೆ ಮಾತ್ರ ಇದು ಸಾಧ್ಯ.

'ರಾಜಕಾರಣಿಗೆ ಒಂದು ವಿಶೇಷ ಶಕ್ತಿಯಿದೆಯೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಅದೇನೆಂದರೆ ತಮ್ಮ ದೇಶವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಅಧಃಪತನಕ್ಕೆ ತೆಗೆದುಕೊಂಡು ಹೋಗುವುದು. ಈ ವಿಷಯದಲ್ಲಿ ಎಲ್ಲ ದೇಶಗಳ, ಎಲ್ಲ ಪಕ್ಷಗಳ ರಾಜಕಾರಣಿಗಳೂ ಸಮರ್ಥರು' ಎಂಬುದನ್ನು ನಿಸ್ಸಂದೇಹವಾಗಿ ಒಪ್ಪಿಕೊಳ್ಳಬಹುದು. ಇದು ಅವರ ಬಗ್ಗೆ ಇರುವ ಆರೋಪ ಎಂದು ಹೇಳಿದರೆ ಅಪಚಾರವಾದೀತು. ಇದು ರಾಜಕಾರಣಿಗಳ ತಾಕತ್ತು!

ಈಗಿನ ರಾಜಕಾರಣಿಗಳು ಮಾತ್ರ ಹೀಗೆ, ಹಿಂದಿನವರೆಲ್ಲ ಬಹಳ ಉತ್ತಮರಾಗಿದ್ದರು ಎಂದು ಭಾವಿಸುವಂತಿಲ್ಲ. 'ಕಾಲ ಕೆಟ್ಟು ಹೋಯಿತು, ನಮ್ಮ ಕಾಲದಲ್ಲಿ ಎಲ್ಲವೂ ಚೆನ್ನಾಗಿದ್ದವು' ಎಂಬ ಮಾತು ರಾಜಕಾರಣ ಹಾಗೂ ರಾಜಕಾರಣಿಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಅವರು ಎಲ್ಲಿಯೇ ಇರಲಿ ಯಾವುದೇ ಕಾಲದಲ್ಲಿರಲಿ ಹೀಗೆಯೇ ಇರುತ್ತಾರೆ. ಇಲ್ಲದಿದ್ದರೆ ಕ್ರಿಪೂ 342ರಲ್ಲಿ ಗ್ರೀಕ್ ತತ್ತ್ವಜ್ಞಾನಿ ಅರಿಸ್ಟಾಟಲ್ ಹೀಗೆ ಹೇಳುತ್ತಿರಲಿಲ್ಲ. 'ಸದಾ ಒಂದು ಸಮೂಹ ಹಾಗೂ ಸಮಾಜದ ಜನರನ್ನು ಒಂದು ಸಿದ್ಧಾಂತ ಹಾಗೂ ನಂಬಿಕೆಗೆ ಅವರ ನಿಷ್ಠೆಯನ್ನು ಕೇಂದ್ರೀಕರಿಸಲು ರಾಜಕಾರಣಿಗಳು ಹೆಣಗುತ್ತಾರೆ. ಎಷ್ಟು ದಿನಗಳು ಒಂದು ನಂಬಿಕೆಯನ್ನುಜೀವಂತವಾಗಿಡಲು ಸಾಧ್ಯವೋ ಅದು ಆ ರಾಜಕಾರಣಿಯ ಯಶಸ್ಸು. ಇಲ್ಲಿ ಯಶಸ್ವಿ ಯಾದವನು ಜನರಿಗೆ ಒಳ್ಳೆಯದನ್ನು ಮಾಡುತ್ತಾನೆ ಎಂದಲ್ಲ, ತನಗಂತೂ ಖಂಡಿತವಾಗಿಯೂ ಒಳ್ಳೆಯದನ್ನು ಮಾಡಿಕೊಳ್ಳುತ್ತಾನೆ. ರಾಜಕಾರಣಿ ಗಳಿಂದ ಜನರಿಗೆ ಹಿತವಾಗುತ್ತದೆಂಬುದು ಭ್ರಮೆ' ಎಂದು ಅರಿಸ್ಟಾಟಲ್ ಅಂದೇ ಹೇಳಿದ್ದ.

ನಮಗೆ ಪದೇ ಪದೆ ಮನವರಿಕೆಯಾಗುವುದೆಂದರೆ, ಅರಿಸ್ಟಾಟಲ್ ಹೇಳಿದ ಮಾತು ಶತಶತಮಾನ ಕಳೆದರೂ ನಿಜವಾಗುತ್ತಿರುವುದು ಹಾಗೂ ಇಂದಿಗೂ ಪ್ರಸ್ತುತವಾಗಿರುವುದು. ವಿಪರ್ಯಾಸವೇನೆಂದರೆ, ರಾಜಕಾರಣಿಗಳಿಲ್ಲದೇ ಯಾವ ದೇಶವೂ ಇಲ್ಲ. ಎಲ್ಲರೂ ಅವರವರ ದೇಶವನ್ನು ಈ ರಾಜಕಾರಣಿಗಳಿಗಾಗಿಯೇ ಒಪ್ಪಿಸಿದ್ದಾರೆ. ಬೇರೆ ದಾರಿಯೇ ಇಲ್ಲ. ದೇವರು ಇದ್ದಾನೋ ಇಲ್ಲವೋ. ಆದರೆ ರಾಜಕಾರಣಿಗಳಂತೂ ಇದ್ದೇ ಇದ್ದಾರೆ. ಅವರ ಜತೆ ನಿತ್ಯ ಏಗಲೇಬೇಕು.

ಏನಂತೀರಾ!?

# ಬೆಂಗಳೂರು ನಗರ ನಿರ್ಮಾತೃ ಕೆಂಪೇಗೌಡ

ತನ್ನಿಮಿತ್ತ

ನಂಜುಂಡ ನಂಜೇಗೌಡ

vveditoped@gmail.com

ಕೆಂಪೇಗೌಡರು ವಿಶ್ವವಿಖ್ಯಾತ ಬೆಂಗಳೂರು ನಗರ ನಿರ್ಮಾತೃ, ಸಾವಿರಾರು ಕೆರೆಗಳ ಸರದಾರ, ಮುನ್ನೋಟದ ಕನಸುಗಾರ, ನಾವ್ಯಾರು ಮರೆಯಲಾಗದ ನನಸುಗಾರ, ಕೋಟೆ ಪೇಟೆಗಳ ನಿರ್ಮಾಣದ ಸಾಕಾರ, ಕರುನಾಡಿನ ಹೆಮ್ಮೆಯ ಕುವರ.

ಕೆಂಪೇಗೌಡರ ವಂಶಸ್ಥರನ್ನು ಯಲಹಂಕ ಪ್ರಭುಗಳೆಂದೇ ಕರೆಯಲಾಗುತ್ತದೆ. ಯಲಹಂಕ ನಾಡು ವಿಜಯನಗರದ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯ ಫಲವಾಗಿ ಉದಯಿಸಿತು. ಕರ್ನಾಟಕದ ದಕ್ಷಿಣ ಭಾಗದಲ್ಲಿ ಕ್ರಿ.ಶ. ಸುಮಾರು 1420 ರಿಂದ 1728ರವರೆಗೆ ಆವತಿ, ಯಲಹಂಕ, ಬೆಂಗಳೂರು, ಮಾಗಡಿ ಮತ್ತು ಸಾವನದುರ್ಗಗಳನ್ನು ಪ್ರಮುಖ ಆಡಳಿತ ಕೇಂದ್ರಗಳನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಯಲಹಂಕ ನಾಡಪ್ರಭುಗಳು ರಾಜ್ಯದ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರ ಸಾಮ್ರಾಜ್ಯಗಳು ಆಳಿವೆ. ಆದರೆ ಕೆಂಪೇಗೌಡರು ಈಗಲೂ ನಾಡಿನ ಚರಿತ್ರೆಯಲ್ಲಿ ಮತ್ತು ಜನ ಮಾನಸದಲ್ಲಿ ಉಳಿದಿದ್ದಾರೆ. ನಾಡಪ್ರಭು ಸ್ಥಳೀಯವಾಗಿ ಜನರ ಮಧ್ಯೆ ಇದ್ದು ಜನಕಲ್ಯಾಣ ಕಾರ್ಯ ಕೈಗೊಂಡ ಚಾರಿತ್ರಿಕ ಪುರುಷ ಕೆಂಪೇಗೌಡರ 515ನೇ ಜಯಂತಿ ಸಮಯದಲ್ಲಿ ಅವರ ಕಾರ್ಯಗಳನ್ನು ನೆನೆಯಬೇಕಿದೆ. 1510ರ ಜೂನ್ 27ರಂದು ಜನಿಸಿದ ಕೆಂಪೇಗೌಡರು ಕೆಂಪನಂಜೇಗೌಡ ಮತ್ತು ಲಿಂಗಮಾಂಬೆಯವರ ನಾಲ್ವರು ಸುಪುತ್ರರಲ್ಲಿ ಮೊದಲನೆಯವರು. ಆದ್ದರಿಂದ ಇವರನ್ನು ಹಿರಿಯ ಕೆಂಪೇಗೌಡ ಎಂತಲೂ ಕರೆಯುತ್ತೇವೆ. ಉಳಿದವರು ಕ್ರಮವಾಗಿ ವೀರೇಗೌಡ, ಬಸವೇಗೌಡ ಹಾಗೂ ಕೆಂಪಸೋಮೇಗೌಡ. ತಂದೆ ಕೆಂಪನಂಜೇಗೌಡ ವಿಜಯನಗರ ಸಾಮ್ರಾಜ್ಯದ ನಿಷ್ಠಾವಂತ ಸಾಮಂತ, ಯಲಹಂಕದ ಈ ಪ್ರಭುಗಳು ಭೈರವನ ಆರಾಧಕ ಪಾಳೇಗಾರರೆಂದು ಪ್ರಸಿದ್ದರಾಗಿದ್ದರು. ಕೆಂಪಮ್ಮ ಇವರ ಮನೆ ದೇವತೆ ಹಾಗೆ ಭೈರವನ ಆರಾಧಕರೂ ಆಗಿದ್ದರು.

ಕೆಂಪೇಗೌಡರು ಹೆಸರುಘಟ್ಟದ ಗುರುಕುಲದಲ್ಲಿ ಎಂಟು ವರ್ಷ ವಿದ್ಯಾಭ್ಯಾಸ ಮುಗಿಸಿ ಮಾಧವ ಭಟ್ಟರೆಂಬ ಗುರುಗಳ ಬಳಿ ಕಲಿತು ಸಂಸ್ಕಾರ ಮತ್ತು ಸಾಂಸ್ಕೃತಿಕ ಅನ್ಯನ್ಯತೆಯ ವ್ಯಕ್ತಿತ್ವ ಹೊಂದಿದ್ದರು. 1531 ರಿಂದ 1569ರವರೆಗೆ ಯಲಹಂಕದ ಮಹಾನಾಡ ಪ್ರಭುವಾದರು. ನಂತರ ಇವರ ಪುತ್ರ 2ನೇ ಕೆಂಪೇಗೌಡ (ಮಾಗಡಿ ಕೆಂಪೇಗೌಡ), ಮೂರನೇ ಕೆಂಪೇಗೌಡ ನಂತರ ಗಿಡ್ಡೆಗೌಡ ಮೊದಲಾದವರು ಆಳ್ವಿಕೆ ನಡೆಸಿದರು. ಆದರೆ ಯಲಹಂಕ ಮಹಾನಾಡು ಹೆಚ್ಚು ಪ್ರಸಿದ್ಧಿಗೆ ಬಂದದ್ದು ಹಿರಿಯ ಕೆಂಪೇಗೌಡರ ಕಾಲದಲ್ಲಿ ಪಟ್ಟಾಭಿಷಕ್ತರಾಗಿ ಚೆನ್ನಾಮಾಂಬೆಯವರೊಡನೆ ವಿವಾಹವಾದ ಇವರು ತಮ್ಮ ತಂದೆಯೊಡನೆ 1515ರಲ್ಲಿ ಹಂಪೆಯಲ್ಲಿ ಮೊಟ್ಟಮೊದಲು ಶ್ರೀ ಕೃಷ್ಣದೇವರಾಯರ ಕಾಲದಲ್ಲಿ ಆರಂಭವಾದ ವಿಜಯದಶಮಿ ಉತ್ಸವ ನೋಡಲು ಹೋಗಿದ್ದ ಕೆಂಪೇಗೌಡರ ಮನಸ್ಸಿನಲ್ಲಿ ಅದಾಗಲೇ ಅಂತರಾಷ್ಟ್ರೀಯ ಸಾಂಸ್ಕೃತಿಕ, ವಾಣಿಜ್ಯ ಖ್ಯಾತಿ ಹೊಂದಿದ್ದ ಹಂಪೆಯಂತಹ ನಗರವನ್ನು ನಿರ್ಮಿಸುವ ಮನದಾಸೆಯ ಫಲವಾಗಿ 1537ರಲ್ಲಿ ಬೆಂಗಳೂರು ನಿರ್ಮಾಣ ಕಾರ್ಯ ಸಕಲ ಸಂಪ್ರದಾಯಗಳಂತೆ ಆರಂಭವಾಯಿತು.

ಸಿರಿವಂತಿಕೆಯ ಹಂಪೆಯಂತಹ ವೈಭವಯುತ ನಗರ ನಿರ್ಮಾಣದ ಕನಸು ಹೊತ್ತಿದ್ದ ಕೆಂಪೇಗೌಡರು ವೃಷಭಾವತಿ ಮತ್ತು ಅರ್ಕಾವತಿ ನದಿಗಳಿಗೆ ಸೇರುತ್ತಿದ್ದ ತೊರೆಗಳು ಹರಿಯುವ ಪ್ರದೇಶ ಸಮುದ್ರಮಟ್ಟದಿಂದ 3000 ಅಡಿ ಎತ್ತರದ ಜಾಗ, ಉತ್ತಮ ಪರಿಸರ, ಫಲವತ್ತಾದ ಮಣ್ಣು ಇರುವ ಸ್ಥಳವನ್ನು ಆಯ್ಕೆಮಾಡಿದರು. ಅದು ಈಗಿನ ಯಲಹಂಕಕ್ಕೆ 10 ಮೈಲಿ ದೂರದಲ್ಲಿತ್ತು, ಚಿಕ್ಕಪೇಟೆ ಮತ್ತು ದೊಡ್ಡಪೇಟೆ ರಸ್ತೆಗಳು ಕೂಡುವ ಸ್ಥಳದಿಂದ ಭೂಮಿ ಪೂಜೆ-ವೇದ ಘೋಷಗಳೊಂದಿಗೆ 4 ಜನ ರೈತರು ನೇಗಿಲು ಕಟ್ಟಿದ ನಾಲ್ಕು ಜೊತೆ ಬಿಳಿ ಎತ್ತುಗಳು ನಾಲ್ಕು ದಿಕ್ಕಿಗೆ ಗೆರೆ ಎಳೆಯುತ್ತಾ ಸಾಗಲಾಗಿ ಪೂರ್ವ-ಪಶ್ಚಿಮದ ಸಾಲನ್ನು ಚಿಕ್ಕಪೇಟೆಯಾಗಿ ಉತ್ತರ-ದಕ್ಷಿಣ ಗೆರೆಯನ್ನು ದೊಡ್ಡಪೇಟೆ (ಈಗಿನ ಅವಿನ್ಯೂ ರಸ್ತೆ) ಯಾಗಿ ನಿರ್ಮಿಸಲಾಯಿತು.

ಕೆಂಪೇಗೌಡರ ದೃಷ್ಟಿಯಲ್ಲಿ ನಾಡು ಎಂದರೆ ಬರೀ ಕಲ್ಲು ಮಣ್ಣುಗಳಲ್ಲ. ಎಲ್ಲಾ ವರ್ಗದ ಜನಸಮುದಾಯ ಎನ್ನುವ ಬಹುತ್ವ ದೂರದೃಷ್ಟಿ ಅವರಲ್ಲಿತ್ತು, ವಾರದ ಏಳು ದಿನಗಳು ನಗರದಲ್ಲಿ ವಾಣಿಜ್ಯ ವ್ಯಾಪಾರ ಚಟುವಟಿಕೆಗಳು ನಡೆಯಬೇಕು. ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆಯನ್ನು ವಿಸ್ತರಿಸಿ ರೈತರು ಬೆಳೆದ ಬೆಳೆಗಳನ್ನು ನಗರದಲ್ಲಿ ಮಾರಾಟ ಮಾಡಲು ಅನೇಕ ಪೇಟೆಗಳಿಗೆ ಅಸ್ತಿಭಾರ ಹಾಕಿದರು. ಎಲ್ಲಾ ಸಮುದಾಯದವರು ವೃತ್ತಿಗಳಿಗೆ ತಕ್ಕಂತೆ ವ್ಯವಹರಿಸಲು ದೊಡ್ಡಪೇಟೆ (ಸಗಟು ಮಾರುಕಟ್ಟೆ) ಚಿಕ್ಕಪೇಟೆ (ಚಿಲ್ಲರೆ ಮಾರುಕಟ್ಟೆ), ಅಕ್ಕಿಪೇಟೆ, ರಾಗಿಪೇಟೆ, ಅರಳೆಪೇಟೆ, ತರಗುಪೇಟೆ, ಗಾಣಿಗರ ಪೇಟೆ, ಉಪ್ಪಾರಪೇಟೆ, ಕುಂಬಾರಪೇಟೆ, ತಿಗಳರ ಪೇಟೆ, ನಗರ್ತಪೇಟೆ, ಬಳೆಪೇಟೆ, ಮುತ್ಯಾಲಪೇಟೆ, ಗೊಲ್ಲರಪೇಟೆ ಮುಂತಾದ ಸಮುದಾಯ ಆಧಾರಿತ ಪೇಟೆಗಳನ್ನು ನಿರ್ಮಿಸಿ ಎಲ್ಲಾ ದಿಕ್ಕುಗಳಿಂದ ವರ್ತಕರನ್ನು ಆಹ್ವಾನಿಸಿ ಬೆಂಗಳೂರನ್ನು ವಿಜಯನಗರದ ರಾಜಧಾನಿ ಹಂಪೆಯಂತೆ ವಾಣಿಜ್ಯ ವ್ಯಾಪಾರಗಳ ಕೇಂದ್ರವಾಗಿಸಿ ಬಹುತ್ವ ಸಮ ಸಮಾಜದ ನಗರ ನಿರ್ಮಿಸಿದ ಬ್ಯಾಗಿ ಒಕ್ಕಲು ಹಿನ್ನಲೆಯುಳ್ಳ ಕಂಡಗೌಡರ ದೂರದೃಷ್ಟಿಗೆ ಮತ್ತೊಂದು ಸಾಕ್ಷಿಯಾಗಿದೆ.

**ಕೆರೆಕಟ್ಟೆಗಳ ನಿರ್ಮಾಣ:** ಒಕ್ಕಲು ಮನೆಯಲ್ಲಿ ಹುಟ್ಟಿ ಬಂದ ಕೆಂಪೇಗೌಡರಿಗೆ ಕೃಷಿಪ್ರಧಾನ ಆರ್ಥಿಕ ವ್ಯವಸ್ಥೆಗೆ ಮತ್ತು ನಗರಕ್ಕೆ ನೀರು ಅತಿ ತಿಳಿದಿದ್ದ ಅವರು ಸಾವಿರಾರು ಕೆರೆಕಟ್ಟೆಗಳನ್ನು ನಿರ್ಮಿಸಿದ್ದಾರೆ. ಮುಖ್ಯವಾಗಿ ಕೆಂಪಾಂಬುದಿ ಕೆರೆ, ಧರ್ಮಾಂಬುದಿ ಕೆರೆ, ಸಂಪಂಗಿರಾಮನ ಕೆರೆ, ಚೆನ್ನಮ್ಮನಕೆರೆ, ಹಲಸೂರು ಕೆರೆ, ಕಾರಂಜಿ ಕೆರೆ, ಕೆಂಪಾಪುರ ಅಗ್ರಹಾರ ಕೆರೆ, ಸಿದ್ದಿಕಟ್ಟೆಕೆರೆ ಮುಂತಾದ ಸರಣಿ ಕೆರೆಗಳನ್ನು ನಿರ್ಮಿಸಿ ಮಳೆಕೊಯ್ಲು ರೀತಿ ನೀರು ಸಂಗ್ರಹದ ವ್ಯವಸ್ಥೆ ಮಾಡಿದ್ದರು. ಹಾಗೆ ಅರ್ಕಾವತಿ ನದಿಗೆ ಅಡ್ಡಲಾಗಿ ತಿಪ್ಪಗೊಂಡನಹಳ್ಳಿ ಬಳಿ ಮಣ್ಣಣೆ ನಿರ್ಮಿಸಿದ್ದರು. ಆದ್ದರಿಂದ ಇವರನ್ನು ಸಾವಿರ ಕೆರೆಗಳ ಸರದಾರನೆಂದರೆ ಅತಿಶಯೋಕ್ತಿಯಾಗಲಾರದು.

ನಾಡಪ್ರಭುಗಳ ಚರಿತ್ರೆಯಲ್ಲಿ ಒಂದು ಮಾತಿದೆ ಅಂದರೆ ಕುಂತು ಕುಣಿಗಲ್ ಗೆದ್ದ-ನಿಂತು ಮಾಗಡಿ ಗೆದ್ದ ಎಂದು ಅಂದರೆ ಕೆಂಪೇಗೌಡರ ಕಾಲಕ್ಕೆ ಯಲಹಂಕ ಪ್ರಭುಗಳ ನಾಡು ಕೃಷ್ಣಗಿರಿಯಿಂದ-ನುಗ್ಗೆಹಳ್ಳಿವರೆಗೆ ಹಿಂದೂಪುರದಿಂದ ಕಾವೇರಿವರೆಗೆ ವ್ಯಾಪಿಸಿದ್ದು, ಇದರಲ್ಲಿ ಮಾಗಡಿ 2ನೇ ಕಂಡೇಗೌಡನ ಕಾಲಕ್ಕೆ ರಾಜಧಾನಿಯೂ ಆಗಿತ್ತು, ಹಾಗೇ ಹಿರಿಯ ಕೆಂಪೇಗೌಡರ ಕಾಲಕ್ಕೆ ಕುಣಿಗಲ್ ಸೀಮೆಯಲ್ಲಿ ಬರುವ ಹುತ್ರಿದುರ್ಗ-ಹುಲಿಯೂರು ದುರ್ಗಗಳು ಸೇನಾನೆಲೆ ಮತ್ತು ಮದ್ದುಗುಂಡುಗಳನ್ನು ತಯಾರಿಸುವ ಕೇಂದ್ರಗಳಾಗಿದ್ದವು. ಸರಿಸುಮಾರು 3000 ವರ್ಷಗಳಷ್ಟು ಪುರಾತನ ಶಿಲಾ ಸಮಾಧಿಗಳನ್ನು ಹೊಂದಿರುವ ಇಲ್ಲಿ ಕೆಂಪೇಗೌಡರು ನಾಡ ರಕ್ಷಣೆಗಾಗಿ ನಿರ್ಮಿಸಿರುವ ಕೋಟೆ ಇದೆ. ಇದೊಂದು ಅದ್ಭುತ ಸ್ಥಳ. ಇಲ್ಲಿ ಟಂಕಶಾಲೆ, ಲೋಹಗಳಿಂದ ಯುದ್ಧಕ್ಕೆ ಬೇಕಾದ ಆಯುಧಗಳನ್ನು ತಯಾರಿಸುತ್ತಿದ್ದ ಕುರುಹುಗಳಿವೆ. ವನ್ಯ ಜೀವಿಗಳಾದ ಕರಡಿ, ಚಿರತೆ, ನವಿಲು, ನರಿ, ತೋಳ, ಉಡ, ಗೌಜುಗ ಪ್ರಭೇದದ ಪ್ರಾಣಿಗಳಿವೆ. ಹಾಗೆ ಸಾವನದುರ್ಗ-ಹುತ್ರಿದುರ್ಗ-ಶಿವಗಂಗೆ-ದೇವರಾಯನ ದುರ್ಗ ಬೆಟ್ಟ ಸಾಲು ಗಳು ಆನೇ ದಾರಿಗಳೆಂದು ಪ್ರಸಿದ್ಧಿ ಪಡೆದಿವೆ. ಹೀಗೆ ಕೆಂಪೇಗೌಡರು ಕುಣಿಗಲ್ ಹೆಟ್ಟೂರು, ರಾಮದುರ್ಗ, ಹುತ್ತಿದುರ್ಗ, ಹುಲಿಯೂರು ದುರ್ಗ, ಗುಡದಾರನಹಳ್ಳಿ, ಮಾಗಡಿ, ತಿಪ್ಪಗೊಂಡನಹಳ್ಳಿದರೆಗೆ ಸುರಕ್ಷಿತ ಬೆಟ್ಟಗುಡ್ಡಗಳಿಂದ ಸುತ್ತುಮದ ಮತ್ತು ನೈಸರ್ಗಿಕ ಜಲಮೂಲಗಳಾದ ಹಳ್ಳ ತೊರೆಗಳಿದ್ದ ಪ್ರಕೃತಿ ಸೌಂದರ್ಯದ ಮಡಿಲಿನಲ್ಲಿ ನಾಡಪ್ರಭುವಾಗಿ ಆಳಿದ್ದಾರೆ.

**ಸಂಕಷ್ಟ ಎದುರಿಸಿದ್ದ ಕೆಂಪೇಗೌಡ:** ಚರಿತ್ರೆಯಲ್ಲಿ ನಾವು ನೋಡಿ ಕಲಿಯಬೇಕಾಗಿರುವುದು ಮಹಾನ್ ವ್ಯಕ್ತಿಗಳೆಲ್ಲರೂ ಒಂದಲ್ಲ ಒಂದು ಕಷ್ಟ ನೋವು, ಅಪಮಾನ, ನಿಂಧನೆಗೊಳಗಾಗಿದ್ದವರ, ಅವೆಲ್ಲವನ್ನು ದಾಟಿ ಬಾಳಿ ತಮ್ಮ ಸಮಾಜಕ್ಕೆ ಬೆಳಕಾದವರು ಚರಿತ್ರೆಯಲ್ಲಿ ಅಜರಾಮರಾಗಿದ್ದಾರೆ. ಹಾಗೆ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರಿಗೂ ಬಂದಿತ್ತು. ಯಲಹಂಕದ ಸಿರಿ ಕೋಟೆ ಕಟ್ಟೆ, ಕಟ್ಟಡಗಳ ವೈಬೋಗ ಕಂಡು ಸಹಿಸದಾದ ಚನ್ನಪಟ್ಟಣದ ಕುಹಕಿ ಜಗದೇವರಾಯ, ಕೆಂಪೇಗೌಡರು ಬೈರವ ನಾಣ್ಯಗಳನ್ನು ಮುದ್ರಿಸಿ ಹವಣಿಸುತ್ತಿದ್ದಾನೆ ಸ್ವತಂತ್ರನಾಗಲು ಹವಣಿಸುತ್ತಿದ್ದಾನೆಂದು ದೊರೆ ಸದಾಶಿವರಾಯ ಮತ್ತು ಅಧಿಕಾರ ನಡೆಸುತ್ತಿದ್ದ ರಾಮರಾಯರಲ್ಲಿ ಚಾಡಿಹೇಳಿದನು. ಆಗ 1ನೇ ಕೆಂಪೇಗೌಡರನ್ನು ಆನೆಗೊಂದಿ ಸೆರೆಯಲ್ಲಿಡಲಾಯಿತು. ಇಷ್ಟಾದರೂ ಕೆಂಪೇಗೌಡನ ವಂಶಸ್ಥರು ವಿಜಯನಗರಕ್ಕೆ ನಿಷ್ಠಾವಂತ ಪ್ರಜಾವಾತ್ಸಲ್ಯಕರಾಗಿ ನಡೆದು ಕೊಳ್ಳುತ್ತಿದ್ದರು. ಕುತಂತ್ರಿಗಳ ಸಾಮಂತಾಧಿಪತಿಗಳಾಗಿ, ತಿಳಿದು ಕೆಂಪೇ ಗೌಡರು ಬಿಡುಗಡೆಯಾದರು. ಕಾರವಾಸದಿಂದ ಬೆಂಗಳೂ ರಿಗೆ ಹಿಂತಿರುಗಿದ ಗೌಡರು ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಜನರು ಜಯಘೋಷ ಕೂಗಿದರು. ಕೆಂಪೇಗೌಡರನ್ನು ಬೆಳ್ಳಿ ಉಯ್ಯಾಲೆ ಮೇಲೆ ಕೂರಿಸಿ ಅವರಿಗೆ ಹಾಲಿನ ಅಭಿಷೇಕ ಮಾಡಿದರು. ಆ ಸ್ಥಳ ಉಯ್ಯಾಲೆ ಕಾವಲು ಎಂದು ಹೆಸರಾಗಿ ನಂತರ ವಯ್ಯಾಲಿಕಾವಲ್ ಆಗಿ ಕರೆಯಲ್ಪಡುತ್ತಿದೆ. ಇಂತಹ ಕೆಂಪೇಗೌಡರು 1569ರಲ್ಲಿ ಕುಣಿಗಲ್‌ನಿಂದ ಹಿಂತಿರುಗುವಾಗ ಮರಣ ಹೊಂದಿದರೆಂದು ತಿಳಿದು ಬರುತ್ತದೆ. 'ಕೆರೆಯಂ ಕಟ್ಟಿಸು, ಬಾವಿಯಂ ತೋಡಿಸು, ದೇವಗಾರಂ ನಿರ್ಮಿಸು ಎಂಬ ನಾಣ್ನುಡಿಯಂತೆ ಎಲ್ಲವನ್ನು ಮಾಡಿದ್ದ ಗಂಡಭೇರುಂಡ' ಎಂಬ ಬಿರುದು ಹೊಂದಿದ್ದ ಕೆಂಪೇಗೌಡರ ಜಯಂತಿ ಸಂದರ್ಭದಲ್ಲಿ ಅವರಿಗೆ ನಮ್ಮೆಲ್ಲರ ನಮನಗಳು ಮುಂದೆ ನಾವೆಲ್ಲರೂ ಕೆಂಪೇಗೌಡರ ದೂರದರ್ಶಿತ್ವ ಮತ್ತು ಬಹುತ್ವದ ಮನೋ ಧರ್ಮದೊಂದಿಗೆ ಬದುಕುತ್ತಾ ನಾಡಿನ ಖ್ಯಾತಿಯನ್ನು ಎತ್ತಿ ಹಿಡಿಯೋಣ.

(ಲೇಖಕರು : ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷರು)

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಕೃತಕ ಬಣ್ಣ ನಿಷೇಧ: ಸ್ವಾಗತಾರ್ಹ

ಗೋಬಿ ಮಂಚೂರಿಯಲ್ಲಿ ಕೃತಕ ಬಣ್ಣ ಬಳಕೆಗೆ ನಿಷೇಧ ಹೇರಿದ ಬೆನ್ನಲ್ಲೇ ಇದೀಗ ಕಬಾಬ್‌ಗೂ ಕೃತಕ ಬಣ್ಣ ಬಳಸದಂತೆ ರಾಜ್ಯ ಸರಕಾರ ಆದೇಶ ಹೊರಡಿಸಿರುವುದು ಸ್ವಾಗತಾರ್ಹವಾಗಿದೆ. ರಾಜ್ಯಾದ್ಯಂತ ಮಾರಾಟವಾಗುತ್ತಿರುವ ವೆಜ್, ಚಿಕನ್, ಫಿಶ್ ಇತರೆ ಕಬಾಬ್‌ಗಳಲ್ಲಿ ಕೃತಕ ಬಣ್ಣ ಬೆರೆಸುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಬಾಬ್ ತಯಾರಿಕೆಯಲ್ಲಿ ಕೃತಕ ಬಣ್ಣಗಳನ್ನು ಬೆರೆಸುವುದನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಿರ್ಬಂಧಿಸಿರುವುದು ಒಳ್ಳೆಯ ನಿರ್ಧಾರವಾಗಿದೆ. ಕೃತಕ ಬಣ್ಣಗಳ ಬಳಕೆ ಮಾಡಲಾಗುತ್ತಿರುವುದು ಪ್ರಯೋಗಾಲಯಗಳ ಮೂಲಕ ನಡೆಸಲಾದ ಪರೀಕ್ಷೆಯಿಂದ ಈಗಾಗಲೇ ದೃಢಪಟ್ಟಿದೆ. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಸರಕಾರ ಸೂಕ್ತ ಕ್ರಮವೇನೋ ಕೈಗೊಂಡಿದೆ. ಆದರೆ ನಮ್ಮ ಆರೋಗ್ಯದ ಗುಟ್ಟು ನಮ್ಮ ಆಹಾರ ಅಭ್ಯಾಸಗಳಲ್ಲಿದೆ. ಉತ್ತಮ ಆರೋಗ್ಯಕ್ಕಾಗಿ ಇಂತಹ ಅಪಾಯಕಾರಿ ವಸ್ತುಗಳಿಂದ ತಯಾರಿಸಲಾದ ಆಹಾರ ಪದಾರ್ಥಗಳ ಸೇವನೆಯಿಂದ ಜನರು ದೂರವಿರೋದು ಸೂಕ್ತ ಹಾಗೂ ಉತ್ತಮವೆನಿಸುತ್ತದೆ.

– **ಹರಳಹಳ್ಳಿಪುಟ್ಟರಾಜು**, ಪಾಂಡವಪುರ.

### ದುಬಾರಿ ದುನಿಯಾ

ಕೆಎಂಎಫ್ ಹಾಲಿನ ದರವನ್ನು ಎರಡು ರುಪಾಯಿ ಏರಿಕೆ ಮಾಡಿ, ಜನಸಾಮಾನ್ಯರ ದೈನಂದಿನ ವೆಚ್ಚ ಹೆಚ್ಚಳಕ್ಕೆ ಮತ್ತಷ್ಟು ಕೊಡುಗೆ ನೀಡಿದೆ. ಕೆಎಂಎಫ್ ಪ್ರಕಾರ, ಇದು ದರ ಏರಿಕೆ ಅಲ್ಲ, ಹಾಲು ಉತ್ಪಾದನೆ 15 ವರ್ಷಗಳಲ್ಲೇ ಅಧಿಕವಾಗಿದೆ. ಹೀಗಾಗಿ ಹೆಚ್ಚುವರಿ ಹಾಲನ್ನು 50 ಮಿಲೀನಂತೆ ಗ್ರಾಹಕರಿಗೆ ನೀಡಲಾಗುತ್ತದೆ. ಅದಕ್ಕೆ ಪ್ರತಿಯಾಗಿ ಎರಡು ರು. ಹೆಚ್ಚು ದರ ಪಡೆಯಲಾಗುತ್ತದೆ ಎಂದು ಹೇಳಿದೆ. ಉತ್ಪಾದನೆ ವೆಚ್ಚ ಹೆಚ್ಚಾದಾಗ ನೇರವಾಗಿ ಹಾಲಿನ ದರವನ್ನು ಏರಿಕೆ ಮಾಡುತ್ತಿತ್ತು. ಆದರೆ ಈ ಬಾರಿ ಉತ್ಪಾದನೆ ಹೆಚ್ಚಾಗಿದೆ ಎಂಬ ಕಾರಣ ನೀಡಲಾಗಿದೆ.

ಬೆಲೆ ಏರಿಕೆಗೆ ತಕ್ಕಂತೆ ವೇತನ, ಆದಾಯವೂ ಹೆಚ್ಚಳವಾದರೆ ಸಮಸ್ಯೆಯಾಗುವುದಿಲ್ಲ. ಆದರೆ ಆದಾಯ ಮಾತ್ರ ಅಷ್ಟೇ ಇದ್ದು, ವೆಚ್ಚ ಹೆಚ್ಚಳವಾದಾಗ ಬಡ, ಮಧ್ಯಮ ವರ್ಗದ ಕುಟುಂಬಗಳಿಗೆ ಸಮಸ್ಯೆಯಾಗುತ್ತದೆ. ಕಳೆದ ವಾರವಷ್ಟೆ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗಿತ್ತು. ಇದೀಗ ಹಾಲಿನ ದರ ಏರಿಕೆಯಾಗಿರುವುದರಿಂದ ಹೋಟೆಲ್ ಗಳಲ್ಲಿ ಕಾಫಿ-ಚಹಾ ಬೆಲೆ 2 ರು.ಗಿಂತ ಹೆಚ್ಚು ಏರಿಕೆಯಾದರೂ ಅಚ್ಚರಿ ಇಲ್ಲ. ಜೀವನ ದುಬಾರಿಯಾಗಿದೆ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿದೆ. ಇಂತಹ ಸಂದರ್ಭದಲ್ಲಿ ಬೆಲೆ ಇಳಿಕೆಯನ್ನು ಜನಸಾಮಾನ್ಯರು ನಿರೀಕ್ಷಿಸುತ್ತಿದ್ದರು. ಅದಕ್ಕೆ ತದ್ವಿರುದ್ಧವಾದ ಬೆಳವಣಿಗೆ ನಡೆಯುತ್ತಿದೆ.

– **ದೀಕ್ಷಾ ಮುಚ್ಚಂಡಿ**, ವಿಜಯಪುರ

**ಓದುಗರ ಒಣಿಗೆ ಭೇಟಿ ಕೊಡಿ**

**ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು**

## ಭಟ್ಟರ್ ಸ್ಕಾಚ್

● 'ಬೆಂ. ಮು. ಮಾರುತಿ, ಬೆಂಗಳೂರು
ಭಟ್ರೇ, ಡಿ.ಕೆ.ಸುರೇಶ್ ಲೋಕಸಭೆಗೆ ಸ್ಪರ್ಧಿಸಿದ್ದವರು, ವಿಧಾನಸಭೆಗೆ ಸ್ಪರ್ಧಿಸ ಹೊರಟಿರುವುದು ಅಧಿಕಾರದ ದಾಹದ ಸಂಕೇತವಲ್ಲವೇ?
**– 'ಹಾಗೇನಿಲ್ಲ ಚುನಾವಣೆಯಲ್ಲಿ ಹಣ ಕಳೆದುಕೊಳ್ಳುವ ಚಟ !**

● ವಿನಾಯಕ ಸುಳ್ಯ, (ಇಮೇಲ್ ಮೂಲಕ)
ಭಟ್ರೇ, ರೇಣುಕಾಸ್ವಾಮಿ ಮಾಡಿದ್ದು ಸರೀನಾ ?
**– 'ತಪ್ಪೇ ಇರಬಹುದು.. ಅಷ್ಟಕ್ಕೇ ಸಾಯಿಸ್ತಾರಾ ?!**

● ನಾರಾಯಣ ಹೆಗಡೆ, ಶಿರಸಿ
ಭಟ್ರೇ , ಜೆಡಿಎಸ್ ಅಂದ್ರೆ ಜನತಾದಳ ಸೆಕ್ಯುಲರ್ ಅಂತಾರಲ್ಲ ?
**– ಸರಿಹೋಯ್ತು ಬಿಡು, ಆಗ ಎಲ್ಲ ಕೋಮು ಮತ್ತು ಕಾಮದವರು ಸಪೋರ್ಟ್ ಮಾಡಬಹುದು!**

● ವಾಸು ಜಳಕಿ. ಬೆಂಗಳೂರು
ಭಟ್ರೇ, ತಾನು ಮದುವೆಯಾಗಲಿರುವ ಹುಡುಗಿಗೆ ತಂಗಿ ಇರಬೇಕು ಅಂತಾನಲ್ಲ?
**– ಅದೇ ವಾಸಿ, ತಮ್ಮ ಇರಬೇಕು ಅಂತ ಹೇಳಲಿಲ್ಲವಲ್ಲ?!**

● ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)
ಭಟ್ರೇ, ಎಂಥ ಅಸಂಬದ್ಧ ಪ್ರಶ್ನೆ ಕೇಳ್ತಾರಪ್ಪ ಅಂತ ಎಂದೂ ಅನಿಸಿಲ್ಲವಾ ?
**– ದರ್ಶನ್ ಶೆಡ್‌ಗೂ, ಪ್ರಜ್ವಲ್ ಬೆಡ್‌ಗೂ ಏನು ವ್ಯತ್ಯಾಸ ಅಂತ ಕೇಳಿದಾಗ ಏನನಿಸಬಹುದು?!**

● ಭೀಮರಾವ್ ಮನಗೂಳಿ, ಬಸವನಗುಡಿ
ಭಟ್ರೇ, ಕುಮಾರಣ್ಣ ಕೇಂದ್ರಕ್ಕೆ ಹೋದ ಮೇಲೆ ಅವರ ಇಂಗ್ಲಿಷ್ ತುಂಬಾ ಸುಧಾರಿಸಿದೆಯಲ್ಲ?
**– ಈ ಉತ್ಸಾಹದಲ್ಲಿ ಹಿಂದಿಯಲ್ಲಿ ಮಾತು ಶುರು ಮಾಡಿದರೆ ಕಷ್ಟ!**

● ರಾಘು ರಾಯ, ಕೃಷ್ಣಮೂರ್ತಿಪುರಂ
ಭಟ್ರೇ, ಪಿಎಚ್.ಡಿ. ಮಾರ್ಕೆಟ್ಟಿನಲ್ಲಿ ಮಾರಾಟದ ಸರಕಾಗಿದೆಯಾ?
**– ಬೆಲೆ ಇಲ್ಲದಾಗ ರಸ್ತೆಗೆ ಎಸೆಯುವ ಟೊಮ್ಯಾಟೋ ಥರ ಆಗಿದೆಯಪ್ಪಾ!**

● ವೆಂಕಣ್ಣಚಾರ್ ಹಿತ್ತಲಮನಿ , ಮೈಸೂರು
ಸಾರ್, ಒಂದೇ ಮರದ, ಒಂದೇ ಕೊಂಬೆಯ ಹಣ್ಣುಗಳಾದರೂ ರುಚಿ ಬೇರೆ ಅಂತೆ ನಿಜವೇ?
**– ರೇವಣ್ಣನ ಮಕ್ಕಳನ್ನು ಮನಸ್ಸಲ್ಲಿಟ್ಟುಕೊಂಡು ಈ ಪ್ರಶ್ನೆಯಾ?!**

● ರುಕ್ಕು, ಚಾಮರಾಜಪೇಟೆ
ಭಟ್ರೇ, ಎ ಫಾರ್ ಅಮೀರ್, ಬಿ ಫಾರ್ ಬಚ್ಚನ್, ಸಿ ಫಾರ್ ಚುಂಕೀ, ಡಿ ಫಾರ್ ದರ್ಶನ್ ಅಂತ ಪಾಠ ಮಾಡಬಹುದಾ?
**– ಮಕ್ಕಳು ಚೆನ್ನಾಗಿ ನೆನಪಿಟ್ಟುಕೊಳ್ಳುತ್ತಾರೆ ಎಂಬ ದೂರ ದೃಷ್ಟಿ ಇರಬಹುದು!**

● ಮಧ್ವರಾಯ, ಉಡುಪಿ
ಭಟ್ರೇ, ಅವರು ಪಂಚೆ ಉಟ್ಟುಕೊಂಡೇ ಯೋಗವನ್ನು ಮಾಡಿದರಂತೆ?
**– ಆದರೂ ಕನಕನ ಕಿಂಡಿಯನ್ನೇ ನೋಡ್ತಾ ಇದ್ರಾ!?**

# ಮೂರು ಸರ್ವಾಧಿಕಾರಿಗಳ ನಡುವಿನ ದಿಢೀರ್ ಸ್ನೇಹದ ಸಸ್ಪೆನ್ಸ್

**ಟಿಬೆಟ್‌ಗೆ ಕಿರುಕುಳ ನೀಡಲು ಜಗತ್ತಿನಲ್ಲೀಗ ಚೀನಾದ ಜತೆಗೆ ಇನ್ನೂ ಕೆಲ ಸ್ನೇಹಿತರು ಕೈಜೋಡಿಸುತ್ತಿದ್ದಾರೆ. ಭಾರತ ಸುಮ್ಮನೆ ನೋಡುತ್ತಾ ಕುಳಿತುಕೊಳ್ಳಬಾರದು. ಚೀನಾ, ರಷ್ಯಾ ಮತ್ತು ಉತ್ತರ ಕೊರಿಯಾದ ಈ ಹಠಾತ್ ಸ್ನೇಹ ಕೇವಲ ಟಿಬೆಟ್‌ಗೆ ಸಂಬಂಧಿಸಿದ್ದಲ್ಲ. ಇದು ಸಾಕಷ್ಟು ದೂರಗಾಮಿ ಪರಿಣಾಮಗಳನ್ನು ಹೊಂದಿದೆ.**

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಕಳೆದ ಕೆಲವೇ ದಿನಗಳಿಂದ ಈಚೆಗೆ ಜಾಗತಿಕ ರಾಜಕೀಯದಲ್ಲಿ ಅನೇಕ ಮಹತ್ವದ ಬದಲಾವಣೆಗಳು ಘಟಿಸುತ್ತಿವೆ. ಇವು ಎಷ್ಟು ಕ್ಷಿಪ್ರವಾಗಿ ಸಂಭವಿಸುತ್ತಿವೆ ಎಂದರೆ, ವಿದೇಶಾಂಗ ತಜ್ಞರು ಕೂಡ ಈ ವೇಗ ನೋಡಿ ಚಕಿತರಾಗಿದ್ದಾರೆ. ಇವೆಲ್ಲ ಒಂದಕ್ಕೊಂದು ಸಂಬಂಧ ಹೊಂದಿರುವ ಮಹತ್ವದ ವಿದ್ಯಮಾನಗಳು. ಇವು ಈ ಬೆಳವಣಿಗೆಗಳಲ್ಲಿ ನೇರವಾಗಿ ಭಾಗಿಯಾಗಿರುವ ದೇಶಗಳ ಮೇಲೆ ಪ್ರಭಾವ ಬೀರುವುದರ ಜೊತೆಗೆ ಜಗತ್ತಿನ ನಾನಾ ದೇಶಗಳ ಮೇಲೂ ಪರಿಣಾಮ ಉಂಟುಮಾಡುತ್ತವೆ. ಹೀಗಾಗಿ ಈ ಘಟನೆಗಳನ್ನು ಸಮಗ್ರವಾಗಿಯೇ ನೋಡಬೇಕು. ಅದಕ್ಕಿಂತಲೂ ಹೆಚ್ಚಾಗಿ, ಈ ಬೆಳವಣಿಗೆಗಳು ಭಾರತದ ಮೇಲೆ ನೇರವಾದ ಪರಿಣಾಮ ಬೀರುತ್ತವೆ. ನಾವು ಬೇಡ ಬೇಡ ಅಂದರೂ ಅವುಗಳ ಪರಿಣಾಮವನ್ನು ಎದುರಿಸಲೇ ಬೇಕು. ಹೀಗಾಗಿ ಇದು ಯಾವುದೋ ಬೇರೆ ದೇಶದ ತಲೆನೋವು, ನಮಗೆ ಸಂಬಂಧಿಸಿದ್ದಲ್ಲ ಎಂದು ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ಬನ್ನಿ, ಹಾಗಿದ್ದರೆ ಜಾಗತಿಕ ವೇದಿಕೆಯಲ್ಲಿ ಅಂತಹ ಮಹತ್ವದ ವಿದ್ಯಮಾನಗಳು ಏನು ನಡೆಯುತ್ತಿವೆ ಎಂಬುದನ್ನು ನೋಡೋಣ.

ಒಂದೆಡೆ, ಜಗತ್ತಿನ ಮೂರು ಅಪಾಯಕಾರಿ ಸರ್ವಾಧಿಕಾರಿಗಳಾದ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹಾಗೂ ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರು ಒಗ್ಗಟ್ಟು ಪ್ರದರ್ಶಿಸಲು ಆರಂಭಿಸಿದ್ದಾರೆ. ಇನ್ನೊಂದೆಡೆ, ಅಮೆರಿಕವು ಭಾರತದ ಹೆಗಲಿನ ಮೇಲೆ ಬಂದೂಕು ಇರಿಸಿ ಗುಂಡು ಹಾರಿಸಲು ಶುರುಮಾಡಿದೆ. ತೆರೆ ಮರೆಯಲ್ಲಿ ಇನ್ನೂ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿವೆ.

ಈಗ ಈ ಎಲ್ಲ ಘಟನೆಗಳನ್ನೂ ಒಂದೊಂದಾಗಿ ಗಮನಿಸೋಣ. ಇತ್ತೀಚಿನ ವರ್ಷಗಳಲ್ಲಿ ಚೀನಾ ಸರಕಾರವು ಭಾರತದ ಅರುಣಾಚಲ ಪ್ರದೇಶದಲ್ಲಿರುವ ಅನೇಕ ಊರುಗಳ ಹೆಸರನ್ನು ಏಕಪಕ್ಷೀಯವಾಗಿ ತನಗೆ ತೋಚಿದಂತೆ ಬದಲಾವಣೆ ಮಾಡುತ್ತಿತ್ತು. ಅರುಣಾಚಲ ಪ್ರದೇಶ ಭಾರತದ ರಾಜ್ಯವಾದರೂ ಚೀನಾ ಇದು ತನ್ನದೇ ರಾಜ್ಯ ಎಂಬಂತೆ ವರ್ತಿಸುತ್ತಿತ್ತು. ಇದಕ್ಕೆ ಪ್ರತಿರೋಧವಾಗಿ ಭಾರತ ಒಂದಷ್ಟು ತೀಕ್ಷ್ಣ ಮಾತುಗಳನ್ನು ಆಡುತ್ತಿತ್ತೇ ಹೊರತು ಅದಕ್ಕಿಂತ ಮುಂದೆ ಹೋಗಿ ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿರಲಿಲ್ಲ. ಆದರೆ, ಮೂರನೇ ಅವಧಿಗೆ ಎನ್‌ಡಿಎ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಟಿಬೆಟ್‌ನಲ್ಲಿರುವ ಮೂವತ್ತು ಊರುಗಳ ಹೆಸರನ್ನು ಬದಲಾವಣೆ ಮಾಡುವ ಫಟಾಫಟ್ ನಿರ್ಧಾರವನ್ನು ಕೈಗೊಂಡಿದೆ. ಈ ನಿರ್ಧಾರವನ್ನು ಕೈಗೊಂಡ ರೀತಿಯನ್ನು ಗಮನಿಸಿದರೆ ಇದು ಸಾಕಷ್ಟು ಯೋಚನೆ ಮಾಡಿ ರೂಪಿಸಿದ ರಣತಂತ್ರವೇ ಆಗಿದೆ. ನೇರವಾಗಿ ಹೇಳುವುದಾದರೆ, ಇದು ಚೀನಾಕ್ಕೆ ಭಾರತ ಎಸೆದ ಸವಾಲು.

ಈ ನಡುವೆ ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ ಒಂದು ಕಾಯಿದೆ ಬಹುಮತದಿಂದ ಅಂಗೀಕಾರಗೊಂಡಿದೆ. ಅದು ಚೀನಾ ಮತ್ತು ಟಿಬೆಟ್‌ನ ಸಂಘರ್ಷಕ್ಕೆ ಸಂಬಂಧಪಟ್ಟ ಕಾಯಿದೆ. ಅದರ ಪರವಾಗಿ 391 ಮತಗಳೂ, ವಿರುದ್ಧವಾಗಿ ಕೇವಲ 26 ಮತಗಳೂ ಚಲಾವಣೆಯಾಗಿವೆ. ಅಮೆರಿಕದ ಸೆನೆಟ್ ಈ ಹಿಂದೆಯೇ ಈ ಕಾಯಿದೆ ಪಾಸು ಮಾಡಿತ್ತು. ಇಷ್ಟಕ್ಕೂ ಈ ಕಾಯಿದೆಯ ಪರಿಣಾಮ ಏನು? ಚೀನಾ ಸರಕಾರವು ಟಿಬೆಟ್‌ನ ಇತಿಹಾಸ, ಟಿಬೆಟಿಯನ್ನರು ಹಾಗೂ ಟಿಬೆಟ್‌ನ ಸಂಸ್ಥೆಗಳ ಬಗ್ಗೆ ಹರಡುತ್ತಿರುವ ಸುಳ್ಳುಗಳ ವಿರುದ್ಧ ಹೋರಾಡಲು ಅಮೆರಿಕದ ಸರಕಾರ ಹಣಕಾಸು ಒದಗಿಸುವುದಕ್ಕೆ ಈ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಅಂದರೆ, ಇನ್ನುಮುಂದೆ ಟಿಬೆಟ್‌ನ ಸ್ವಾತಂತ್ರ್ಯ ಹೋರಾಟವನ್ನು ಅಮೆರಿಕ ಬೆಂಬಲಿಸುತ್ತದೆ. ಟಿಬೆಟ್ ದೇಶವನ್ನು ವಶಪಡಿಸಿಕೊಂಡು, ಅದು ತನ್ನದೇ ಅವಿಭಾಜ್ಯ ಅಂಗ ಎಂದು ಹೇಳುತ್ತಿರುವ ಚೀನಾಕ್ಕೆ ಅಮೆರಿಕ ಎಸೆದಿರುವ ನೇರವಾದ ಸವಾಲು ಇದು.

ಅಮೆರಿಕ ಅಲ್ಲಿಗೇ ನಿಂತಿಲ್ಲ. ಅದರ ಏಳು ಸದಸ್ಯರ ನಿಯೋಗವೊಂದು ಭಾರತಕ್ಕೆ ಬಂದು ಟಿಬೆಟ್‌ನ ಧರ್ಮಗುರು ದಲೈ ಲಾಮಾ ಅವರನ್ನು ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಭೇಟಿ ಮಾಡಿದೆ. 'ವನವಾಸದಲ್ಲಿರುವ ಟಿಬೆಟ್ ಸರ್ಕಾರ ಧರ್ಮಶಾಲಾದಿಂದ ಕೆಲಸ ಮಾಡುತ್ತದೆ. 1959ರಲ್ಲಿ ಚೀನಾ ಸರಕಾರವು ಟಿಬೆಟ್ ದೇಶವನ್ನು ವಶಪಡಿಸಿಕೊಂಡಾಗ ದಲೈ ಲಾಮಾ ಮತ್ತು ಅವರ ಸಂಗಡಿಗರು ಭಾರತಕ್ಕೆ ಓಡಿಬಂದು, ಇಲ್ಲಿನ ಸರಕಾರದ ಆಶ್ರಯ ಪಡೆದು, ಇಲ್ಲೇ ಟಿಬೆಟ್ ಸರಕಾರವನ್ನು ಸ್ಥಾಪನೆ ಮಾಡಿದ್ದರು. ಅದು ಇವತ್ತಿಗೂ ಕೆಲಸ ಮಾಡುತ್ತಿದೆ. ಮೊನ್ನೆ ದಲೈ ಲಾಮಾ ಅವರನ್ನು ಭೇಟಿಯಾದ ಅಮೆರಿಕದ ನಿಯೋಗದಲ್ಲಿ ಆ ದೇಶದ ಸಂಸತ್ತಿನ ಮಾಜಿ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರೂ ಇದ್ದರು. ನಿಯೋಗವು ದಲೈ ಲಾಮಾ ಬಳಿ ಟಿಬೆಟ್‌ನ ಸ್ವಾಯತ್ತೆ ಹಾಗೂ ಸಾರ್ವಭೌಮತೆಯ ವಿಷಯವನ್ನು ಪ್ರಸ್ತಾಪಿಸಿ, ಅದಕ್ಕೆ ತನ್ನ ದೇಶದ ಸಂಪೂರ್ಣ ಬೆಂಬಲವಿದೆ ಎಂದು ಹೇಳಿತು. ಬಹುಶಃ ಭಾರತದ ನೆಲದಲ್ಲಿ ವಿದೇಶದ ಸರಕಾರವೊಂದು ಟಿಬೆಟ್‌ನ ವಿಷಯವನ್ನು ಪ್ರಸ್ತಾಪಿಸಿದ್ದು ಇದೇ ಮೊದಲು. ಇಲ್ಲಿ ಎರಡು ಸಂಗತಿಗಳನ್ನು ಗಮನಿಸಬೇಕು: ಅಮೆರಿಕದ ಈ ನಿಯೋಗ ಅಲ್ಲಿನ ಸರಕಾರದ ದೂತನಾಗಿ ಬಂದಿತ್ತೇ ಅಥವಾ ಖಾಸಗಿಯಾಗಿ ಭಾರತಕ್ಕೆ ಆಗಮಿಸಿತ್ತೇ? ಎರಡನೆಯದಾಗಿ, ಈ ನಿಯೋಗಕ್ಕೆ ಭಾರತದ ಬೆಂಬಲ ಇತ್ತೇ? ಸದ್ಯಕ್ಕೆ ಈ ಎರಡೂ ವಿಷಯಗಳ ಬಗ್ಗೆ ಅಮೆರಿಕ ಹಾಗೂ ಭಾರತ ಮೌನವಾಗಿವೆ. ಆದರೆ ಈ ಬೆಳವಣಿಗೆಯು ಚೀನಾವನ್ನು ನಖಶಿಖಾಂತ ಕಂಗೆಡಿಸಿರುವುದಂತೂ ನಿಜ. ಏಕೆಂದರೆ ಟಿಬೆಟ್‌ನ ವಿವಾದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೈಕೊಡವಿ ಎದ್ದು ಕುಳಿತರೆ ಚೀನಾಕ್ಕೆ ಸಾಕಷ್ಟು ಸಮಸ್ಯೆಯಾಗುತ್ತದೆ. ಭಾರತ ಮತ್ತು ಅಮೆರಿಕಕ್ಕೆ ಬೇಕಾಗಿರುವುದೂ ಅದೇ.

ಹಾಗಂತ ಚೀನಾಕ್ಕೂ ಇದು ಚೆನ್ನಾಗಿ ಗೊತ್ತಿದೆ. ಆದ್ದರಿಂದಲೇ ಅದು ಭಾರತ ಮತ್ತು ಅಮೆರಿಕದ ನಡುವೆ ಗಾಢವಾಗುತ್ತಿರುವ ಸಂಬಂಧಕ್ಕೆ ಸವಾಲು ಎಸೆಯಲು ಇನ್ನೂ ಇಬ್ಬರು ಸರ್ವಾಧಿಕಾರಿಗಳ ಜೊತೆಗೆ ಕೈಜೋಡಿಸಿದೆ. ರಷ್ಯಾದ ಜೊತೆಗಿನ ಸಹಭಾಗಿತ್ವವನ್ನು ಚೀನಾ ನಿರಂತರವಾಗಿ ಹೆಚ್ಚಿಸಿಕೊಳ್ಳುತ್ತಿದೆ. ಚೀನಾ ಮತ್ತು ರಷ್ಯಾ ನಡುವಿನ ಸಂಬಂಧ ಗಟ್ಟಿಯಾಗುತ್ತಿರುವುದು ಮತ್ತು ಆ ಎರಡೂ ದೇಶಗಳು ಪರಸ್ಪರ ಹತ್ತಿರವಾಗುತ್ತಿರುವುದು ಯಾವುದೇ ದೃಷ್ಟಿಯಿಂದಲೂ ಭಾರತದ ಹಿತಾಸಕ್ತಿಗೆ ಪೂರಕವಾಗಿಲ್ಲ. ಏಕೆಂದರೆ ಭಾರತ ಮತ್ತು ರಷ್ಯಾ ದೇಶಗಳು ಬಹಳ ಹಿಂದಿನಿಂದಲೂ ಬಹುದೊಡ್ಡ ರಕ್ಷಣಾ ಪಾಲುದಾರರು. ರಷ್ಯಾದಿಂದ ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಭಾರತ ಹಲವಾರು ದಶಕದಿಂದ ಆಮದು ಮಾಡಿಕೊಳ್ಳುತ್ತಾ ಬಂದಿದೆ. ಸೋವಿಯತ್ ಯೂನಿಯನ್ ಇದ್ದ ಕಾಲದಿಂದಲೂ ರಷ್ಯಾ ಜತೆಗೆ ಭಾರತ ಆಪ್ತವಾದ ಗೆಳೆತನ ಹೊಂದಿದೆ. ಈ ನಡುವೆ, ರಷ್ಯಾದೊಂದಿಗೆ ಕೈಜೋಡಿಸಿದ್ದಲ್ಲದೆ ಚೀನಾದ ಸರ್ವಾಧಿಕಾರಿ ಕ್ಸಿ ಜಿನ್‌ಪಿಂಗ್ ಅವರು ಉತ್ತರ ಕೊರಿಯಾ ಎಂಬ ಇನ್ನೊಂದು ಸರ್ವಾಧಿಕಾರಿ ದೇಶದ ಜತೆಗೂ ಸಂಬಂಧ ಕುದುರಿಸಿಕೊಂಡಿದ್ದಾರೆ. ಇದು ಭಾರತಕ್ಕಿಂತ ಹೆಚ್ಚಾಗಿ ಅಮೆರಿಕಕ್ಕೆ ಕಳವಳ ಉಂಟುಮಾಡಿದೆ. ಏಕೆಂದರೆ ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಯಾರೂ ಊಹೆ ಮಾಡಲು ಸಾಧ್ಯವಿಲ್ಲದಂತಹ ತಿಕ್ಕಲು ಮನುಷ್ಯ. ತಲೆ ಕೆಟ್ಟರೆ ಆತ ಏನು ಬೇಕಾದರೂ ಮಾಡಬಲ್ಲ. ಮೊದಲೇ ಅವನಿಗೆ ಅಮೆರಿಕವನ್ನು ಕಂಡರೆ ಆಗುವುದಿಲ್ಲ. ಅಮೆರಿಕಕ್ಕೆ ತಕ್ಕ ಪಾಠ ಕಲಿಸುತ್ತೇನೆಂದು ಬಹಳ ವರ್ಷಗಳಿಂದ ಕಿಮ್ ಗುಡುಗುತ್ತಿದ್ದಾನೆ. ಹಾಗಿರುವಾಗ ರಷ್ಯಾದ ಪುಟಿನ್ ಮತ್ತು ಉತ್ತರ ಕೊರಿಯಾದ ಕಿಮ್ ಜಾಂಗ್ ಉನ್ ನಡುವೆ ಸ್ನೇಹ ಬೆಳೆದರೆ ಮತ್ತು ಅದಕ್ಕೆ ಚೀನಾದ ಬೆಂಬಲವೂ ಲಭಿಸಿದರೆ ಅದು ಎಂಥಾ ಅಪಾಯಕಾರಿಯಾದುದು ಎಂಬುದನ್ನು ಕಲ್ಪನೆ ಮಾಡಿಕೊಳ್ಳಿ! ಯಾವುದೇ ದೇಶ ನಮ್ಮ ಮೇಲೆ ದಾಳಿ ನಡೆಸಿದರೆ ನಾವಿಬ್ಬರೂ ಪರಸ್ಪರರನ್ನು ಬೆಂಬಲಿಸಿ ಯುದ್ಧ ಮಾಡಬೇಕು ಎಂದು ರಷ್ಯಾ ಮತ್ತು ಉತ್ತರ ಕೊರಿಯಾ ಒಪ್ಪಂದ ಮಾಡಿಕೊಂಡಿವೆ. ಈ ಸಿನಿಮಾದ ನಿರ್ದೇಶಕ ಚೀನಾ. ಸಹಜವಾಗಿಯೇ ಅದು ಎರಡೂ ದೇಶಗಳನ್ನು ತನ್ನ ದಾಳಗಳನ್ನಾಗಿ ಬಳಸಿಕೊಳ್ಳುತ್ತದೆ. ಸದ್ಯಕ್ಕೆ ರಷ್ಯಾ ದೇಶ ಜಾಗತಿಕ ಮಟ್ಟದಲ್ಲಿ ಮೂಲೆಗುಂಪಾಗಿದೆ. ಉಕ್ರೇನ್ ಮೇಲೆ ಯುದ್ಧ ನಡೆಸುತ್ತಿರುವ ರಷ್ಯಾವನ್ನು ಬಹುತೇಕ ದೇಶಗಳು ವಿರೋಧಿಸುತ್ತಿವೆ. ಇಂತಹ ಸಂದರ್ಭದಲ್ಲಿ ರಷ್ಯಾಕ್ಕೆ ಚೀನಾ ಹತ್ತಿರವಾಗುತ್ತಿರುವುದು ಭಾರತಕ್ಕೆ ಎಷ್ಟು ಕಳವಳಕಾರಿ ಸಂಗತಿಯೋ ಅಷ್ಟೇ ಕಳವಳಕಾರಿ ಸಂಗತಿ ಅಮೆರಿಕಕ್ಕೂ ಕೂಡ. ಆದರೆ ಸದ್ಯಕ್ಕಂತೂ ಭಾರತವು ರಷ್ಯಾವನ್ನೇ ನಂಬಬೇಕು. ಏಕೆಂದರೆ ಭಾರತದ ಜೊತೆಗೆ ರಷ್ಯಾ ಪ್ರತಿಯೊಂದು ಕ್ಷೇತ್ರದಲ್ಲೂ ಸ್ನೇಹವನ್ನು ಪ್ರದರ್ಶಿಸುತ್ತಾ ಬಂದಿದೆ. ರಷ್ಯಾದೊಂದಿಗೆ ಚೀನಾ ಸ್ನೇಹ ಸಂಪಾದನೆ ಮಾಡಿಕೊಂಡ ತಕ್ಷಣ ಭಾರತ ಮತ್ತು ರಷ್ಯಾದ ಸ್ನೇಹ ಮುರಿದುಬೀಳಲು ಸಾಧ್ಯವಿಲ್ಲ.

ಜಗತ್ತಿನಲ್ಲಿ ಭಾರತವೀಗ ಯಾವುದೇ ದೇಶದ ಹಿಂಬಾಲಕನಲ್ಲ. ಇದು ತನ್ನದೇ ಆದ ದೂರದೃಷ್ಟಿಯನ್ನು ಇರಿಸಿಕೊಂಡು ಜಾಗತಿಕ ವೇದಿಕೆಯಲ್ಲಿ ಮುನ್ನಡೆಯುತ್ತಿದೆ. ಭಾರತದ ಮಾತನ್ನು ಈಗ ಜಗತ್ತಿನ ಎಲ್ಲಾ ದೇಶಗಳೂ ಕಿವಿಗೊಟ್ಟು ಕೇಳುತ್ತವೆ. ಅಂತಾರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುವಾಗ ಭಾರತದ ಅಭಿಪ್ರಾಯಕ್ಕೆ ಸಾಕಷ್ಟು ಮಹತ್ವ ಸಿಗುತ್ತಿದೆ. ನಾವೀಗ ಬಹಳ ದೊಡ್ಡ ಆರ್ಥಿಕ ಶಕ್ತಿ. ಅಷ್ಟೇಕೆ, ಜಾಗತಿಕ ಮಟ್ಟದಲ್ಲಿ ನಾವು ಬಹಳ ದೊಡ್ಡ ಗ್ರಾಹಕರೂ ಹೌದು. ಹೀಗಾಗಿ ಭಾರತವನ್ನು ನೇರವಾಗಿ ಎದುರುಹಾಕಿಕೊಳ್ಳಲು ಯಾವ ದೇಶವೂ ಬಯಸುವುದಿಲ್ಲ. ಚೀನಾ ಎಷ್ಟು ದೇಶಗಳ ಜತೆಗೆ ಕೈಜೋಡಿಸಿದರೂ ಟಿಬೆಟ್‌ನ ವಿಷಯ ಈಗಾಗಲೇ ಜಾಗತಿಕ ವಿವಾದವಾಗುವ ಸ್ವರೂಪದಲ್ಲಿ ಎದ್ದು ಕುಳಿತಿದ್ದಂತೂ ಆಗಿದೆ. ಇದು ಇನ್ನೂ ಕೆಲ ಕಾಲ ಪ್ರತಿಧ್ವನಿಸುತ್ತಲೇ ಇರುತ್ತದೆ, ಚೀನಾಕ್ಕೆ ನಿದ್ದೆಯಿಲ್ಲದ ರಾತ್ರಿಗಳನ್ನು ಕರುಣಿಸುತ್ತಲೇ ಇರುತ್ತದೆ. ಹಾಗಂತ ಟಿಬೆಟ್‌ಗೆ ಸದ್ಯೋಭವಿಷ್ಯದಲ್ಲಿ ಸ್ವಾಯತ್ತೆ ಅಥವಾ ಸ್ವಾತಂತ್ರ್ಯ ಲಭಿಸಿಬಿಡುತ್ತದೆ ಎಂದೇನೂ ಅಲ್ಲ. ಅದು ಚೀನಾದ ಭಾಗವಾಗಿಯೇ ಮುಂದುವರೆಯುತ್ತದೆ, ಆದರೆ ಚೀನಾದ ಕುತ್ತಿಗೆಯಲ್ಲಿನ ನೋವಾಗಿ ಉಳಿಯುತ್ತದೆ. ಈ ವಿವಾದದ ಲಾಭ ಪಡೆದು ನಮ್ಮ ದೇಶದ ಗಡಿಯಲ್ಲಿ ಚೀನಾ ನಿರಂತರವಾಗಿ ಉಂಟುಮಾಡುತ್ತಿರುವ ಉಪದ್ವ್ಯಾಪಗಳನ್ನು ಮಟ್ಟಹಾಕಲು ಭಾರತಕ್ಕೆ ಸಾಧ್ಯವಾಗುತ್ತದೆಯೇ? ಇದು ಕುತೂಹಲದ ವಿಷಯ. ಭಾರತವು ಟಿಬೆಟ್ ವಿಷಯದಲ್ಲಿ ದೃಢವಾದ ನಿಲುವಿನೊಂದಿಗೆ ನಿಲ್ಲುವುದು ಭಾರತದ ಹಿತಾಸಕ್ತಿಗೂ ಒಳ್ಳೆಯದು, ಹಾಗೆಯೇ ಟಿಬೆಟಿಯನ್ನರ ಹಿತಾಸಕ್ತಿಗೂ ಒಳ್ಳೆಯದು. ಸರ್ವಾಧಿಕಾರಿ ಎಷ್ಟೇ ಬಲಿಷ್ಠನಾಗಿದ್ದರೂ ಒಂದಲ್ಲಾ ಒಂದು ದಿನ ಅವನ ಅವಸಾನ ನಿಶ್ಚಿತ ಎಂಬುದು ಜಗತ್ತಿಗೆ ಗೊತ್ತಿದೆ. ಸಾಕಷ್ಟು ದೇಶಗಳಲ್ಲಿ ಇದು ಈಗಾಗಲೇ ಸಾಬೀತಾಗಿದೆ. ನಿಜ, ಅದಕ್ಕೆ ಒಂದಷ್ಟು ಸಮಯ ಹಿಡಿಯುತ್ತದೆ. ಆ ಸಮಯಕ್ಕಾಗಿ ಕಾಯೋಣ!

**(ಲೇಖಕರು : ಹಿರಿಯ ಪತ್ರಿಕೋದ್ಯಮಿ ಹಾಗೂ ಮಾಜಿ ರಾಜ್ಯಸಭಾ ಸದಸ್ಯ)**

## ಪ್ರಚಲಿತ

ರಾಸುಮ ಭಟ್

# ಡೆಂಘೀ ಜ್ವರ ಎಚ್ಚರಿಕೆ ಅಗತ್ಯ

ರಾಜ್ಯದಲ್ಲಿ ಮಳೆಯ ಪ್ರಮಾಣದ ಹೆಚ್ಚಾಗುತ್ತಿದ್ದು, ಇದರ ಜತೆಜತೆಗೆ ಡೆಂಘೀ ಪ್ರಕರಣದ ಸಂಖ್ಯೆಗಳೂ ಹೆಚ್ಚಾಗುತ್ತಿರುವುದು ಆತಂಕಕಾರಿ ವಿಷಯ. ರಾಜ್ಯ ಸರಕಾರ ಡೆಂಘೀ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕ್ರಮವಹಿಸಿದ್ದರೂ, ಕಳೆದ ವರ್ಷಗಳಿಗೆ ಹೋಲಿಸಿದರೆ ಹೆಚ್ಚಾಗಿದೆ. ಡೆಂಘೀ ಪ್ರಕರಣ ಹೆಚ್ಚಾಗಲು ಮಳೆಯ ನೀರು ಮನೆಯ ಸುತ್ತ ಮುತ್ತಲಿನ ಟೈರ್ , ಹೂವಿನ ಕುಂಡ , ಗುಂಡಿಗಳಲ್ಲಿ ಸಂಗ್ರಹವಾಗುತ್ತದೆ . ಇಂತಹ ನಿಂತ ನೀರು ಡೆಂಘೀಗೆ ಕಾರಣವಾಗುವ ಈಡಿಸ್ ಈಜಿಪ್ಟಿ ಎಂಬ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಲು ಕಾರಣವಾಗುತ್ತದೆ. ಈ ಸೊಳ್ಳೆ ಕಡಿತದ ಪರಿಣಾಮ ಡೆಂಘೀ ಜ್ವರ ಉಂಟಾಗುತ್ತದೆ. ರಾಜ್ಯದಲ್ಲಿ ಈವರೆಗೆ 5,374 ಡೆಂಘೀ ಪ್ರಕರಣಗಳು ದಾಖಲಾಗಿದ್ದು, ಐದು ಮಂದಿ ಮೃತ ಪಟ್ಟಿರುವುದು ಆತಂಕಕಾರಿ ವಿಷಯವಾಗಿದೆ. ರಾಜ್ಯದ ರಾಜ್ಯಧಾನಿ ಬೆಂಗಳೂರಿನಲ್ಲಿ 1,230 ಡೆಂಘೀ ಪ್ರಕರಣಗಳು ದಾಖಲಾಗಿದ್ದು ಬಿಬಿಎಂಪಿ ವ್ಯಾಪ್ತಿ ಮುನ್ನಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ.

ಕೇಂದ್ರ ಸರಕಾರದ ಮಾರ್ಗಸೂಚಿಗಳು ಡೆಂಘೀ ಪ್ರಕರಣದ ಸಾವಿನ ಪ್ರಮಾಣವು ಶೇಕಡಾ 0.5 ಕ್ಕಿಂತ ಹೆಚ್ಚಿರಬಾರದು ಎಂದಿದೆ. ರಾಜ್ಯದ ಬೆಂಗಳೂರು, ಚಿಕ್ಕಮಗಳೂರು, ಮೈಸೂರು, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಡೆಂಘೀ ಪ್ರಕರಣಗಳು ವರದಿಯಾಗಿವೆ. ಡೆಂಘೀ ಜ್ವರದ ಲಕ್ಷಣಗಳೆಂದರೆ ತೀವ್ರ ಹೊಟ್ಟೆ ನೋವು, ನಿರಂತರ ವಾಂತಿ, ಒಸಡುಗಳು ಅಥವಾ ಮೂಗಿನಿಂದ ರಕ್ತಸ್ರಾವ, ಮೂತ್ರದಲ್ಲಿ ರಕ್ತ ಬರುವುದು, ಮಲ ಅಥವಾ ವಾಂತಿಯಲ್ಲಿ ರಕ್ತ, ಚರ್ಮದ ಅಡಿಯಲ್ಲಿ ರಕ್ತಸ್ರಾವ, ಇದು ಮೂಗೇಟಿಗೊಳಗಾದಂತೆ ಕಾಣಿಸಬಹುದು. ಜತೆಗೆ ಕಷ್ಟ ಅಥವಾ ತ್ವರಿತ ಉಸಿರಾಟ, ನಿರಂತರ ಆಯಾಸ ಹಾಗೂ ಕಿರಿಕಿರಿ ಅಥವಾ ಚಡಪಡಿಕೆಯೂ ಉಂಟಾಗಬಹುದು.

ಡೆಂಘೀ ಜ್ವರ ಸೋಂಕಿತ ವ್ಯಕ್ತಿಯ ಬಳಿಯಿರುವಾಗ ಬರುವುದಿಲ್ಲ. ಬದಲಾಗಿ ಸೊಳ್ಳೆ ಕಡಿತದಿಂದ ಡೆಂಘೀ ಜ್ವರ ಹರಡುತ್ತದೆ. ಡೆಂಘೀ ವೈರಸ್‌ಗಳನ್ನು ಹೆಚ್ಚಾಗಿ ಹರಡುವ ಎರಡು ವಿಧದ ಸೊಳ್ಳೆಗಳು ಮಾನವನ ವಸತಿಗೃಹಗಳಲ್ಲಿ ಮತ್ತು ಸುತ್ತಮುತ್ತ ಸಾಮಾನ್ಯವಾಗಿದೆ. ಡೆಂಘೀ ವೈರಸ್ ಸೋಂಕಿತ ವ್ಯಕ್ತಿಯನ್ನು ಸೊಳ್ಳೆ ಕಚ್ಚಿದಾಗ, ವೈರಸ್ ಸೊಳ್ಳೆಯೊಳಗೆ ಪ್ರವೇಶಿಸುತ್ತದೆ. ನಂತರ, ಸೋಂಕಿತ ಸೊಳ್ಳೆ ಇನ್ನೊಬ್ಬ ವ್ಯಕ್ತಿಯನ್ನು ಕಚ್ಚಿದಾಗ, ವೈರಸ್ ಆ ವ್ಯಕ್ತಿಯ ರಕ್ತವನ್ನು ಪ್ರವೇಶಿಸುತ್ತದೆ ಮತ್ತು ಸೋಂಕನ್ನು ಉಂಟುಮಾಡುತ್ತದೆ.

ಡೆಂಘೀ ಜ್ವರ ತಡೆಗಟ್ಟಲು ಸೊಳ್ಳೆ ಕಡಿತವನ್ನು ತಡೆಗಟ್ಟುವುದು ಮತ್ತು ಸೊಳ್ಳೆಗಳ ಸಂಖ್ಯೆಯನ್ನು ನಿಯಂತ್ರಿಸುವುದು ಡೆಂಘೀ ಜ್ವರ ಹರಡುವುದನ್ನು ತಡೆಗಟ್ಟುವ ಮುಖ್ಯ ವಿಧಾನಗಳಾಗಿವೆ. ಹವಾ ನಿಯಂತ್ರಿತ ಅಥವಾ ಚೆನ್ನಾಗಿ-ಸ್ಕ್ರೀನ್ ಮಾಡಿದ ವಸತಿಗಳಲ್ಲಿ ಉಳಿಯಿರಿ. ಡೆಂಘೀ ವೈರಸ್‌ಗಳನ್ನು ಸಾಗಿಸುವ ಸೊಳ್ಳೆಗಳು ಮುಂಜಾನೆಯಿಂದ ಮುಸ್ಸಂಜೆಯವರೆಗೆ ಹೆಚ್ಚು ಸಕ್ರಿಯವಾಗಿರುತ್ತವೆ, ಆದರೆ ಅವು ರಾತ್ರಿಯಲ್ಲಿ ಕಚ್ಚುತ್ತವೆ. ರಕ್ಷಣಾತ್ಮಕ ಉಡುಪುಗಳನ್ನು ಧರಿಸಿ. ನೀವು ಸೊಳ್ಳೆಗಳಿರುವ ಪ್ರದೇಶಗಳಿಗೆ ಹೋದಾಗ, ಉದ್ದನೆಯ ತೋಳಿನ ಅಂಗಿ, ಉದ್ದನೆಯ ಪ್ಯಾಂಟ್, ಸಾಕ್ಸ್ ಮತ್ತು ಶೂಗಳನ್ನು ಧರಿಸಿ.

ಡೆಂಘೀ ವೈರಸ್ ಅನ್ನು ಸಾಗಿಸುವ ಸೊಳ್ಳೆಗಳು ಸಾಮಾನ್ಯವಾಗಿ ಮನೆಗಳಲ್ಲಿ ಮತ್ತು ಸುತ್ತಮುತ್ತ ವಾಸಿಸುತ್ತವೆ, ಬಳಸಿದ ಆಟೋಮೊಬೈಲ್ ಟೈರ್‌ಗಳಂತಹ ವಸ್ತುಗಳಲ್ಲಿ ಸಂಗ್ರಹಿಸಬಹುದಾದ ನಿಂತಿರುವ ನೀರಿನಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಸೊಳ್ಳೆಗಳು ಮೊಟ್ಟೆಗಳನ್ನು ಇಡುವ ಆವಾಸಸ್ಥಾನಗಳನ್ನು ತೆಗೆದುಹಾಕುವ ಮೂಲಕ ಸೊಳ್ಳೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ನೀವು ಸಹಾಯ ಮಾಡಬಹುದು. ವಾರಕ್ಕೊಮ್ಮೆಯಾದರೂ, ನೆಟ್ಟ ಪಾತ್ರೆಗಳು, ಪ್ರಾಣಿಗಳ ಭಕ್ಷ್ಯಗಳು ಮತ್ತು ಹೂವಿನ ಹೂದಾನಿಗಳಂತಹ ನಿಂತಿರುವ ನೀರನ್ನು ಹಿಡಿದಿಟ್ಟುಕೊಳ್ಳುವ ಖಾಲಿ ಮತ್ತು ಶುದ್ಧ ಪಾತ್ರೆಗಳು. ಶುದ್ಧೀಕರಣದ ನಡುವೆ ನಿಂತಿರುವ ನೀರಿನ ಪಾತ್ರೆಗಳನ್ನು ಮುಚ್ಚಿಡಿ.

ಡೆಂಘೀ ಜ್ವರವನ್ನು ತಡೆಗಟ್ಟಲು ಸರ್ಕಾರ ಶೀಘ್ರವಾಗಿ ಕಾರ್ಯಪ್ರವೃತ್ತವಾಗಬೇಕು ಮತ್ತು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯಗಳು, ಔಷಧಿಗಳು ಲಭ್ಯತೆಗೆ ಆದ್ಯತೆ ನೀಡಬೇಕು ಹಾಗೂ ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮತ್ತಿತರ ಸ್ವಯಂ ಸೇವಕರ ನೆರವಿನೊಂದಿಗೆ ಮನೆ ಮನೆ ಸಮೀಕ್ಷೆ ಜನರಲ್ಲಿ ಡೆಂಘೀ ಜ್ವರದ ಬಗ್ಗೆ ಅರಿವು ಮೂಡಿಸಬೇಕು.

# ತ್ಯಾಜ್ಯ ಮರುಬಳಕೆಗೆ ಇಡಬೇಕಿದೆ ಕ್ರಾಂತಿಕಾರಿ ಹೆಜ್ಜೆ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಕೊಳೆಯದ ವಸ್ತುಗಳನ್ನು ಪುನರ್‌ಬಳಸುವ ಆಧುನಿಕ ವಿಧಾನಗಳನ್ನು ಮತ್ತು ಕೊಳೆಯುವ ವಸ್ತುಗಳನ್ನು ಸಮರ್ಪಕವಾಗಿ ಸಂಗ್ರಹಿಸಿ, ಆರೋಗ್ಯಯುತವಾಗಿ ಬಳಸುವ ಮಾರ್ಗಗಳನ್ನು ಕೂಡಲೇ ಅನುಸರಿಸುವ ಕಾಲಘಟ್ಟದಲ್ಲಿದ್ದೇವೆ.

ಪ್ರಸ್ತುತ ದಿನಗಳಲ್ಲಿ ತ್ಯಾಜ್ಯವೆಂಬುದು ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ತ್ಯಾಜ್ಯವನ್ನು ಸಂಗ್ರಹಿಸುವ ಮತ್ತು ಅದನ್ನು ಸಮರ್ಪಕವಾಗಿ ವಿಲೇವಾರಿ ಮಾಡುವ ವಿಚಾರವಂತೂ ತ್ಯಾಜ್ಯಕ್ಕಿಂತಲೂ ಬಹುದೊಡ್ಡ ಸಮಸ್ಯೆಯಾಗಿದೆ. ಹೀಗಾಗಿ, ಕಸ ಅಥವಾ ತ್ಯಾಜ್ಯವನ್ನು ನಿರ್ವಹಿಸುವ ಹಂತದಲ್ಲಿಯೇ ನಾವಿಂದು ನಮ್ಮ ಆಧುನಿಕ ತಂತ್ರಜ್ಞಾನವನ್ನು, ಬುದ್ಧಿಮತ್ತೆಯನ್ನು ಬಳಸಬೇಕಾಗಿದೆ.

ಹಿಂದಿನ ಕಾಲದಲ್ಲಿ ತ್ಯಾಜ್ಯವೇ ಇರುತ್ತಿರಲಿಲ್ಲ ಅಥವಾ ಇದ್ದರೂ ಅವುಗಳನ್ನು ಗದ್ದೆಗೆ, ಹೊಲಕ್ಕೆ ಹಾಕುವಂತಹ ಗೊಬ್ಬರದಂತೆ ಮರುಬಳಸಬಹುದಾದ ಕಸಗಳಾಗಿರುತ್ತಿದ್ದವು. ಇಂದಿನ ತಲೆಮಾರು, ಪ್ಲಾಸ್ಟಿಕ್ ಮತ್ತು ಇತರೆ Proccessed Food, Packed Material ಗಳನ್ನು ಯಥೇಚ್ಛವಾಗಿ ಬಳಸುತ್ತಿದೆ. ಓದು, ವಿದ್ಯೆ ಹೆಚ್ಚುತ್ತ ಹೋದಂತೆ ಹಾನಿಕಾರಕ ಕಸವನ್ನು ಬಳಸಬಾರದೆಂಬ ವಿವೇಕ ಹೊಂದಬೇಕಿದ್ದ ಇಂದಿನ ವಿದ್ಯಾವಂತ ತಲೆಮಾರು ತ್ಯಾಜ್ಯದ ಕುರಿತು ಅಸಡ್ಡೆ ಹೊಂದಿರುವುದು ಬೇಸರದ ಸಂಗತಿ.

ಪೆಪ್ಸಿ-ಕೋಲಾದಂತಹ ಮತ್ತು ಇತರೆ ದೃಢವಾದ ಪ್ಲಾಸ್ಟಿಕ್ ಬಾಟಲಿಗಳು ವಿವಿಧ ಕಾರ್ಯಗಳಿಗಾಗಿ ಗೃಹಬಳಕೆಯಲ್ಲಿ ಬಳಸುವ ರೂಢಿ ನಮ್ಮ ಜನರಿಗಿದೆ. ಇಂತಹ ತ್ಯಾಜ್ಯಗಳು ಇಡೀ ಜೀವ ಸಂಕುಲಕ್ಕೆ ಮಾರಕವಾಗಿವೆ. ಇಂತಹ ಬಾಟಲಿಗಳನ್ನು ಸಣ್ಣ ಎಳೆಗಳಂತೆ ಕತ್ತರಿಸುವ ಚಿಕ್ಕ ಯಂತ್ರಕ್ಕೆ ಹಾಕಿದರೆ, ನೂಡಲ್ಸ್‌ನಂತೆ ಪ್ಲಾಸ್ಟಿಕ್ ಎಳೆಗಳು ಬರುತ್ತವೆ. ಇವುಗಳನ್ನು ಸಣ್ಣಗೆ ಕತ್ತರಿಸುವ ಯಂತ್ರಕ್ಕೆ ಹಾಕಿದರೆ, ಅಕ್ಕಿಯಂತೆ ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಕಣಗಳು ಹೊರಬರುತ್ತವೆ. ನಂತರ, ಮಿಠಾಯಿ (Cotton Candy) ತಯಾರಿಸುವ ತಿರುಗು ಯಂತ್ರಕ್ಕೆ ಹಾಕಿದರೆ, ಶುದ್ಧ ಹತ್ತಿಯಂತೆ ಪ್ಲಾಸ್ಟಿಕ್ ಕಾಟನ್ ಹತ್ತಿ ಸಿಗುತ್ತದೆ.

ಈ ಹತ್ತಿಯನ್ನು ಬಳಸಿಕೊಂಡೇ ಅತ್ಯಂತ ಅಗ್ಗದ ದರದ ಚಳಿಗಾಲಕ್ಕೆ ಬೇಕಾದ ತಲೆ, ಕಾಲು, ಕೈಗವಸು ಸೇರಿದಂತೆ ಬಹುತೇಕ (ಕೃತಕ) ಉಣ್ಣೆ ಮತ್ತು ಹತ್ತಿ ಬಟ್ಟೆಗಳು ತಯಾರಾಗಿ ಇಂದು ಮಾರುಕಟ್ಟೆಯನ್ನು ಆಳುತ್ತಿವೆ. ಇದರಲ್ಲಿ ಜಪಾನ್, ಸೌತ್ ಕೊರಿಯಾ, ತೈವಾನ್ ದೇಶಗಳು ಇಂತಹ ತ್ಯಾಜ್ಯಗಳನ್ನು ಮರುಬಳಕೆ ಮಾಡುವಲ್ಲಿ ಉಳಿದ ದೇಶಗಳಿಗಿಂತ ಮುಂದಿವೆ ಎನ್ನಬಹುದು.

ಇದರಂತೆಯೇ, ಗಾಜನ್ನು ಪುಡಿ ಮಾಡಿ ಆಸ್ಫಾಲ್ಟ್ ಪಾದಚಾರಿ ವಸ್ತುಗಳಲ್ಲಿ ಬಳಸಬಹುದು. ಬಣ್ಣ-ವಿಂಗಡಣೆಯ ಗಾಜನ್ನು ಪುಡಿ ಮಾಡಿ, ಗಾಜಿನ ತಯಾರಿಕೆಯಲ್ಲಿ ಅತ್ಯಗತ್ಯ ಅಂಶವಾದ ಕುಲೆಟ್ ಆಗಿ ಮಾರಾಟ ಮಾಡಲಾಗುತ್ತದೆ. ಸ್ಟೀಲ್ ಕ್ಯಾನ್‌ಗಳನ್ನು ಬೇಲ್ಡ್ ಮಾಡಲಾಗುತ್ತದೆ ಮತ್ತು ಉಕ್ಕಿನ ಗಿರಣಿಗಳಿಗೆ ಸ್ಕ್ರ್ಯಾಪ್ ಆಗಿ ರವಾನಿಸಲಾಗುತ್ತದೆ ಮತ್ತು ಸ್ಮೆಲ್ಟರ್‌ಗಳಿಂದ ಮರುಬಳಕೆಗಾಗಿ ಅಲ್ಯೂಮಿನಿಯಂ ಅನ್ನು ಕರಗಿಸಿ ಬಳಸಲಾಗುತ್ತದೆ. ಅಲ್ಯೂಮಿನಿಯಂ ಪುರಸಭೆಯ ಘನ ತ್ಯಾಜ್ಯದ ಚಿಕ್ಕ ಘಟಕಗಳಲ್ಲಿ ಒಂದಾಗಿದ್ದು, ಮರುಬಳಕೆ ಮಾಡಬಹುದಾದ ಬೆಲೆಯುಳ್ಳ ವಸ್ತುವಾಗಿದೆ. ಪ್ಲಾಸ್ಟಿಕ್ ಮರುಬಳಕೆ ಮಾಡುವುದು ಒಂದು ಸವಾಲಾಗಿದೆ. ಹೆಚ್ಚಾಗಿ ಅದರ ಉತ್ಪಾದನೆಯಲ್ಲಿ ಬಳಸಲಾಗುವ ವಿವಿಧ ಪಾಲಿ ಮರಿಕ್ ವಸ್ತುಗಳಿಂದಾಗಿ ಮಿಶ್ರಿತ ಥರ್ಮೋಪ್ಲಾಸ್ಟಿಕ್‌ಗಳನ್ನು ಪ್ಲಾಸ್ಟಿಕ್ ಲುಂಬರ್‌ನಂತಹ ಕಡಿಮೆ-ಗುಣ ಮಟ್ಟದ ಉತ್ಪನ್ನಗಳನ್ನು ತಯಾರಿಸಲು ಮಾತ್ರ ಬಳಸಬಹುದು. ಬಾಟಲಿಗಳನ್ನು ಕತ್ತರಿಸಿ, ಪೊರಕೆ ಇತ್ಯಾದಿ ದಿನಬಳಕೆ ವಸ್ತುಗಳನ್ನು ತಯಾರಿಸ ಬಹುದು.

ಕಾಗದದ ಸ್ಟ್ರೀಮ್, ಸುಕ್ಕುಗಟ್ಟಿದ ವಸ್ತುಗಳು ಮತ್ತು ಮಿಶ್ರ ಕಾಗದಗಳನ್ನು ತೆಗೆದುಹಾಕಲು ಹಳೆಯ ಪತ್ರಿಕೆಗಳನ್ನು ಕನ್ವೇಯರ್ ಬೆಲ್ಟ್‌ನಲ್ಲಿ ಕೈಯಿಂದ ವಿಂಗಡಿಸಲಾಗುತ್ತದೆ. ನಂತರ ಅವುಗಳನ್ನು ಪೇಪರ್ ಮಿಲ್‌ಗಳಿಗೆ ಸಾಗಿಸಲು ಟ್ರೇಲರ್‌ಗಳಲ್ಲಿ ಲೋಡ್ ಮಾಡಲಾಗುತ್ತದೆ. ಇವುಗಳನ್ನು ಹೆಚ್ಚು ಪತ್ರಿಕೆಗಳ ತಯಾರಿಕೆಯಲ್ಲಿ ಮರುಬಳಕೆ ಮಾಡಲಾಗುತ್ತದೆ. ಮಿಶ್ರಿತ ಕಾಗದವನ್ನು ಸುಕ್ಕುಗಟ್ಟಿದ ಕಾಗದದಿಂದ ಬೇರ್ಪಡಿಸಿ ಟಿಶ್ಯೂ ಗಿರಣಿಗಳಿಗೆ ಮಾರಾಟ ಮಾಡಲಾಗುತ್ತದೆ. ಪಲ್ಪಿಂಗ್, ಡಿ-ಇಂಕಿಂಗ್ ಮತ್ತು ಸ್ಕ್ರೀನಿಂಗ್ ತ್ಯಾಜ್ಯ ಕಾಗದದ ಪ್ರಕ್ರಿಯೆಗಳು ಸಾಮಾನ್ಯವಾಗಿ ಮರದ ನಾರುಗಳಿಂದ ಕಾಗದವನ್ನು ತಯಾರಿಸುವುದಕ್ಕಿಂತ ಹೆಚ್ಚು ದುಬಾರಿಯಾಗಿದ್ದರೂ, ಹೆಚ್ಚಿನ ಸಂಸ್ಕರಣಾ ಘಟಕಗಳ ಸ್ಥಾಪನೆಯೊಂದಿಗೆ ಮರುಬಳಕೆಯ ಕಾಗದದ ಮಾರುಕಟ್ಟೆಯು ಬೆಳೆದಿದೆ.

ರಬ್ಬರ್ ಅನ್ನು ಕೆಲವೊಮ್ಮೆ ಘನತ್ಯಾಜ್ಯದಿಂದ ಪುನಃ ಪಡೆದುಕೊಳ್ಳಲಾಗುತ್ತದೆ ಮತ್ತು ಚೂರುಚೂರು, ಸುಧಾರಿತ ಮತ್ತು ರಿವಲ್ಕನೈಸೇಶನ್ ಎಂಬ ಪ್ರಕ್ರಿಯೆಯಲ್ಲಿ ಮರುಬಳಕೆಗೆ ರೂಪಿಸಲಾಗುತ್ತದೆ. ಚೂರುಚೂರು ರಬ್ಬರ್ ಅನ್ನು ಆಸ್ಫಾಲ್ಟ್ ಪಾದಚಾರಿಗಳು ಮತ್ತು ಕೃತಕ ಟರ್ಫ್‌ಗಳಲ್ಲಿ ಬಳಸಬಹುದು ಮತ್ತು ನೇರವಾಗಿ ಹೊರಗಡೆ ಮಲ್ಚ್ ಆಗಿ ಮಾರಾಟ ಮಾಡಲಾಗುತ್ತದೆ. ತಿರಸ್ಕರಿಸಿದ ಟೈರ್‌ಗಳನ್ನು ಟೈರ್ ಆಟದ ಮೈದಾನಗಳಲ್ಲಿ ಮತ್ತು ಮಕ್ಕಳ ಬಳಕೆಗಾಗಿ ಸ್ವಿಂಗ್ ಸೇರಿದಂತೆ ಇತರ ಮನರಂಜನಾ ಪರಿಕರಗಳನ್ನಾಗಿ ನಾವು ಬಳಸಿಕೊಳ್ಳಬಹುದಾಗಿದೆ.

ನಮ್ಮ ಚಿಕ್ಕಪುಟ್ಟ ಊರಿನ ಹಾದಿಬೀದಿಗಳಿಂದ ಹಿಡಿದು ದೇಶದ ರಾಷ್ಟ್ರಪತಿ ಭವನ, ಪ್ರಧಾನ ಮಂತ್ರಿ ಕಚೇರಿಯವರೆಗೂ ವ್ಯಾಪಿಸಿರುವ ತ್ಯಾಜ್ಯ ಸಮಸ್ಯೆಗೆ ಮುಕ್ತಿ ನೀಡಲು, ಅದರ ಸಮರ್ಪಕ ನಿರ್ವಹಣೆ ಮತ್ತು ಅವುಗಳನ್ನು ಮರುಬಳಕೆ ಮಾಡುವ ವಿಚಾರ - ವಿಧಾನಗಳಿಗೆ ಇಂದಿನ ಜ್ಞಾನ-ತಂತ್ರಜ್ಞಾನ ಉಪಯೋಗಿಸಬೇಕಿರುವುದು ಅಗತ್ಯವಾಗಿದೆ. ಘನ ತ್ಯಾಜ್ಯ ನಿರ್ವಹಣೆ ಎಂಬ ಪದವು ಘನ ತ್ಯಾಜ್ಯಗಳನ್ನು ಸಂಗ್ರಹಿಸುವುದರಿಂದ ಹಿಡಿದು ಸಾಗಣೆ, ಸಂಸ್ಕರಣೆ, ಬೇರ್ಪಡಿಸುವಿಕೆ ಮತ್ತು ವಿಲೇವಾರಿ ಎಂಬಂತಹ ಪ್ರಕ್ರಿಯೆಯ ವಿಧಾನವನ್ನು ತಿಳಿಸುತ್ತದೆ.

ಘನ ತ್ಯಾಜ್ಯವು ದ್ರವವಲ್ಲದ ಹಾಗೂ ಕರಗದ ವಸ್ತುವಾಗಿದ್ದು, ಪುರಸಭೆಯ ಕಸದಿಂದ ಕೈಗಾರಿಕಾ ತ್ಯಾಜ್ಯದವರೆಗೆ ಕೆಲವೊಮ್ಮೆ ಅಪಾಯಕಾರಿ ಪದಾರ್ಥಗಳೂ ತ್ಯಾಜ್ಯಕ್ಕೆ ಸೇರುತ್ತವೆ. ಇದು ಮನೆಯ ತ್ಯಾಜ್ಯ, ವಾಣಿಜ್ಯ ತ್ಯಾಜ್ಯ, ಸಾಂಸ್ಥಿಕ ತ್ಯಾಜ್ಯ, ಅಡುಗೆ ಮತ್ತು ಮಾರುಕಟ್ಟೆ ತ್ಯಾಜ್ಯ, ಜೈವಿಕ ವೈದ್ಯಕೀಯ ತ್ಯಾಜ್ಯ ಮತ್ತು ಇ-ತ್ಯಾಜ್ಯವನ್ನು ಒಳಗೊಂಡಿದೆ.

ಬಹುತೇಕ ಅಭಿವೃದ್ಧಿ ಹೊಂದಿದ ನಗರಗಳ ಬೀದಿಗಳಲ್ಲಿ ಪ್ರತಿದಿನ ಹಲವಾರು ಟನ್‌ಗಳಷ್ಟು ಕಸವನ್ನು ಸಂಗ್ರಹಿಸದೆ ಹಾಗೇ ಬಿಡಲಾಗುತ್ತದೆ. ಇದು ರೋಗವನ್ನು ಹರಡುವ, ಒಳಚರಂಡಿಗೆ ಅಡ್ಡಿಪಡಿಸುವ ಮತ್ತು ಇತರ ಮೂಲಸೌಕರ್ಯ ಸಮಸ್ಯೆಗಳನ್ನು ಹುಟ್ಟುಹಾಕಿ ಕೀಟಗಳ ಸಂತಾನೋತ್ಪತ್ತಿಯ ಸ್ಥಳವಾಗಿ ಪರಿಣಮಿಸುತ್ತದೆ. ಭಾರತವು ಪ್ರತಿ ವರ್ಷ 277 ಮಿಲಿಯನ್ ಟನ್ ಘನತ್ಯಾಜ್ಯವನ್ನು ಉತ್ಪಾದಿಸುತ್ತದೆ ಎಂದು ಅಂದಾಜಿ ಸಲಾಗಿದೆ. ಇದು 2030ರಲ್ಲಿ 390 ಮಿಲಿಯನ್ ಟನ್‌ಗಳನ್ನು ಮತ್ತು 2050ರ ವೇಳೆಗೆ 600 ಮಿಲಿಯನ್ ಟನ್‌ಗಳನ್ನು ಮುಟ್ಟುವ ಸಾಧ್ಯತೆಯಿದೆ ಎಂದು ಹಲವರ ಅಭಿಪ್ರಾಯ.

**ತ್ಯಾಜ್ಯ ನಿರ್ವಹಣೆಯ ಪ್ರಾಮುಖ್ಯತೆ:** ತ್ಯಾಜ್ಯ ನಿರ್ವಹಣೆಯು ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು. ಅದು ಪರಿಸರ ಸಂರಕ್ಷಣೆ ಮತ್ತು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚುತ್ತಿದ್ದು, ಮಿತಿಯಿಲ್ಲದೆ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಅದರ ಅಪಾಯಕಾರಿ ಪರಿಣಾಮಗಳ ಬಗ್ಗೆ ಇಂದಿನ ಜನತೆ ಸರಿಯಾಗಿ ತಿಳಿದಿಲ್ಲ, ನಾವು ಎಲ್ಲ ಕಸವನ್ನು ಸರಿಯಾದ ವಿಲೇವಾರಿ ವಿಧಾನಗಳಿಲ್ಲದ ಸ್ಥಳದಲ್ಲಿ ಎಸೆಯುತ್ತೇವೆ ಅಥವಾ ಸುಟ್ಟುಹಾಕುತ್ತೇವೆ, ಇದು ಮಾಲಿನ್ಯಕಾರಕಗಳನ್ನು ಗಾಳಿಯಲ್ಲಿ ಬಿಡುಗಡೆ ಮಾಡುತ್ತದೆ. ಮನೆಗಳು, ಕೈಗಾರಿಕೆಗಳು ಮತ್ತು ಕಾರ್ಖಾನೆಗಳ ಎಲ್ಲ ತ್ಯಾಜ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು; ಇಲ್ಲದಿದ್ದರೆ, ಇದು ವಿವಿಧ ಪರಿಸರ ಸಮಸ್ಯೆಗಳು ಮತ್ತು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗ ಬಹುದು. ಅದಕ್ಕಾಗಿಯೇ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಲು, ಪ್ರತ್ಯೇಕಿಸಲು, ಸಾಗಿಸಲು ಮತ್ತು ವಿಲೇವಾರಿ ಮಾಡಲು ಪರಿಣಾಮಕಾರಿ ಮತ್ತು ಆಧುನಿಕ ಮಾರ್ಗಗಳನ್ನು ನಾವು ಕಂಡುಕೊಳ್ಳಬೇಕಾಗಿದೆ.

**ತ್ಯಾಜ್ಯ ನಿರ್ವಹಣೆಯ ವಿಧಾನಗಳು:** ತ್ಯಾಜ್ಯ ನಿರ್ವಹಣೆಗೆ ಹಲವಾರು ವಿಧಾನಗಳಿದ್ದು, ಇದು ನಾವು ನಿರ್ವಹಿಸುವ ತ್ಯಾಜ್ಯದ ಪ್ರಕಾರವನ್ನು ಅವಲಂಬಿಸಿ ಬದಲಾಗುತ್ತದೆ. ತ್ಯಾಜ್ಯವನ್ನು ಘನ, ದ್ರವ ಮತ್ತು ಅನಿಲ ಎಂದು ವರ್ಗೀಕರಿಸಬಹುದು ಮತ್ತು ಅವು ನಮ್ಮ ಮನೆಗಳು, ಆಸ್ಪತ್ರೆಗಳು, ಕಾರ್ಖಾನೆಗಳು ಅಥವಾ ಪರಮಾಣು ವಿದ್ಯುತ್ ಸ್ಥಾವರಗಳಿಂದ ಉತ್ಪತ್ತಿಯಾಗುತ್ತವೆ. ಪ್ರತಿಯೊಂದು ರೀತಿಯ ತ್ಯಾಜ್ಯವು ವಿಭಿನ್ನ ವಿಲೇವಾರಿ ವಿಧಾನವನ್ನು ಹೊಂದಿರುವುದರಿಂದ, ಘನತ್ಯಾಜ್ಯ ನಿರ್ವಹಣೆಗೆ ಭೂಗುಂಡಿಗಳು ಸೂಕ್ತವಾಗಿವೆ.

ಲ್ಯಾಂಡ್ಫಿಲ್ ಎಂಬುದು ಆಳವಾದ ಕಸದ ಹೊಂಡವಾಗಿದ್ದು, ಇದು ಸಾಮಾನ್ಯವಾಗಿ ನಗರದಿಂದ ದೂರದಲ್ಲಿ ನಿರ್ಮಿಸಿ, ಅಲ್ಲಿ ಘನ ತ್ಯಾಜ್ಯಗಳನ್ನು ಸುರಿಯಲಾಗುತ್ತದೆ, ಇದು ವರ್ಷಗಳಲ್ಲಿ ಕೊಳೆಯುತ್ತದೆ. ಸುಡುವಿಕೆಯು ತ್ಯಾಜ್ಯ ನಿರ್ವಹಣೆಗೆ ಮತ್ತೊಂದು ಜನಪ್ರಿಯ ವಿಧಾನವಾಗಿ ಕಸ ವಿಲೇವಾರಿ ಮಾಡುವ ಗುತ್ತಿಗೆದಾರರಿಂದ ಬಳಕೆಯಾಗುತ್ತಿದೆ. ಆದರೆ ದಹನ ಪ್ರಕ್ರಿಯೆಯು ಪರಿಸರವನ್ನು ಕಲುಷಿತಗೊಳಿಸುವ ಹಸಿರುಮನೆ ಅನಿಲ (Greenhouse Gases) ಗಳನ್ನು ಹೆಚ್ಚಾಗಿ ಬಿಡುಗಡೆ ಮಾಡುವುದರಿಂದ ಇದು ಹೆಚ್ಚು ಅಪಾಯಕಾರಿ ವಿಧಾನ ಎಂಬುದನ್ನು ನಿರ್ವಹಣೆಗಾರರು ಮರೆಯಬಾರದು.

ತ್ಯಾಜ್ಯದ ಮರುಬಳಕೆಯು ತ್ಯಾಜ್ಯ ವಸ್ತುಗಳನ್ನು ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸುವ ಮೂಲಕ ಉತ್ಪಾದಕವೆಂದು ಪರಿಗಣಿಸಲಾಗಿದೆ, ಮರುಬಳಕೆ ಮತ್ತು ತ್ಯಾಜ್ಯವನ್ನು ಕಡಿಮೆ ಮಾಡುವುದು ಸಹ ಕಡಿಮೆ ವೆಚ್ಚದಾಯಕವಾಗಿದೆ. ಭೂಮಿಯೊಳಗೆ ಮುಚ್ಚುವುದು ಮತ್ತು ಸುಡುವಿಕೆಗಿಂತ ಭಿನ್ನವಾಗಿ, ಮರುಬಳಕೆಯು ಪರಿಸರಕ್ಕೆ ಯಾವುದೇ ರೀತಿಯಲ್ಲಿ ಹಾನಿಯಾಗುವುದಿಲ್ಲ.

ಸಾವಯವ ತ್ಯಾಜ್ಯಗಳನ್ನು ಮರುಬಳಕೆ ಮಾಡಬಹುದಾದ್ದರಿಂದ, ನಾವು ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು, ಈ ಮೂಲಕ ಪ್ಲಾಸ್ಟಿಕ್ ಮಾಲಿನ್ಯವನ್ನು ತಪ್ಪಿಸಬಹುದು. ಪ್ರಸ್ತುತ ತ್ಯಾಜ್ಯ ಸಂಗ್ರಹದ ಬಹುಪಾಲು ಭಾಗಕ್ಕೆ ಪ್ಲಾಸ್ಟಿಕ್ ಕೊಡುಗೆಯೇ ಅಧಿಕವಾಗಿದೆ. ಏಕೆಂದರೆ ಅವುಗಳು ಕೊಳೆಯದೇ ಇರುವ ವಸ್ತು(ವಿಘಟನೀಯ)ಗಳಾಗಿವೆ. ಆಹಾರ ತ್ಯಾಜ್ಯ ಮತ್ತು ಸಸ್ಯ ಉತ್ಪನ್ನಗಳನ್ನು ನಿರ್ವಹಿಸಲು ಸಾವಯವ ಸೂಕ್ತ ವಿಧಾನವಾಗಿರುವುದರಿಂದ ನಾವು ಮಿಶ್ರಗೊಬ್ಬರವನ್ನು ಬಳಸುವ ಅಭ್ಯಾಸ ಮಾಡಬೇಕು. ಕಾಂಪೋಸ್ಟಿಂಗ್ ಮೂಲಕ, ಸಾವಯವ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸಲಾಗುತ್ತದೆ, ಇದು ಮಣ್ಣನ್ನು ಪೋಷಿಸುತ್ತದೆ. ಸಸ್ಯಗಳು ಮತ್ತು ಮರಗಳ ಬೆಳವಣಿಗೆಯನ್ನು ಬೆಂಬಲಿಸುತ್ತದೆ.

**ಪುರಸಭೆಯ ಘನತ್ಯಾಜ್ಯ:** ಉತ್ಪನ್ನ ಪ್ಯಾಕೇಜಿಂಗ್, ಅಂಗಳದ ಟ್ರಿಮ್ಮಿಂಗ್‌ಗಳು, ಪೀಠೋಪಕರಣಗಳು, ಬಟ್ಟೆಗಳು, ಬಾಟಲಿಗಳು, ಕ್ಯಾನ್‌ಗಳು, ಆಹಾರ, ದಿನಪತ್ರಿಕೆಗಳು, ಉಪಕರಣಗಳು, ಎಲೆಕ್ಟ್ರಾನಿಕ್ಸ್ ಮತ್ತು ಬ್ಯಾಟರಿಗಳಂತಹ ಪ್ರತಿದಿನದ ಸರಕುಗಳು ಪುರಸಭೆಯ ಘನ ತ್ಯಾಜ್ಯವನ್ನು ತಯಾರಿಸುತ್ತವೆ. ಹೆಚ್ಚುತ್ತಿರುವ ನಗರೀಕರಣ ಮತ್ತು ಜೀವನಶೈಲಿಯ ಬದಲಾವಣೆಯೊಂದಿಗೆ, ಪುರಸಭೆಯ ತ್ಯಾಜ್ಯದ ಪ್ರಮಾಣವೂ ಏರುತ್ತಿದೆ.

ಪುರಸಭೆಯ ಘನತ್ಯಾಜ್ಯ ನಿರ್ವಹಣೆಯು ಪ್ರಸ್ತುತ ಸಮಯದಲ್ಲಿ ಅಗತ್ಯವಾಗಿದ್ದು, ಇದಕ್ಕೆ ಸೂಕ್ತ ಕಸ ವಿಲೇವಾರಿ ಮಾಡುವವರ ಕುರಿತಂತೆಯೂ ಗಮನಹರಿಸಬೇಕಿದೆ. ಯಾರು, ಯಾವಾಗ ಮತ್ತು ಎಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಾರೆ, ಅವರಿಗೆ ಸಂಬಳ ಅಥವಾ ಕೂಲಿ ಯಾರು ಕೊಡುತ್ತಾರೆ ಮತ್ತು ಇದಕ್ಕೆ ನೌಕರಿದ್ದಾರೆಯೇ ಅಥವಾ ಗುತ್ತಿಗೆ ಕೊಡಲಾಗಿದೆಯೇ ಎಂಬುದರ ಕುರಿತು ಸಮರ್ಪಕ ಮಾರ್ಗಸೂಚಿ ಜಾರಿಗೊಳಿಸಬೇಕಿದೆ.

ನಗರೀಕರಣದ ನಂತರ, ನಾವು ನಮ್ಮ ದೈನಂದಿನ ಜೀವನದಲ್ಲಿ ಹೆಚ್ಚಿನ ಸಂಖ್ಯೆಯ ತ್ಯಾಜ್ಯಗಳನ್ನು ಉತ್ಪಾದಿಸುತ್ತಿರುವುದನ್ನು ಎಲ್ಲೆಡೆಯೂ ಕಾಣಬಹುದಾಗಿದೆ. ತ್ಯಾಜ್ಯವು ಅನಗತ್ಯ ಮತ್ತು ಬಳಸಿದ ನಂತರದ ವಸ್ತುಗಳು ಅಥವಾ ಆಹಾರದ ಪೊಟ್ಟಣಗಳು, ಒಡೆದ ಪ್ಲಾಸ್ಟಿಕ್ ಪಾತ್ರೆಗಳು, ಕಾಗದದ ಚೀಲಗಳು ಇತ್ಯಾದಿಗಳಂತಹ ಸರಕುಗಳ ಯಾವುದೇ ಬಳಕೆ ಇಲ್ಲದಂತಹ ತ್ಯಾಜ್ಯಗಳ ಪ್ರಕಾರಗಳನ್ನು ಗುರುತಿಸುವ ಮೂಲಕ, ತ್ಯಾಜ್ಯಗಳ ವಿವಿಧ ಮೂಲಗಳನ್ನು ಸುಲಭವಾಗಿ ಗುರುತಿಸಬಹುದು.

(ಅ) ದ್ರವ ತ್ಯಾಜ್ಯಗಳು-ಕೈಗಾರಿಕಾ ಉತ್ಪಾದನೆ, ತೊಳೆಯುವುದು, ಫ್ಲಶಿಂಗ್ ಅಥವಾ ಕೈಗಾರಿಕೆಗಳ ಇತರ ಪ್ರಕ್ರಿಯೆಗಳಿಂದ ದ್ರವ ರೂಪದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಗಳನ್ನು ದ್ರವ ತ್ಯಾಜ್ಯ ಎಂದು ಕರೆಯಲಾಗುತ್ತದೆ.

(ಆ) ಅನಿಲ ತ್ಯಾಜ್ಯಗಳು-ಆಟೋಮೊಬೈಲ್‌ಗಳು, ಕಾರ್ಖಾನೆಗಳು ಅಥವಾ ಪೆಟ್ರೋಲಿಯಂನಂತಹ ಪಳೆಯುಳಿಕೆ ಇಂಧನಗಳ ದಹನ ಮೂಲಗಳು ಅನಿಲಗಳನ್ನು ಬಿಡುಗಡೆ ಮಾಡುತ್ತವೆ, ಈ ತ್ಯಾಜ್ಯಗಳನ್ನು ಅನಿಲ ತ್ಯಾಜ್ಯ ಎಂದು ಕರೆಯಲಾಗುತ್ತದೆ. ಇವು ಇತರೆ ಅನಿಲಗಳೊಳಗೆ ಮಿಶ್ರಣಗೊಂಡು ಹೊಗೆ ಮತ್ತು ಆಮ್ಲದ ಮಳೆಗೆ ಕಾರಣವಾಗುತ್ತವೆ.

(ಇ) ಘನತ್ಯಾಜ್ಯಗಳು-ಮಾನವ ಸಮಾಜದಿಂದ ಉತ್ಪತ್ತಿಯಾಗುವ ತ್ಯಾಜ್ಯದ ಬಹುಪಾಲು ಭಾಗವು ಘನತ್ಯಾಜ್ಯಗಳ ರೂಪದಲ್ಲಿದೆ. ಘನತ್ಯಾಜ್ಯದ ವಿಧಗಳನ್ನು ಅವುಗಳ ಮೂಲ ಅಥವಾ ಕೃಷಿ ತ್ಯಾಜ್ಯಗಳು, ನಗರ ತ್ಯಾಜ್ಯಗಳು, ವಿಕಿರಣಶೀಲ ತ್ಯಾಜ್ಯಗಳು, ಕೈಗಾರಿಕಾ ತ್ಯಾಜ್ಯಗಳು ಮತ್ತು ಜೈವಿಕ ವೈದ್ಯಕೀಯ ತ್ಯಾಜ್ಯಗಳಂತಹ ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಹಾಗೆಯೇ, ಜೈವಿಕ ವಿಘಟನೀಯ ಮತ್ತು ಜೈವಿಕ ವಿಘಟನೀಯವಲ್ಲದ ತ್ಯಾಜ್ಯಗಳ ಕುರಿತೂ ನಾವು ಇಂದು ಗಮನಹರಿಸಬೇಕಾಗಿದೆ.

ಕೊಳೆಯುವಂತಹ ಮತ್ತು ಕೊಳೆಯದೇ ಇರುವಂತಹ ತ್ಯಾಜ್ಯಗಳನ್ನು ಅತ್ಯಂತ ಸ್ಪಷ್ಟವಾಗಿ ಸಂಗ್ರಹಿಸುವ ಮತ್ತು ಸೂಕ್ತವಾಗಿ ಬೇರ್ಪಡಿಸುವ ಜವಾಬ್ದಾರಿ ತಂಡಗಳ ಅವಶ್ಯಕತೆ ಇಂದು ಅಗತ್ಯವಿದೆ. ಕೊಳೆಯದೇ ಇರುವಂತಹ ವಸ್ತುಗಳನ್ನು ಸಂಗ್ರಹಿಸಿ, ಅದರಲ್ಲೂ ಮರುಬಳಕೆ ಮಾಡಬಹುದೇ ಎಂಬ ಸಾಮಾನ್ಯ ಜ್ಞಾನದೊಂದಿಗೆ ಅವುಗಳನ್ನು ಪರಿಸರಕ್ಕೆ ಹಾನಿಯಾಗದಂತೆ ಬೇರ್ಪಡಿಸಿ, ಮರುಬಳಕೆಗೆ ಸಂಗ್ರಹಿಸುವ ಬುದ್ಧಿವಂತಿಕೆಯೂ ವಿಲೇವಾರಿ ಮಾಡುವವರಿಗೆ ಬೇಕಿದೆ. ಇದರೊಂದಿಗೆ, ರಾಜ್ಯದಲ್ಲಿ ಅಥವಾ ಸ್ಥಳೀಯ ಮಟ್ಟದ ಪಾಲಿಕೆಗಳಲ್ಲಿ ಹೆಚ್ಚಾಗಿ ಸಂಗ್ರಹವಾಗುವ ಮರುಬಳಕೆ ಮಾಡಬಹುದಾದ ತ್ಯಾಜ್ಯವನ್ನು ಗುತ್ತಿಗೆಯಾಧಾರದಲ್ಲಿ ಅಥವಾ ಖರೀದಿ ಮಾಡುವಂತಹ ಕೆಲ ವಿದೇಶಿ ಕಂಪನಿಗಳೊಂದಿಗೆ ಸಹಭಾಗಿತ್ವ ಹೊಂದುವ ಮುಂದಾಲೋಚನೆಯು ನಮ್ಮ ನಗರಪಾಲಿಕೆ, ಪಂಚಾಯಿತಿಗಳ ಆಡಳಿತಾಧಿಕಾರಿಗಳು ತೋರಬೇಕಿದೆ.

ಬಹಿರ್ದೆಸೆಗೆ ಊರಿನ ರಸ್ತೆಬದಿಗಳಲ್ಲಿ ಬಹಿರಂಗವಾಗಿ ಹೋಗುತ್ತಿದ್ದ ಪರಿಸ್ಥಿತಿಯು ಬದಲಾಗಿ, 12 ಕೋಟಿ ಪಾಯಖಾನೆಗಳನ್ನು ಗ್ರಾಮೀಣ ಸ್ವಚ್ಛ ಭಾರತ ಅಭಿಯಾನದಡಿ, ಇಂದು ಪ್ರತಿ ಮನೆಯಲ್ಲೂ ಶೌಚಾಲಯಗಳನ್ನು ಹೊಂದುವಂತಾಗಿದೆ. ಹೀಗೆ ನಮ್ಮ ಶುದ್ಧಿಯ ಜತೆಗೆ ನಮ್ಮ ಮನೆಯ ಅಕ್ಕಪಕ್ಕ, ನಮ್ಮ ಊರಿನ, ನಮ್ಮ ರಾಜ್ಯದ ಹಾದಿಬೀದಿಗಳೂ ಶುದ್ಧವಾಗಿರಬೇಕಲ್ಲವೇ.!? ಒಂದು ಸಮುದಾಯ, ಒಂದು ಊರು ಶುದ್ಧ ಮತ್ತು ಸುಶಿಕ್ಷಿತವಾಗಿದ್ದರೆ, ದೇಶಕ್ಕೆ ಉತ್ತಮ ಮಾದರಿ ಹಾಕಿಕೊಡಬಲ್ಲದು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 185

# ಸಭಾಧ್ಯಕ್ಷರ ಆಯ್ಕೆ ಸಲೀಸು

## ಸ್ಪೀಕರ್ ಪರ ಪ್ರಧಾನಿ, ಪ್ರತಿಪಕ್ಷ ನಾಯಕರ ಅಭಿನಂದನಾ ಭಾಷಣ

18ನೇ ಲೋಕಸಭೆ ಸಭಾಧ್ಯಕ್ಷರಾಗಿ ಧ್ವನಿಮತದಿಂದ ಆಯ್ಕೆಯಾದ ಓಂ ಬಿರ್ಲಾ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ಸದನ ಅಭಿನಂದನೆ ಸಲ್ಲಿಸಿದೆ. 5 ದಶಕಗಳ ಬಳಿಕ ಲೋಕಸಭೆ ಸ್ಪೀಕರ್ ಆಯ್ಕೆಗೆ ಬುಧವಾರ ಚುನಾವಣೆ ನಡೆದಿದ್ದು, ಓಂ ಬಿರ್ಲಾ ಅವರು ಸಭಾಧ್ಯಕ್ಷರಾಗಿ ಸತತ ಎರಡನೇ ಬಾರಿಗೆ ಹುದ್ದೆ ಅಲಂಕರಿಸಿದ್ದಾರೆ. ಅಮೃತಕಾಲದಲ್ಲಿ ಎರಡನೇ ಬಾರಿಗೆ ಸ್ಪೀಕರ್ ಹುದ್ದೆ ಸ್ವೀಕರಿಸುವುದು ದೊಡ್ಡ ಜವಾಬ್ದಾರಿ ಎಂದು ಮೋದಿ ಬಣ್ಣಿಸಿದರು. ಸದನ ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದು ಪ್ರತಿಪಕ್ಷಗಳು ಬಯಸುತ್ತವೆ ಎಂದು ರಾಹುಲ್ ಆಶಯ ವ್ಯಕ್ತಪಡಿಸಿದರು.

### ಉತ್ತಮ ಮಾರ್ಗದರ್ಶನದ ನಿರೀಕ್ಷೆ

ಲೋಕಸಭೆ ಅಧ್ಯಕ್ಷರಾಗಿ ಹಿರಿಯ ಸಂಸದ ಓಂ ಬಿರ್ಲಾ ಅವರು ಆಯ್ಕೆಯಾದ ನಂತರ ಸದನದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಭಾರತ ಸ್ವಾತಂತ್ರ್ಯ ಅಮೃತಕಾಲದಲ್ಲಿ ಮಹತ್ವದ ಹುದ್ದೆಗೆ ನೀವು 2ನೇ ಬಾರಿಗೆ ಆಯ್ಕೆ ಆಗಿರುವುದಕ್ಕೆ ಸದನದ ಪರವಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಇದು ಬಹು ದೊಡ್ಡ ಜವಾಬ್ದಾರಿಯಾಗಿದೆ. ನಿಮ್ಮ ಅನುಭವದೊಂದಿಗೆ ಮುಂದಿನ 5 ವರ್ಷಗಳವರೆಗೆ ನೀವು ನಮಗೆ ಮಾರ್ಗದರ್ಶನ ನೀಡುತ್ತೀರಿ ಎಂದು ಭಾವಿಸುತ್ತೇವೆ ಎಂದರು.

ಇಂದು ನಿಮ್ಮ ಮುಖದ ಈ ಸಿಹಿ ನಗು ಇಡೀ ಸದನವನ್ನು ಸಂತೋಷವಾಗಿ ಇರಿಸುತ್ತದೆ ಎಂದು ಭಾವಿಸುತ್ತೇನೆ. ಎರಡನೇ ಅವಧಿಗೆ ಸ್ಪೀಕರ್ ಆಗಿ ಕಾರ್ಯನಿರ್ವಹಿಸುವ ಅವಕಾಶ ಈ ಹಿಂದೆ ಬಲರಾಮ್ ಜಾಖಡ್ ಅವರಿಗೆ ಸಿಕ್ಕಿತ್ತು. ನಂತರ ನಿಮಗೆ ಈ ಅವಕಾಶ ಸಿಕ್ಕಿದೆ. ಈ ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸುತ್ತೀರಿ ಎಂದು ಭಾವಿಸುತ್ತೇನೆ ಎಂದರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರದ 6 ದಶಕಗಳಲ್ಲಿ ಆಗದ ಕೆಲಸಗಳು ನಿಮ್ಮ ಅಧ್ಯಕ್ಷತೆಯಲ್ಲಿ ಈ ಸದನದಿಂದ ಸಾಧ್ಯವಾಗಿವೆ. ಪ್ರಜಾಪ್ರಭುತ್ವದ ಸುದೀರ್ಘ ಪಯಣದಲ್ಲಿ ಹಲವು ಮೈಲುಗಲ್ಲು ಬರುತ್ತವೆ. 17ನೇ ಲೋಕಸಭೆಯ ಸಾಧನೆಗಳ ಬಗ್ಗೆ ದೇಶ ಹೆಮ್ಮೆಪಡುತ್ತದೆ ಎಂಬ ವಿಶ್ವಾಸವಿದೆ ಎಂದರು.

ಹಿಂದಿನ ಲೋಕಸಭೆಯಲ್ಲಿ ಶೇ. 97ರಷ್ಟು ಫಲಪ್ರದ ಚರ್ಚೆ, ಸಂವಾದ ನಡೆದಿದ್ದವು. ಈ ಬಾರಿಯೂ ನಿಮ್ಮ ಅಧ್ಯಕ್ಷತೆಯಲ್ಲಿ ದೇಶದ ಜನರ ಆಶೋತ್ತರಗಳನ್ನು ಈಡೇರಿಸುತ್ತದೆ ಎಂದು ಭಾವಿಸುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

### ನಮ್ಮ ಧ್ವನಿಗೆ ಅವಕಾಶ ನೀಡಿ: ರಾಹುಲ್ ಗಾಂಧಿ

ಲೋಕಸಭೆಯ ಸದನದಲ್ಲಿ ಜನರ ಪರವಾಗಿ ಧ್ವನಿ ಎತ್ತಲು ಪ್ರತಿಪಕ್ಷಗಳಿಗೂ ಅವಕಾಶ ಸಿಗುತ್ತದೆ ಎಂಬ ಆಶಯವನ್ನು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಬುಧವಾರ ವ್ಯಕ್ತಪಡಿಸಿದ್ದಾರೆ.

ಎರಡನೇ ಅವಧಿಗೆ ಲೋಕಸಭೆಯ ಸ್ಪೀಕರ್ ಆಗಿ ಆಯ್ಕೆಯಾದ ಓಂ ಬಿರ್ಲಾ ಅವರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದ ರಾಹುಲ್, ನಿಮ್ಮ ಗೆಲುವುಗಾಗಿ ಇಂಡಿಯ ಒಕ್ಕೂಟ ಪರವಾಗಿ ಅಭಿನಂದಿಸುತ್ತೇನೆ ಎಂದರು. ಸದನವನ್ನು ಎಷ್ಟು ಸಮರ್ಥವಾಗಿ ನಡೆಸಲಾಗುತ್ತಿದೆ ಎಂಬುದು ಪ್ರಶ್ನೆಯಲ್ಲ, ಸದನದಲ್ಲಿ ಭಾರತದ ಜನರ ಧ್ವನಿಯನ್ನು ಎಷ್ಟರ ಮಟ್ಟಿಗೆ ಕೇಳಲು ಅನುಮತಿ ನೀಡಲಾಗುತ್ತದೆ ಎಂಬುದೇ ಸದ್ಯದ ಪ್ರಶ್ನೆಯಾಗಿದೆ. ವಿರೋಧ ಧ್ವನಿಯನ್ನು ಅಡಗಿಸುವ ಮೂಲಕ ಸದನವನ್ನು ಸಮರ್ಥವಾಗಿ ನಡೆಸಬಹುದು ಎಂಬ ಕಲ್ಪನೆಯು ಪ್ರಜಾಸತ್ತಾತ್ಮಕವಲ್ಲ ಎಂದರು.

ಸದನ ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದು ಪ್ರತಿಪಕ್ಷಗಳು ಬಯಸುತ್ತವೆ. ನಿಮ್ಮ ಕೆಲಸದಲ್ಲಿ ಸಹಾಯ ಮಾಡಲು ಪ್ರತಿಪಕ್ಷಗಳು ಬಯಸುತ್ತವೆ ಎಂದು ನುಡಿದರು.

ಈ ಸದನ ಭಾರತದ ಜನರ ಧ್ವನಿಯನ್ನು ಪ್ರತಿನಿಧಿಸುತ್ತದೆ. ಪ್ರತಿಪಕ್ಷಗಳು ಜನರ ಧ್ವನಿಯನ್ನು ಪ್ರತಿನಿಧಿಸುತ್ತವೆ. ಸದನದಲ್ಲಿ ಮಾತನಾಡಲು ಪ್ರತಿಪಕ್ಷಗಳ ಸದಸ್ಯರಿಗೂ ನೀವು ಅವಕಾಶ ನೀಡುತ್ತೀರಿ ಎಂಬ ವಿಶ್ವಾಸವಿದೆ. ಕಳೆದ ಬಾರಿಗಿಂತ ಈ ಬಾರಿ ಪ್ರತಿಪಕ್ಷಗಳು ಭಾರತೀಯರ ಧ್ವನಿಯನ್ನು ಗಮನಾರ್ಹವಾಗಿ ಪ್ರತಿನಿಧಿಸುತ್ತವೆ. ಸದನದಲ್ಲಿ ವಿರೋಧದ ಧ್ವನಿಯನ್ನು ಪ್ರತಿನಿಧಿಸಲು ಅವಕಾಶ ನೀಡುವುದು ಬಹಳ ಮುಖ್ಯ ಎಂದು ಗಮನ ಸೆಳೆದರು.

ದೇಶದ ಸಂವಿಧಾನವನ್ನು ಪ್ರತಿಪಕ್ಷಗಳು ರಕ್ಷಿಸಬೇಕೆಂದು ಜನರು ನಿರೀಕ್ಷಿಸುತ್ತಾರೆ ಎಂಬುದನ್ನು ಈ ಚುನಾವಣೆಯು ತೋರಿಸಿದೆ. ಪ್ರತಿಪಕ್ಷಗಳಿಗೆ ಮಾತನಾಡಲು ಅವಕಾಶ ನೀಡುವ ಮೂಲಕ ನೀವು ಭಾರತದ ಸಂವಿಧಾನವನ್ನು ರಕ್ಷಿಸುವ ನಿಮ್ಮ ಕರ್ತವ್ಯವನ್ನು ಮಾಡುತ್ತೀರಿ ಎಂದು ನಂಬುತ್ತೇನೆ ಎಂದು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದರು.

# ಬಾಲಕನ ಮೇಲೆ ದೌರ್ಜನ್ಯ ಆರೋಪ ಮೂವರ ಬಂಧನ

## ಬಿಹಾರದ ಮುಜಾಫರ್ ಜಿಲ್ಲೆಯಲ್ಲಿ ಘಟನೆ

**ಪಟನಾ:** ಬಿಹಾರದ ಮುಜಾಫರ್ ಜಿಲ್ಲೆಯ ಮೋತಿಪುರದ ಬತರೌನ್ ಗ್ರಾಮದಲ್ಲಿ 15 ವರ್ಷದ ಹಿಂದೂ ಬಾಲಕನನ್ನು ಕೋಣೆಯಲ್ಲಿ ಕೂಡಿ ಹಾಕಿ ಮುಸ್ಲಿಂ ಯುವಕರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದ್ದು ಘಟನೆ ಸಂಬಂಧ ಮೂವರನ್ನು ಬಂಧಿಸಲಾಗಿದೆ.

**ವಿಡಿಯೋ ನೋಡಿದ ಬಳಿಕ ಗ್ರಾಮದಲ್ಲಿ ಉದ್ವಿಗ್ನತೆ**

ಬಾಲಕನಿಗೆ 'ಮಿಯಾನ್ ಸಾಹೇಬ್ ಜಿಂದಾಬಾದ್' ಮತ್ತು 'ಅಲ್ಲಾ-ಹು-ಅಕ್ಬರ್' ಎಂದು ಕೂಗುವಂತೆ ಬಲವಂತ ಮಾಡಿ ಹೊಡೆಯುತ್ತಿರುವುದು, ಎಂಜಲನ್ನು ನೆಕ್ಕಲು ಒತ್ತಾಯಿಸುವುದು ವಿಡಿಯೊದಲ್ಲಿದೆ ಈ ವಿಡಿಯೊ ವೈರಲ್ ಆಗಿದೆ.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೊಹಮ್ಮದ್ ಮುನ್ನಾ ಮತ್ತು ಸಾಹಿಲ್ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಬಾಲಕನನ್ನು ಕೋಣೆಯಲ್ಲಿ ಕೂಡಿ ಹಾಕಿದ್ದು, ಒಬ್ಬ ಕೋಲಿನಿಂದ ಥಳಿಸುತ್ತಾನೆ. ಬಾಲಕನಿಗೆ ಪದೇ ಪದೇ ಕಪಾಳಮೋಕ್ಷ ಮಾಡುತ್ತಾನೆ. ಮತ್ತೊಬ್ಬ ಅಲ್ಲಾಹು ಅಕ್ಬರ್ ಎಂದು ಘೋಷಣೆ ಕೂಗುವಂತೆ ಒತ್ತಾಯಿಸುತ್ತಾನೆ. ತೀವ್ರ ಹಲ್ಲೆಯಿಂದ ಹುಡುಗನ ಕೈ ಮುರಿದಿದೆ ಎಂದು ವರದಿಯಾಗಿದೆ.

ವಿಡಿಯೋ ನೋಡಿದ ಬಳಿಕ ಗ್ರಾಮದಲ್ಲಿ ಉದ್ವಿಗ್ನತೆ ಉಂಟಾಗಿದೆ.

ಕಾನೂನು ಸುವ್ಯವಸ್ಥೆ ಕಾಪಾಡಲು ಸೆಕ್ಷನ್ 144 ಜಾರಿಗೊಳಿಸಲಾಗಿದೆ.

ಬಾಲಕನ ತಂದೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ ಎಂದು ಮೋತಿಪುರ ಪೊಲೀಸ್ ಠಾಣೆ ಪ್ರಭಾರಿ ರಾಜನ್ ಕುಮಾರ್ ಖಚಿತಪಡಿಸಿದ್ದಾರೆ.

**ಶಾಂತಿ ಕಾಪಾಡುವಂತೆ ಪೊಲೀಸ್ ಮನವಿ:** ಘಟನೆಯಿಂದ ಗ್ರಾಮದಲ್ಲಿ ಆತಂಕ ಸೃಷ್ಟಿಯಾಗಿದ್ದು, ಆರೋಪಿಗಳ ವಿಚಾರಣೆ ನಡೆಯುತ್ತಿದೆ. ಯಾರೂ ಕೂಡ ಗಲಭೆ, ಅಶಾಂತಿ ಸೃಷ್ಟಿಸಬೇಡಿ ಶಾಂತಿ ಕಾಪಾಡಿ ಎಂದು ಪೊಲೀಸರು ಗ್ರಾಮಸ್ಥರಲ್ಲಿ ಮನವಿ ಮಾಡಿದ್ದಾರೆ.

## ಸಮಾಚಾರ ಸಣ್ಣದಲ್ಲ

### 29ರಿಂದ ಅಮರನಾಥ ಯಾತ್ರೆ: ಕಾಶ್ಮೀರ ಕಟ್ಟೆಚ್ಚರ

**ಶ್ರೀನಗರ:** ಪವಿತ್ರ ಅಮರನಾಥ ಯಾತ್ರೆ ಇದೇ 29ರಿಂದ ಆರಂಭವಾಗುತ್ತಿದ್ದು ಜಮ್ಮು-ಕಾಶ್ಮೀರದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ, ಭದ್ರತಾ ವ್ಯವಸ್ಥೆ ಹೆಚ್ಚಿಸಲಾಗಿದೆ. ಅಮರನಾಥ ಬೇಸ್‌ಕ್ಯಾಂಪ್‌ಗೂ 3 ಹಂತದ ಭದ್ರತೆ ಒದಗಿಸಲಾಗಿದೆ. ಜಮ್ಮುವಿನ ಭಗವತಿ ನಗರ ಯಾತ್ರಾರ್ಥಿಗಳ ಬೇಸ್‌ಕ್ಯಾಂಪ್ ಆಗಿದೆ. ಅಲ್ಲಿಯೂ ಭದ್ರತೆ ಹೆಚ್ಚಿಸಲಾಗಿದ್ದು, ಯಾತ್ರಾರ್ಥಿಗಳ ಸುರಕ್ಷತೆಗಾಗಿ ಕ್ಷಿಪ್ರ ಕಾರ್ಯಾಚರಣೆ ತಂಡ ರಚಿಸಲಾಗಿದೆ. ಯಾತ್ರೆ ಸಾಗುವ ಹೆದ್ದಾರಿಯ ಸುರಕ್ಷತೆ ಖಾತರಿಗಾಗಿ ವಾಹನಗಳನ್ನು ಪರಿಶೀಲಿಸಲು 60 ಕ್ಯಾಮೆರಾಗಳು, ಬಾಡಿ ಸ್ಕ್ಯಾನರ್‌ಗಳನ್ನು ಅಳವಡಿಸಲಾಗಿದೆ. ರಂಭಾನ್ ಜಿಲ್ಲೆಯ ಉಧಂಪುರದಿಂದ ಬನಿಹಾಲ್ ಮಾರ್ಗದವರೆಗೆ 360 ಡಿಗ್ರಿಯ 10 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ, ದಿನದ 24 ಗಂಟೆ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ 360 ಡಿಗ್ರಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

### ದೆಹಲಿ ಸಿಎಂ ಕೇಜ್ರಿ ಮತ್ತೆ ಸಿಬಿಐ ವಶಕ್ಕೆ

**ದೆಹಲಿ:** ದೆಹಲಿ ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿ ದೆಹಲಿಯ ತಿಹಾರ್ ಜೈಲಿನಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ರನ್ನು ಮಂಗಳವಾರ ರಾತ್ರಿ ವಶಕ್ಕೆ ತೆಗೆದುಕೊಂಡ ಸಿಬಿಐ ಅಧಿಕಾರಿಗಳು ವಿಚಾರಣೆ ಬಳಿಕ ಬಂಧಿಸಿದ್ದಾರೆ. ನಂತರ ರೋಸ್ ಅವೇನ್ಯೂ ಕೋರ್ಟ್‌ಗೆ ಹಾಜರುಪಡಿಸಿದ್ದಾರೆ. ಮೂರು ದಿನಗಳ ಕಾಲ ಕೇಜ್ರಿವಾಲ್ ಅವರನ್ನು ಸಿಬಿಐ ಕಸ್ಟಡಿಗೆ ನೀಡಲಾಗಿದೆ.

**ಆಪ್ ಆಕ್ರೋಶ:** ಅರವಿಂದ್ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್‌ನಿಂದ ಜಾಮೀನು ಪಡೆಯುವ ಸಾಧ್ಯತೆ ಇರುವ ಸಂದರ್ಭದಲ್ಲೇ ಕೇಂದ್ರ ಸರಕಾರ ಪಿತೂರಿ ನಡೆಸಿ ಮತ್ತೆ ಸಿಬಿಐ ಮೂಲಕ ಬಂಧಿಸಿದೆ ಎಂದು ಎಎಪಿ ಸಂಸದ ಸಂಜಯ್ ಸಿಂಗ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಕರ್ನಾಟಕದಲ್ಲೂ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ

**ದೆಹಲಿ:** ಕರ್ನಾಟಕ ದಲ್ಲಿ ಕೂಡಾ ನೀಟ್ ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು. ದೇಶದ 700 ಅಭ್ಯರ್ಥಿಗಳಿಗೆ 2024ರ ನೀಟ್ ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಪ್ರಶ್ನೆಪತ್ರಿಕೆ ಸೋರಿಕೆ ಜಾಲದ ಸದಸ್ಯ ಎನ್ನಲಾದ ಬಿಜೇಂದ್ರ ಗುಪ್ತಾ ಮಾಧ್ಯಮ ಕುಟುಕು ಕಾರ್ಯಾಚರಣೆ ವೇಳೆ ಮಾಹಿತಿ ನೀಡಿದ್ದಾನೆ. ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ ಸಂಜೀವ್ ಮುಖೀಯ 200 ಕೋಟಿ ರು. ಸಂಪಾದಿಸಲು ಬಿಹಾರ, ಕರ್ನಾಟಕ, ಮಧ್ಯಪ್ರದೇಶ ಸೇರಿ ದೇಶ ವಿವಿಧ ರಾಜ್ಯಗಳ 700 ವಿದ್ಯಾರ್ಥಿಗಳಿಗೆ ಪಶ್ನೆಪತ್ರಿಕೆ ಹಂಚಿದ್ದಾನೆ. ಪ್ರತಿ ಪ್ರಶ್ನೆ ಪತ್ರಿಕೆಗೆ 40 ಲಕ್ಷ ರು. ವಸೂಲಿ ಮಾಡಿದ್ದಾನೆ. ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆ ಸಾಗಿಸುವ ಹಂತದಲ್ಲೇ ಸೋರಿಕೆಯಾಗುತ್ತಿದೆ ಎಂದೂ ಇಡೀ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿದ್ದಾನೆ.

### ಈಶ್ವರನ ಹೆಸರಲ್ಲಿ ಪಠಾಣ್ ಪ್ರಮಾಣ!

**ದೆಹಲಿ:** ಭಾರತ ತಂಡದ ಮಾಜಿ ಕ್ರಿಕೆಟಿಗ, ತೃಣಮೂಲ ಕಾಂಗ್ರೆಸ್ ನೂತನ ಸಂಸದ ಯೂಸುಫ್ ಪಠಾಣ್ ಈಶ್ವರ ಭಗವಾನ್ ಹೆಸರಲ್ಲಿ ಸಂಸತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದರು. ಕಡು ನೀಲಿ ವರ್ಣದ ನಿಲುವಂಗಿ ಧರಿಸಿದ್ದ ಯೂಸುಫ್ ಪಠಾಣ್ ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿ, 'ಜೈ ಹಿಂದ್, ಜೈ ಬಾಂಗ್ಲಾ ಮತ್ತು ಜೈ ಗುಜರಾತ್' ಎಂದು ಘೋಷಣೆ ಮೊಳಗಿಸಿದರು. ನಂತರ ಸ್ಪೀಕರ್ ಭರ್ತೃಹರಿ ಮಹತಾಬ್ ಅವರಿಗೆ ಹಸ್ತಲಾಘವ ಮಾಡಿದರು. ಲೋಕಸಭೆ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಬಹರಂಪುರ್ ಕ್ಷೇತ್ರದಲ್ಲಿ ಗೆದ್ದಿರುವ ಪಠಾಣ್ ಅವರದು ಭಾರತದ ರಾಜಕೀಯದಲ್ಲಿ ಮೊದಲ ಅವಧಿ. ಟಿಎಂಸಿ ಟಿಕೆಟ್‌ನಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದ ಪಠಾಣ್, 25 ವರ್ಷಗಳಲ್ಲಿ ಸೋಲು ಕಂಡಿರದ ಹಿರಿಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಸೋಲಿಸಿದ್ದರು.

{ ಸುನಿತಾ ಕೇಜ್ರಿವಾಲ್ } ದೆಹಲಿ ಸಿಎಂ ಪತ್ನಿ

**ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಜೈಲಿನಿಂದ ಹೊರಬರದಂತೆ ನೋಡಿಕೊಳ್ಳಲು ಇಡೀ ವ್ಯವಸ್ಥೆ ಬಹಳ ಪ್ರಯತ್ನಿಸುತ್ತಿದೆ. ಇದು ಸರ್ವಾಧಿಕಾರ ಮತ್ತು ತುರ್ತು ಪರಿಸ್ಥಿತಿಗೆ ಸಮಾನ. ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್‌ನಿಂದ ಜಾಮೀನು ಸಿಗುವ ಸಾಧ್ಯತೆ ಇರುವುದರಿಂದ ಗಾಬರಿಗೊಂಡ ಬಿಜೆಪಿ ಈಗ ಸಿಬಿಐನಿಂದ ನಕಲಿ ಪ್ರಕರಣ ದಲ್ಲಿ ಅವರನ್ನು ಬಂಧಿಸಿದೆ.**

# ಕೊನೆಗೂ ಮನೆ ಸೇರಿದ ಜೂಲಿಯನ್ ಅಸ್ಸಾಂಜೆ

**ಲಂಡನ್:** ಬೇಹುಗಾರಿಕೆ ಅಪರಾಧದಲ್ಲಿ ಜೈಲು ಪಾಲಾಗಿದ್ದ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಕೊನೆಗೂ ಸ್ವದೇಶ ಸೇರಿದ್ದಾರೆ. ತಪ್ಪೊಪ್ಪಿಗೆ ಸಲ್ಲಿಸಿದ ಬಳಿಕ ಅಸ್ಸಾಂಜೆಗೆ ಬಿಡುಗಡೆ ಸಿಕ್ಕಿದ್ದು, ಗಡಿಪಾರು ಕ್ರಮದ ವಿರುದ್ಧ ದಶಕಗಳ ಕಾಲ ಹೋರಾಟ ನಡೆಸಿ ಅಂತೂ ಸ್ವದೇಶ ಆಸ್ಟ್ರೇಲಿಯಕ್ಕೆ ಮರಳಿದ್ದಾರೆ.

ಅಮೆರಿಕ ರಾಷ್ಟ್ರೀಯ ರಕ್ಷಣಾ ಮಾಹಿತಿ ಪಡೆಯಲು ಹಾಗೂ ಬಹಿರಂಗ ಪಡಿಸಲು ಪಿತೂರಿ ನಡೆಸಿದ ಆರೋಪ ಜೂಲಿಯನ್ ಮೇಲಿತ್ತು. ಈ ಪ್ರಕರಣದಲ್ಲಿ 62 ತಿಂಗಳ ಶಿಕ್ಷೆ ಕೂಡ ವಿಧಿಸಲಾಗಿತ್ತು. ಈಕ್ವೆಡರ್ ರಾಯಭಾರಿ ಕಚೇರಿಯ ಆಶ್ರಯ ಪಡೆದಿದ್ದ ಅಸ್ಸಾಂಜೆಯನ್ನು ಬಂಧಿಸಿ ಲಂಡನ್‌ನ ಬೆಲ್ ಮಾರ್ಷ್ ಜೈಲಿನಲ್ಲಿ ಇರಿಸಲಾಗಿತ್ತು. 2019ರಿಂದಲೂ ಬ್ರಿಟನ್ ಜೈಲಿನಲ್ಲಿದ್ದ ಅಸ್ಸಾಂಜೆ ಆಸ್ಟ್ರೇಲಿಯಕ್ಕೆ ಮರಳಲು ಬಹಳ ಕಾನೂನು ಹೋರಾಟ ನಡೆಸಿದ್ದರು. ಫೆಸಿಫಿಕ್ ಸಾಗರದಲ್ಲಿನ ಉತ್ತರ ಮರಿಯಾನ ದ್ವೀಪದ ನ್ಯಾಯಾಲಯದ ವಿಚಾರಣೆಯಲ್ಲಿ ಅಸ್ಸಾಂಜೆ, ಆರೋಪವನ್ನು ಒಪ್ಪಿಕೊಂಡಿದ್ದಾರೆ. ಈಗಾಗಲೇ ಬ್ರಿಟನ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದ ಕಾರಣ ನ್ಯಾಯಾಲಯ ಕೂಡಾ ಅಸ್ಸಾಂಜೆ ತಪ್ಪೊಪ್ಪಿಗೆ ಪರಿಗಣಿಸಿ ಬಿಡುಗಡೆ ಮಾಡಿದೆ.

**ಬೇಹುಗಾರಿಕೆ ಆರೋಪಕ್ಕೆ ಜೈಲು ಸೇರಿದ್ದ ವಿಕಿಲೀಕ್ಸ್ ಸಂಸ್ಥಾಪಕ**

**ಏನಿದು ಪ್ರಕರಣ?:** ಜೂಲಿಯನ್ ಅಸ್ಸಾಂಜೆ ವಿಕಿಲೀಕ್ಸ್ ಎಂಬ ವೆಬ್‌ಸೈಟ್ ನಡೆಸುತ್ತಿದ್ದು, ಇದರಲ್ಲಿ ಯುದ್ಧ, ಬೇಹುಗಾರಿಕೆ ಮತ್ತು ಭ್ರಷ್ಟಾಚಾರ ಸಂಬಂಧ ಹಲವು ವಿಷಯಗಳನ್ನು ಪ್ರಕಟಿಸಲಾಗುತ್ತದೆ. 2010ರಲ್ಲಿ ಇರಾಕ್ ರಾಜಧಾನಿ ಬಾಗ್ದಾದ್ ನಲ್ಲಿ ನಾಗರಿಕರನ್ನು ಅಮೆರಿಕ ಸೇನಾ ಹೆಲಿಕಾಪ್ಟರ್ ಮೂಲಕ ಕೊಲ್ಲುತ್ತಿರುವ ವಿಡಿಯೋವನ್ನು ವಿಕಿಲೀಕ್ಸ್ ಪ್ರಕಟಿಸಿತ್ತು. ಜತೆಗೆ ರಾಜತಾಂತ್ರಿಕ ವ್ಯವಹಾರ ಹಾಗೂ ಯುದ್ಧ ಚಟುವಟಿಕೆಗೆ ಸಂಬಂಧಿಸಿ 7 ಲಕ್ಷಕ್ಕೂ ಅಧಿಕ ದಾಖಲೆಗಳನ್ನು ಬಿಡುಗಡೆ ಮಾಡಿತ್ತು ಎಂದು ಹೇಳಲಾಗಿದೆ. ಅಮೆರಿಕ ಮಾಜಿ ಬೇಹುಗಾರಿಕೆ ವಿಶ್ಲೇಷಕ ನೀಡಿದ ಕೆಲವು ಗೌಪ್ಯ ಮಾಹಿತಿಗಳನ್ನೂ ವಿಕಿಲೀಕ್ಸ್ ಪ್ರಕಟಿಸಿತ್ತು. ಈ ವಿಚಾರ ಭಾರಿ ಚರ್ಚೆಗೆ ಗುರಿಯಾಗಿದ್ದು ಅಸ್ಸಾಂಜೆ ಮೇಲೆ ಅಮೆರಿಕ ಸೇನಾಪಡೆಯ ಮಾಹಿತಿ ಕಳವು ಹಾಗೂ ಪಿತೂರಿ ಆರೋಪವನ್ನು ಅಮೆರಿಕ ಸರಕಾರ ಹೊರಿಸಿತ್ತು. ಒಂದು ಮಾಹಿತಿ ಸೋರಿಕೆ ಯೋಧರ ಜೀವಕ್ಕೆ ಕಂಟಕವಾಯಿತು ಎಂದು ಅಮೆರಿಕ ಹೇಳಿತ್ತು. ಅಮೆರಿಕಕ್ಕೆ ಕರೆತಂದು ವಿಚಾರಣೆ ಕೈಗೊಳ್ಳಲು ಸಾಕಷ್ಟು ಪ್ರಯತ್ನ ನಡೆದಿತ್ತಾದರೂ 14 ವರ್ಷಗಳ ಕಾಲ ಅಸ್ಸಾಂಜೆ ಇದರ ವಿರುದ್ಧ ಕಾನೂನು ಹೋರಾಟ ಮಾಡಿದ್ದರು. ಆದರೆ 2019ರಲ್ಲಿ ಅವರನ್ನು ಬಂಧಿಸಿ ಬಿಗಿ ಭದ್ರತೆಯ ಬೆಲ್ ಮಾರ್ಷ್‌ಲ್ ಜೈಲಿನಲ್ಲಿ ಇರಿಸಲಾಗಿತ್ತು. ಅವರ ವಿಚಾರಣೆಯನ್ನು ದ್ವೀಪ ಪ್ರದೇಶದ ಕೋರ್ಟ್‌ನಲ್ಲಿ ನಡೆಸಲಾಗುತ್ತಿತ್ತು. 2022ರಲ್ಲಿ ಬ್ರಿಟನ್ ಸರಕಾರ ಅಸ್ಸಾಂಜೆ ಗಡಿಪಾರಿಗೆ ಒಪ್ಪಿತ್ತು.

2006ರಲ್ಲಿ ಆರಂಭವಾದ ವಿಕಿಲೀಕ್ಸ್ ಸಂಸ್ಥೆ ಅಸ್ಸಾಂಜೆ ಅವರಿಗೆ ಸಾಕಷ್ಟು ಖ್ಯಾತಿ ತಂದುಕೊಟ್ಟಿತ್ತು. ಸ್ವತಂತ್ರ ಪತ್ರಿಕೋದ್ಯಮದ ಚಾಂಪಿಯನ್ ಎಂಬ ಬಿರುದನ್ನೂ ನೀಡಿತ್ತು.

# ತುರ್ತು ಪರಿಸ್ಥಿತಿ ಪ್ರಸ್ತಾಪ-ಸದನದಲ್ಲಿ ಕೋಲಾಹಲ

## ಸ್ಪೀಕರ್ ಬಿರ್ಲಾ ಪ್ರಸ್ತಾಪ ಬೆಂಬಲಿಸಿದ ಪ್ರಧಾನಿ ಮೋದಿ | ಪ್ರತಿಪಕ್ಷ ಸದಸ್ಯರಿಂದ ಸರಕಾರದ ವಿರುದ್ಧ ಘೋಷಣೆ

**ದೆಹಲಿ:** ಲೋಕಸಭೆ ಸಭಾಧ್ಯಕ್ಷರಾಗಿ ಓಂ ಬಿರ್ಲಾ ಅವರು ಸತತ 2ನೇ ಬಾರಿಗೆ ಆಯ್ಕೆಯಾದ ಬಳಿಕ ಸದನ ಕಲಾಪ ಆರಂಭಗೊಂಡಾಗ ತುರ್ತು ಪರಿಸ್ಥಿತಿ ವಿಚಾರ ಪ್ರಸ್ತಾಪವಾಗಿ ಸದನದಲ್ಲಿ ಗದ್ದಲ ಉಂಟಾಯಿತು.

ಸದನ ಉದ್ದೇಶಿಸಿ ಮಾತನಾಡಿದ ನೂತನ ಸಭಾಧ್ಯಕ್ಷರು ಲೋಕಸಭೆಯ ಎಲ್ಲಾ ಸದ್ಯಸರು ದೇಶದ ಏಳಿಗೆಗಾಗಿ ಕಾರ್ಯನಿರ್ವಹಿಸಬೇಕು ಎಂದರು. ಜತೆಗೆ ಸಂಸತ್‌ನ ಘನತೆ ಕಾಪಾಡಿಕೊಳ್ಳುವಂತೆ ಸೂಚಿಸಿದರು. ಸದನದೊಳಗಿನ ಪ್ರತಿಭಟನೆಗೂ ಬೀದಿಯಲ್ಲಿ ನಡೆಯುವ ಪ್ರತಿಭಟನೆಗೂ ವ್ಯತ್ಯಾಸ ಇರಲಿ ಎಂದರು.

ಹಾಗೇ ತುರ್ತು ಪರಿಸ್ಥಿತಿ ಘೋಷಣೆಯಾದ ದಿನಕ್ಕೆ 50 ವರ್ಷ ತುಂಬಿದ ಹಿನ್ನೆಲೆ 2 ನಿಮಿಷ ಮೌನಾಚರಣೆಗೆ ಸೂಚಿಸಿದ್ದು, ಪ್ರತಿಪಕ್ಷಗಳಿಂದ ಭಾರಿ ವಿರೋಧ ವ್ಯಕ್ತವಾಯಿತು. ಪ್ರತಿಪಕ್ಷ ಸದಸ್ಯರು ಸರಕಾರದ ವಿರುದ್ಧ ಘೋಷಣೆ ಕೂಗಿ ಗದ್ದಲ ಎಬ್ಬಿಸಿದರು.

ಸಂಸತ್ ಸಭೆ 1975ರ ತುರ್ತು ಪರಿಸ್ಥಿತಿ ಘೋಷಣೆಯ ನಿರ್ಧಾರವನ್ನು ಖಂಡಿಸುತ್ತದೆ. ತುರ್ತು ಪರಿಸ್ಥಿತಿ ವಿರುದ್ಧ ಹೋರಾಡಿ, ಕಷ್ಟಗಳನ್ನು ಎದುರಿಸಿ ಪ್ರಜಾಪ್ರಭುತ್ವ ರಕ್ಷಿಸಿದ ಎಲ್ಲಾ ವೀರ ನಾಯಕರನ್ನು ಅಭಿನಂದಿಸುತ್ತದೆ. ಕಾಂಗ್ರೆಸ್ ಸರಕಾರ ಎಲ್ಲಾ ಅಧಿಕಾರಗಳನ್ನು ಒಬ್ಬ ವ್ಯಕ್ತಿಗೆ ನೀಡಿ ನ್ಯಾಯಾಂಗವನ್ನು ನಿಯಂತ್ರಿಸುವ ಹಾಗೂ ಸಂವಿಧಾನದ ಮೂಲ ತತ್ವಗಳನ್ನು ಹೊಸಕಿ ಹಾಕುವ ಪ್ರಯತ್ನ ನಡೆಸಿತ್ತು. ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರ ಹೇಳಿಕೆಗಳು ಪ್ರಜಾಪ್ರಭುತ್ವವಿರೋಧಿ ಧೋರಣೆಗೆ ಉದಾಹರಣೆಯಾಗಿವೆ. ತುರ್ತು ಪರಿಸ್ಥಿತಿಯು ಸಮಾಜ ವಿರೋಧಿ ಮತ್ತು ಸರ್ವಾಧಿಕಾರಿ ಮನೋಭಾವದಿಂದ ತುಂಬಿದ ಇಂತಹ ಭಯಾನಕ ನೀತಿಗಳನ್ನು ದೇಶದಲ್ಲಿ ಜಾರಿಗೆ ತಂದಿತು. ಬಡವರು, ದಲಿತರು ಮತ್ತು ವಂಚಿತರ ಜೀವನವನ್ನು ನಾಶ ಮಾಡಿತು' ಎಂದು ಸ್ಪೀಕರ್ ಬಿರ್ಲಾ 1975ರ ದಿನಗಳನ್ನು ನೆನಪು ಮಾಡಿಕೊಂಡು ವಿಷಾದಿಸಿದರು.

ಓಂ ಬಿರ್ಲಾ ಅವರು ಪ್ರಸ್ತಾಪಿಸಿದ ಮೌನಾಚರಣೆಗೆ ಪ್ರತಿಪಕ್ಷಗಳ ನಾಯಕರು ವಿರೋಧಿಸಿದ್ದರಿಂದ ದಿನದ ಮಟ್ಟಿಗೆ ಕಲಾಪವನ್ನು ಮುಂದೂಡಲಾಯಿತು.

ಸ್ಪೀಕರ್ ಓಂ ಬಿರ್ಲಾ 1975 ರ ತುರ್ತು ಪರಿಸ್ಥಿತಿ ವಿಚಾರ ಪ್ರಸ್ತಾಪಿಸಿದಾಗ ಆಡಳಿತ ಪಕ್ಷ ಸದಸ್ಯರು ಬೆಂಬಲಿಸಿದರೆ, ಪ್ರತಿಪಕ್ಷಗಳ ಸದಸ್ಯರು ಗದ್ದಲ ಎಬ್ಬಿಸಿ ವಿರೋಧ ವ್ಯಕ್ತಪಡಿಸಿದರು.

### ಶಶಿ ತರೂರ್ ವಿರೋಧ

**ತುರ್ತು ಪರಿಸ್ಥಿತಿ ವಿಚಾರ ಪ್ರಸ್ತಾಪಿಸಿ ಸ್ಪೀಕರ್ ಓಂ ಬಿರ್ಲಾ ವಿಭಜನೆಯ ಹೇಳಿಕೆಗಳ ಮೂಲಕ ಸದನದ ಒಮ್ಮತ ಮನೋಭಾವ ಕೆಡಿಸಿರುವುದು ದುರದೃಷ್ಟಕರ. 49 ವರ್ಷಗಳ ಹಿಂದೆ ನಡೆದ ಘಟನೆ ಈಗ ಪ್ರಸ್ತಾಪಿಸುವುದು ಅನಗತ್ಯ. ಸಹಕಾರ ಮತ್ತು ಒಮ್ಮತ ಸಾಧಿಸಬೇಕಾದ ದಿನ ಈ ವಿಚಾರ ಪ್ರಸ್ತಾಪಿಸುವ ಅಗತ್ಯ ಇರಲಿಲ್ಲ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಅಸಮಾಧಾನ ವ್ಯಕ್ತಪಡಿಸಿದರು.**

### ಬಿರ್ಲಾಗೆ ಮೋದಿ ಬೆಂಬಲ

**ತುರ್ತು ಪರಿಸ್ಥಿತಿ ಬಗೆಗಿನ ಸ್ಪೀಕರ್ ನಿಲುವಿಗೆ ಪ್ರಧಾನಿ ಮೋದಿ ಬೆಂಬಲಿಸಿದ್ದಾರೆ. ಎಕ್ಸ್ ಸಂದೇಶ ಬರೆದ ಅವರು 'ಎಮರ್ಜೆನ್ಸಿ ಸಂದರ್ಭವನ್ನು ಸ್ಪೀಕರ್ ಖಂಡಿಸಿರುವುದು ಉತ್ತಮ ನಡೆ. ಆ ದಿನಗಳಲ್ಲಿ ಕಷ್ಟ ಅನುಭವಿಸಿದವರನ್ನು ನೆನೆದು ಮೌನಾಚರಣೆ ಮಾಡಿದ್ದು ಅದ್ಭುತ ನಡೆ. ತುರ್ತು ಪರಿಸ್ಥಿತಿ ಘಟನೆ 50 ವರ್ಷಗಳ ಹಿಂದೆ ನಡೆದಿರಬಹುದು. ಆದರೆ ಇಂದಿನ ಯುವಕರಿಗೆ ಸಂವಿಧಾನದ ಮೇಲೆ ದಾಳಿ , ಸಾರ್ವಜನಿಕ ಹಿತಾಸಕ್ತಿ ಹೊಸಕಿ ಹಾಕಿದರೆ ಏನಾಗಬಹುದು ಎಂಬುದನ್ನು ತಿಳಿಸುವುದು ಮುಖ್ಯ. ಸರ್ವಾಧಿಕಾರ ಹೇಗಿರುತ್ತದೆ ಎಂಬುದಕ್ಕೆ ತುರ್ತು ಪರಿಸ್ಥಿತಿ ದಿನಗಳೇ ಸಾಕ್ಷಿ' ಎಂದು ಮೋದಿ ಬರೆದಿದ್ದಾರೆ**

# ಔಷಧ ಕಾರ್ಖಾನೆ ಬೆಂಕಿ ಅವಘಡಕ್ಕೆ 4 ಜೀವ ಬಲಿ

**ಜೈಪುರ:** ರಾಜಸ್ಥಾನದ ಖೈರತಾಲ್ –ತಿಜಾರಾ ಜಿಲ್ಲೆಯಲ್ಲಿ ಔಷಧ ಕಾರ್ಖಾನೆಯಲ್ಲಿ ಭಾರಿ ಅಗ್ನಿ ಅವಘಡ ಸಂಭವಿಸಿ ನಾಲ್ವರು ಸಾವನ್ನಪ್ಪಿದ್ದಾರೆ. 10ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

**ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು**

ಭಿವಂಡಿ ಪ್ರದೇಶದಲ್ಲಿನ ಔಷಧಿ ತಯಾರಿಕಾ ಕಾರ್ಖಾನೆಯಲ್ಲಿ ಮಂಗಳವಾರ ರಾತ್ರಿ ಬೆಂಕಿ ಹೊತ್ತಿದ್ದು ಮೊದಲು ಒಬ್ಬರ ಮೃತದೇಹ ಪತ್ತೆಯಾಗಿತ್ತು. ಬೆಂಕಿ ಆರಿಸಿದ ಬಳಿಕ ಕಟ್ಟಡದಲ್ಲಿ ಮತ್ತೆ 3 ಮೃತದೇಹಗಳು ಪತ್ತೆಯಾಗಿವೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಗ್ನಿ ಅವಘಡಕ್ಕೆ ಕಾರಣ ತಿಳಿದಿಲ್ಲ. ಸದ್ಯ ಬೆಂಕಿ ಆರಿಸಲಾಗಿದ್ದು ಮರಣೋತ್ತರ ಪರೀಕ್ಷೆಗೆ ದೇಹಗಳನ್ನು ರವಾನಿಸಲಾಗಿದೆ ಎಂದು ಡಿವೈಎಸ್‌ಪಿ ಶಿವರಾಜ್ ಸಿಂಗ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

# ಸ್ಯಾಮ್ ಪಿತ್ರೊಡ ಮರು ನೇಮಕ

**ದೆಹಲಿ:** ಸಾಗರೋತ್ತರ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ಸ್ಯಾಮ್ ಪಿತ್ರೊಡ ಅವರನ್ನು ಮರು ನೇಮಕ ಮಾಡಿ ಎಐಸಿಸಿ ಬುಧವಾರ ಆದೇಶ ಹೊರಡಿಸಿದೆ. ಈ ಬಗ್ಗೆ ಕೆ.ಸಿ.ವೇಣುಗೋಪಾಲ್ ಮಾಹಿತಿ ನೀಡಿದ್ದಾರೆ. ಅಮೆರಿಕದಲ್ಲಿ ಪಿತ್ರಾರ್ಜಿತ ಆಸ್ತಿ ಮೇಲಿನ ತೆರಿಗೆ ಪದ್ಧತಿ ಭಾರತದಲ್ಲೂ ಜಾರಿ ಆಗಬೇಕು ಎಂಬ ಅವರ ಹೇಳಿಕೆ ಲೋಕಸಭಾ ಚುನಾವಣೆ ಸಮಯದಲ್ಲಿ ಭಾರಿ ಸದ್ದು ಮಾಡಿತ್ತು. ಭಾರತೀಯರ ಮೈ ಬಣ್ಣದ ಬಗ್ಗೆ ನೀಡಿದ ಹೇಳಿಕೆಯೂ ವಿರೋಧಕ್ಕೆ ಗುರಿಯಾಗಿತ್ತು.

ತಮಿಳುನಾಡು ವಿಧಾನಸಭೆ ನಿರ್ಣಯ ಅಂಗೀಕಾರ

# ದೇಶಾದ್ಯಂತ ಜಾತಿ ಗಣತಿಗೆ ಒತ್ತಾಯ

**ಚೆನ್ನೈ:** 2021 ರಿಂದ ಬಾಕಿ ಆಗಿರುವ ಜನಗಣತಿ ಜತೆಗೆ ಜಾತಿ ಗಣತಿಯನ್ನು ದೇಶಾದ್ಯಂತ ನಡೆಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿ ತಮಿಳುನಾಡು ವಿಧಾನಸಭೆ ಬುಧವಾರ ನಿರ್ಣಯ ಅಂಗೀಕರಿಸಿದೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮಂಡಿಸಿದ ನಿರ್ಣಯವನ್ನು ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

'ಭಾರತದ ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣ, ಉದ್ಯೋಗ, ಆರ್ಥಿಕತೆಯಲ್ಲಿ ಸಮಾನತೆ ಸಾಧಿಸುವ ಹಕ್ಕು ಹಾಗೂ ಅವಕಾಶ ಪಡೆಯಲು ನೀತಿಗಳನ್ನು ರೂಪಿಸಲು ಜಾತಿಗಣತಿ ಅತ್ಯಗತ್ಯವಾಗಿದೆ ಎಂದು ಸದನ ಪರಿಗಣಿಸುತ್ತದೆ. ಹೀಗಾಗಿ ಈ ಸದನ ಸರ್ವಾನುಮತದಿಂದ 2021ರಿಂದ ಬಾಕಿ ಉಳಿದಿರುವ ಜನ ಗಣತಿಯನ್ನು ನಡೆಸುವುದರ ಜತೆಗೆ ಜಾತಿ ಗಣತಿಯನ್ನೂ ರಾಷ್ಟ್ರವ್ಯಾಪಿ ನಡೆಸಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ' ಎಂದು ಸ್ಟಾಲಿನ್ ನಿರ್ಣಯ ಮಂಡಿಸಿದರು.

ಜಾತಿ ಗಣತಿಯನ್ನು ನಡೆಸುವ ಅಧಿಕಾರ ರಾಜ್ಯಕ್ಕೆ ಇರುವಾಗ ಈ ನಿರ್ಣಯ ಮಂಡನೆ ಅನಗತ್ಯ ಎಂದು ಪಿಎಂಕೆ ನಾಯಕ ಆರ್.ಅರುಳ್ ಅಭಿಪ್ರಾಯ ವ್ಯಕ್ತಪಡಿಸಿದರು.

ಜನಗಣತಿ ಕಾಯ್ದೆ ಪ್ರಕಾರ ಜಾತಿ ಗಣತಿ ಭಾರತ ಸರಕಾರ ಮಾತ್ರ ಮಾಡಬಹುದಾಗಿದೆ ಎಂದು ಸ್ಟಾಲಿನ್ ಪ್ರತಿಕ್ರಿಯಿಸಿದರು.

# ಮಾನಹಾನಿ: ಜು.2ಕ್ಕೆ ಖುದ್ದು ಹಾಜರಿ-ರಾಹುಲ್‌ಗೆ ಸೂಚನೆ

**ಲಖನೌ:** ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಮಾನಹಾನಿಕರ ಹೇಳಿಕೆ ನೀಡಿದ್ದ ಪ್ರಕರಣದಲ್ಲಿ ಜು.2 ರಂದು ಖುದ್ದು ಹಾಜರಾಗಲು ರಾಹುಲ್ ಗಾಂಧಿಗೆ ಉತ್ತರ ಪ್ರದೇಶದ ಸಂಸದ-ಶಾಸಕರ ನ್ಯಾಯಾಲಯ ಬುಧವಾರ ಆದೇಶಿಸಿದೆ.



ದೂರುದಾರರ ಪರ ವಾದ ಮಂಡಿಸಿದ ವಕೀಲ ಸಂತೋಷ್ ಕುಮಾರ್ ಪಾಂಡೆ, ರಾಮ್ ಪ್ರತಾಪ್ ಎಂಬಾತ ಈ ಪ್ರಕರಣದಲ್ಲಿ ತನ್ನನ್ನು ಕಕ್ಷಿದಾರನನ್ನಾಗಿ ಮಾಡಬೇಕೆಂದು ಒತ್ತಾಯಿಸಿದ್ದಾನೆ ಎಂದು ಹೇಳಿದರು.

ಮನವಿ ವಿರೋಧಿಸಿದ ಪಾಂಡೆ, ಪ್ರತಾಪ್ ಸಂತ್ರಸ್ತನೂ ಅಲ್ಲ ಅಥವಾ ದಾವೆಗೂ ಸಂಬಂಧಪಟ್ಟಿಲ್ಲ ಎಂದು ಹೇಳಿದರು. ರಾಹುಲ್ ಪರ ವಕೀಲ ಕಾಶಿ ಪ್ರಸಾದ್ ಶುಕ್ಲಾ ಕೂಡ ಪ್ರತಾಪ್ ಮನವಿ ವಿರೋಧಿಸಿದರು.

ನ್ಯಾಯಾಲಯ ರಾಮಪ್ರತಾಪ್ ಮನವಿ ವಜಾಗೊಳಿಸಿತು. ಮುಂದಿನ ವಿಚಾರಣೆ ದಿನ ರಾಹುಲ್ ಖುದ್ದು ಹಾಜರಾಗಲು ಸೂಚನೆ ನೀಡಿತು. 2018ರಲ್ಲಿ ಅಮಿತ್ ಶಾ ವಿರುದ್ಧ ರಾಹುಲ್ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರಿಂದ ರಾಹುಲ್ ವಿರುದ್ಧ ಬಿಜೆಪಿ ನಾಯಕ ವಿಜಯ್ ಮಿಶ್ರಾ ಮಾನನಷ್ಟ ದೂರು ದಾಖಲಿಸಿದ್ದಾರೆ.

# ದೋಡಾ ಕಾರ್ಯಾಚರಣೆ: ಮೂವರು ಉಗ್ರರು ಖತಂ

**ದೋಡಾ:** ಜಮ್ಮು - ಕಾಶ್ಮೀರದ ದೋಡಾ ಜಿಲ್ಲೆಯ ಅರಣ್ಯದಲ್ಲಿ ಭದ್ರತಾ ಪಡೆಗಳು ಬುಧವಾರ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೂವರು ಭಯೋತ್ಪಾದಕರನ್ನು ಕೊಲ್ಲಲಾಗಿದೆ.

ಪ್ರದೇಶದಲ್ಲಿ 6 ಗಂಟೆಗಳಿಗೂ ಹೆಚ್ಚು ಕಾಲ ನಡೆದ ಗುಂಡಿನ ಚಕಮಕಿಯಲ್ಲಿ ಪಾಕಿಸ್ತಾನ ಮೂಲದ ಜೈಶ್-ಎ-ಮೊಹಮ್ಮದ್ (ಜೆಇಎಂ) ಸಂಘಟನೆಯೊಂದಿಗೆ ನಂಟು ಹೊಂದಿರುವ ಶಂಕಿತ ಮೂವರು ಭಯೋತ್ಪಾದಕರನ್ನು ಕೊಲ್ಲಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಉಗ್ರರು ಅಡಗಿದ್ದ ಪ್ರದೇಶದಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ.

ಎರಡು ಎಂ-4 ಕಾರ್ಬೈನ್‌ಗಳು ಮತ್ತು ಎಕೆ ಅಸಾಲ್ಟ್ ರೈಫಲ್ ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎನ್ನಲಾಗಿದೆ.

ಜಂಟಿ ಕಾರ್ಯಾಚರಣೆಯಲ್ಲಿ ಕಾಶ್ಮೀರ ಪೊಲೀಸರು, ಸೇನೆ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಯೋಧರು ಭಾಗಿಯಾಗಿದ್ದರು.

ಉಗ್ರರು ಅಡಗಿರುವ ಮಾಹಿತಿ ಸಿಕ್ಕ ಕೂಡಲೇ ಭದ್ರತಾ ಪಡೆಗಳು ಪ್ರದೇಶದಲ್ಲಿ ಶೋಧ ಕಾರ್ಯ ಆರಂಭಿಸಿದವು.

ಈ ವೇಳೆ ಉಗ್ರರು ಸೇನಾಪಡೆಗಳತ್ತ ಗುಂಡಿನ ಸುರಿಮಳೆ ಶುರು ಮಾಡಿತು.

ಭದ್ರತಾ ಪಡೆ ಕೂಡ ತಿರುಗೇಟು ನೀಡಿ ತೀವ್ರ ಗುಂಡಿನ ಚಕಮಕಿ ನಡೆಸಿತು. ಕಾರ್ಯಾಚರಣೆಯಲ್ಲಿ ಮೂವರು ಉಗ್ರರು ಹತರಾಗಿದ್ದು, ಪ್ರದೇಶದಲ್ಲಿ ಭದ್ರತಾ ಪಡೆ ತೀವ್ರ ಶೋಧ ನಡೆಸಿದೆ ಎಂದು ಸೇನಾಧಿಕಾರಿಗಳು ತಿಳಿಸಿದ್ದಾರೆ.

### ಕಾರ್ಯಾಚರಣೆ ಹೇಗೆ ನಡೆಯಿತು

**ಉಗ್ರರು ಅಡಗಿರುವ ಮಾಹಿತಿ ತಿಳಿಯುತ್ತಿದ್ದಂತೆಯೇ ಕಾರ್ಯಾಚರಣೆಗೆ ಮುಂದಾದ ಭದ್ರತಾ ಪಡೆ ಸಿಬ್ಬಂದಿ ಕುಗ್ರಾಮದಲ್ಲಿ ತೀವ್ರ ಶೋಧ ನಡೆಸಿದರು. ಈ ವೇಳೆ ಸಿನೂ ಪಂಚಾಯತ್‌ನ ಹಳ್ಳಿಯೊಂದರ ಇಳಿಜಾರಿನಲ್ಲಿ ಮಣ್ಣಿನ ಮನೆಯಲ್ಲಿ ಅಡಗಿದ್ದ ಭಯೋತ್ಪಾದಕರು ಸೇನೆಯನ್ನು ಗುರಿಯಾಗಿಸಿ ಗುಂಡಿನ ಸುರಿಮಳೆ ನಡೆಸಿದರು. ಸೇನೆ ಕೂಡ ಪ್ರತಿ ದಾಳಿ ನಡೆಸಿ ಮೊದಲಿಗೆ ಒಬ್ಬ ಭಯೋತ್ಪಾದಕನನ್ನು ಹೊಡೆದುರುಳಿಸಿತು. ಈ ವೇಳೆ ಇಬ್ಬರು ಉಗ್ರರು ಅಲ್ಲಿಂದ ಕಾಲ್ಕಿತ್ತರು. ಕೂಡಲೇ ಸೇನೆ ಬೆನ್ನು ಹತ್ತಿ ಹೋಗಿ ಬೇರೆಡೆ ಅಡಗಿದ್ದ ಇಬ್ಬರೂ ಉಗ್ರರನ್ನು ಗುರಿಯಾಗಿಸಿ ತೀವ್ರ ಗುಂಡಿನ ದಾಳಿ ನಡೆಸಿ ಇಬ್ಬರನ್ನೂ ಹೊಡೆದುರುಳಿಸಿತು.**

### ಪಾಕ್ ಮೂಲದ ಉಗ್ರರು

**ದೋಡಾ ಜಿಲ್ಲೆಯಲ್ಲಿ ಇತ್ತೀಚೆಗೆ 4 ಪಾಕಿಸ್ತಾನಿ ಭಯೋತ್ಪಾದಕರು ಸ್ಥಳೀಯರ ನೆರವಿನಿಂದ ಒಳ ನುಸುಳಿರುವುದನ್ನು ಗುಪ್ತಚರ ಇಲಾಖೆ ಸೇನೆಗೆ ತಿಳಿಸಿತ್ತು. ಈ ವೇಳೆ ತೀವ್ರ ಶೋಧದ ಹೊರತಾಗಿಯೂ ಉಗ್ರರ ಹೆಡೆಮುರಿ ಕಟ್ಟಲು ಭದ್ರತಾ ಪಡೆ ಗೆ ಸಾಧ್ಯ ಆಗಿರಲಿಲ್ಲ. ಬಳಿಕ ಭಯೋತ್ಪಾದಕರ ಬಗ್ಗೆ ಮಾಹಿತಿ ನೀಡಿದವರಿಗೆ ತಲಾ 5 ಲಕ್ಷ ರು. ನಗದು ಬಹುಮಾನ ಘೋಷಿಸಲಾಗಿತ್ತು. ಬಳಿಕ ಉಗ್ರರು ದೋಡಾ ಜಿಲ್ಲೆಯ ಅರಣ್ಯ ಪ್ರದೇಶ ಸಮೀಪದ ಕುಗ್ರಾಮದಲ್ಲಿ ಅಡಗಿರುವ ಕುರಿತು ಮಾಹಿತಿ ಲಭ್ಯವಾಗಿತ್ತು.**

### ಇದಕ್ಕೂ ಮುನ್ನ ಉಗ್ರ ದಾಳಿ

**ಜೂ.9 ರಂದು ರಿಯಾಸಿ ಜಿಲ್ಲೆಯಲ್ಲಿ ಶಿವ ಖೋರಿ ದೇವಸ್ಥಾನದಿಂದ ಹಿಂದಿರುಗುತ್ತಿದ್ದ ಯಾತ್ರಾರ್ಥಿಗಳ ಬಸ್ ಮೇಲೆ ಉಗ್ರರು ದಾಳಿ ನಡೆಸಿ ಚಾಲಕ ಸೇರಿದಂತೆ 9 ಜನರು ಸಾವಿಗೆ ಕಾರಣರಾಗಿದ್ದರು .**

## ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

**ಈ ಕಾರಣದಿಂದ:**

**ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **26.10.2021** ರಂದು ಕರೆದು ಸಾಲಗಾರ **ಯೆನೆಮೆಂಡ್ರಾ, ಚಕ್ರಪಾಣಿ ಮತ್ತು ಸಿರೀಶಾ ವೈ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 45,04,580.82 (ನಲವತ್ತೈದು ಲಕ್ಷ ನಾಲ್ಕು ಸಾವಿರದ ಐನೂರಾ ಎಂಬತ್ತು ರೂಪಾಯಿ ಮತ್ತು ಎಂಬತ್ತೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00371069** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **21.10.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**ನ ಬಾಕಿ ಇರುವ ಮೊತ್ತ **ರೂ. 45,04,580.82 (ನಲವತ್ತೈದು ಲಕ್ಷ ನಾಲ್ಕು ಸಾವಿರದ ಐನೂರಾ ಎಂಬತ್ತು ರೂಪಾಯಿ ಮತ್ತು ಎಂಬತ್ತೆರಡು ಪೈಸೆ ಮಾತ್ರ) 21.10.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

### ಸ್ಥಿರಾಸ್ತಿಯ ವರ್ಣನೆ

''ಎಎಸ್ಆರ್ ಆಕ್ಟೇವ್'' ಎಂಬ ಹೆಸರಿನ ಹಲವು ಮಹಡಿಗಳ ಕಟ್ಟಡದ 4ನೇ ಮಹಡಿಯಲ್ಲಿನ ಫ್ಲ್ಯಾಟ್ ನಂ. 404, ಇದರ ಅಳತೆ 1134 ಚ.ಅಡಿ ಸೂಪರ್ ಬಿಲ್ಟ್-ಅಪ್ ಏರಿಯ, ಇದಕ್ಕೆ ಕಾರ್ ಪಾರ್ಕಿಂಗ್ ಸ್ಪೇಸ್ ಕೂಡ ಇದೆ. ಜೊತೆಗೆ, ಇದು ಕಟ್ಟಡದ 466 ಚ.ಅಡಿ ಅವಿಭಾಜಿತ ಸ್ಥಳಗಳಲ್ಲಿ ತನ್ನ ಪಾಲು ಹೊಂದಿದೆ. ಈ ಪ್ರಾಪರ್ಟಿಯ ವಿಳಾಸ: ಸರ್ವೇ ನಂ. 11/7, ಮತ್ತು 11/9, ಚಿಕ್ಕನಾಯಕನಹಳ್ಳಿ ಗ್ರಾಮ, ಬೆಂಗಳೂರು, ಕರ್ನಾಟಕ.

**ದಿನಾಂಕ: 22.06.2024** — **ಅಧಿಕಾರವಿರುವ ಅಧಿಕಾರಿ**
**ಸ್ಥಳ : ಬೆಂಗಳೂರು** — **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**

## ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

**ಈ ಕಾರಣದಿಂದ:**

**ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ (CIN:L65922DL2005PLC136029)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **22.05.2021** ರಂದು ಕರೆದು ಸಾಲಗಾರ **ರಘುನಾಥರಾಮ್ ಮತ್ತು ನಿಜು** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 38,80,961.51(ರೂಪಾಯಿ ಮೂವತ್ತ ಎಂಟು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರುವತ್ತ ಒಂದು ಮತ್ತು ಪೈಸೆ ಐವತ್ತ ಒಂದು ಮಾತ್ರ)** ಸಾಲ ಖಾತೆ ನಂ. **HHLBAG00304656** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **07.05.2021** ರವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**ನ ಬಾಕಿ ಇರುವ ಮೊತ್ತ **ರೂ. 38,80,961.51 (ರೂಪಾಯಿ ಮೂವತ್ತ ಎಂಟು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರುವತ್ತ ಒಂದು ಮತ್ತು ಪೈಸೆ ಐವತ್ತ ಒಂದು ಮಾತ್ರ) 07.05.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

### ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ. 201, ಎರಡನೇ ಮಹಡಿ, ಎಎಸ್ಆರ್ ಒಕ್ಟೇವ್, ಇಲ್ಲಿರುವಂಥಾದ್ದು: ಚಿಕ್ಕನಾಯಕನಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು - 560037, ಕರ್ನಾಟಕ

**ದಿನಾಂಕ: 22.06.2024** — **ಅಧಿಕಾರವಿರುವ ಅಧಿಕಾರಿ**
**ಸ್ಥಳ : ಬೆಂಗಳೂರು** — **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**

**ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)**
**CIN: U65993DL2002PLC115769**
**ನೋಂದಾಯಿತ ಕಚೇರಿ:** 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
**ಕಾರ್ಪೊರೇಟ್ ಕಚೇರಿ:** ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

## ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

**ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ('ಐಎಚ್‌ಎಫ್‌ಎಲ್')** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **26.08.2021** ರಂದು ಕರೆದು ಸಾಲಗಾರ **ಅಮಿತ್ ಮಹಂತಿ ಮತ್ತು ಅರ್ಪಿತಾ ಮಿಶ್ರ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 65,21,012.11 (ರೂಪಾಯಿ ಅರುವತ್ತ ಐದು ಲಕ್ಷದ ಇಪ್ಪತ್ತ ಒಂದು ಸಾವಿರದ ಹನ್ನೆರಡು ಮತ್ತು ಪೈಸೆ ಹನ್ನೊಂದು ಮಾತ್ರ)** ಸಾಲ ಖಾತೆ ನಂ. **HHLBAN00391876** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **09.08.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಮಾತ್ರವಲ್ಲದೆ ಐಎಚ್‌ಎಫ್‌ಎಲ್ ಈ ಮೇಲಿನ ಸಾಲದ ಖಾತೆಯಲ್ಲಿನ ಅದರ ಎಲ್ಲಾ ಹಕ್ಕುಗಳು, ಟೈಟಲ್ ಮತ್ತು ಆಸಕ್ತಿಯನ್ನು ತಾರೀಖು **04.08.2023** ರ ರೆಕ್ಟಿಫಿಕೇಶನ್ ಒಪ್ಪಂದೊಂದಿಗೆ ಓದಲಾಗುವ ತಾರೀಖು **27.06.2023** ರ ಅಸೈನ್ ಒಪ್ಪಂದದ ಮೂಲಕ **ಅಸೆಟ್ ಕೇರ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. (''ಎಸಿಆರ್‌ಇ'')**

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.** ನ ಬಾಕಿ ಇರುವ ಮೊತ್ತ **ರೂ. 65,21,012.11 (ರೂಪಾಯಿ ಅರುವತ್ತ ಐದು ಲಕ್ಷದ ಇಪ್ಪತ್ತ ಒಂದು ಸಾವಿರದ ಹನ್ನೆರಡು ಮತ್ತು ಪೈಸೆ ಹನ್ನೊಂದು ಮಾತ್ರ) 09.08.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

### ಸ್ಥಿರಾಸ್ತಿಯ ವರ್ಣನೆ

ದೊಡ್ಡಕಲ್ಲಸಂದ್ರ ಗ್ರಾಮ, ಕನಕಪುರ ರೋಡ್, ಉಲ್ಲಾಳ್ರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು ಗ್ರಾಮಾಂತರ-560062, ಕರ್ನಾಟಕ ಇಲ್ಲಿನ ಸರ್ವೆ ನಂ. 57(ಪಿ), 58(ಪಿ), 56(ಪಿ), 59(ಪಿ), 60(ಪಿ), 56(ಪಿ) ಮತ್ತು 60(ಪಿ)ಹೊಂದಿರುವ ಜಮೀನಿನ ಮಂತ್ರಿ ಸೆರೆನಿಟಿಯಲ್ಲಿ 8 ನೇ ಮಹಡಿಯ ವಿಂಗ್ ಎಲ್‌ನ, ಬ್ಲಾಕ್ 4ರಲ್ಲಿ, ಫ್ಲ್ಯಾಟ್ ನಂ.ಎಲ್ 804

ಪೂರ್ವದಲ್ಲಿ ಇದರಿಂದ : ಸರ್ವೆ ನಂ. 56(ಪಿ), ಸರ್ವೆ ನಂ.57(ಪಿ), ಸರ್ವೆ ನಂ.58(ಪಿ) ಮತ್ತು ಸರ್ವೆ ನಂ.60(ಪಿ)

ಪಶ್ಚಿಮದಲ್ಲಿ ಇದರಿಂದ : ಖಾಸಗಿ ಜಮೀನು ಹೊಂದಿರುವ ಸರ್ವೆ ಸಂ. 51;

ಉತ್ತರದಲ್ಲಿ ಇದರಿಂದ : ಸರ್ವೆ ನಂ.49 ಅನ್ನು ಹೊಂದಿರುವ ಖಾಸಗಿ ಜಮೀನು, ಸಿಟಿ ಇಂಜಿನೀಯರಿಂಗ್ ಕಾಲೇಜಿಗೆ ಸೇರಿದ ಜಮೀನು (ಸರ್ವೆ ನ,.47/3), ಸರ್ವೆ ನಂ.47/2, ಸರ್ವೆ ನಂ.39/1, ಸರ್ವೆ ನಂ.39/2 ಹೊಂದಿರುವ ಗೋಕುಲಮ್ ಅಪಾರ್ಟ್‌ಮೆಂಟ್ಸ್‌ಗೆ ಸೇರಿದ ಜಮೀನು.

ಮತ್ತು

ದಕ್ಷಿಣದಲ್ಲಿ ಇದರಿಂದ : ಸರ್ವೆ ನಂ. 60(ಪಿ) ಮತ್ತು ಸಿಂಗಾಪುರ ಗಾರ್ಡನ್ಸ್ ರೆಸಿಡೆನ್ಶಿಯಲ್ ಲೇಔಟ್

**ಅಧಿಕಾರವಿರುವ ಅಧಿಕಾರಿ**
**ದಿನಾಂಕ: 24.06.2024** — **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
**ಸ್ಥಳ : ಬೆಂಗಳೂರು ಗ್ರಾಮಾಂತರ** — (102-ಟ್ರಸ್ಟ್ )

# ಏಕಲವ್ಯ ಪ್ರಶಸ್ತಿ: ಮಧ್ಯಪ್ರವೇಶಿಸಲ್ಲ

**ಬೆಂಗಳೂರು:** ಏಕಲವ್ಯ ಪ್ರಶಸ್ತಿ ಪಡೆಯಲು ಅರ್ಹತೆ ನಿಗದಿಪಡಿಸಿ ರಾಜ್ಯ ಸರಕಾರ ಹೊರಡಿಸಿದ್ದ ಮಾರ್ಗಸೂಚಿಗೆ ಸಂಬಂಧಿಸಿದಂತೆ ಮಧ್ಯಪ್ರವೇಶಿಸಲು ನಿರಾಕರಿಸಿರುವ ಹೈಕೋರ್ಟ್, ನ್ಯಾಯಾಲಯಗಳು ಕ್ರೀಡೆಗಳಲ್ಲಿನ ತೀರ್ಪುಗಾರರಂತೆ ಇರಬೇಕೇ ವಿನಃ ರೆಫರಿಗಳಂತೆ ಅಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಸಂಬಂಧ ರೋಲರ್ ಸ್ಕೇಟಿಂಗ್ ಅಥ್ಲೀಟ್ ವಿ. ವರ್ಷಿತ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ಪ ಅವರಿದ್ದ ಏಕ ಸದಸ್ಯ ನ್ಯಾಯಪೀಠ , ಸರಕಾರದ ನೀತಿ ಸಂವಿಧಾನ ಬಾಹಿರ ಹಾಗೂ ದೋಷ ಪೂರಿತವಾಗಿದ್ದಲ್ಲಿ ಮಾತ್ರವೇ ನ್ಯಾಯಾಲಯದ ಪರಿಶೀಲನೆಗೆ ಒಳಪಡುತ್ತವೆ. ಸರಕಾರ ಹಾಗೂ ಶಾಸನಬದ್ಧ ಪ್ರಾಧಿಕಾರಗಳು ಎಚ್ಚರಿಕೆಯಿಂದ ರಚಿಸುವ ನೀತಿಗಳ ಬಗ್ಗೆ ನ್ಯಾಯಾಲಯಗಳು ಸದಾ ಸಂಯಮ ಪ್ರದರ್ಶಿಸಬೇಕು. ಸರಕಾರದ ನೀತಿಗಳು ಸಂವಿಧಾನ 14ನೇ ವಿಧಿಯ ಅಡಿಯಲ್ಲಿನ ಸಮಾನತೆ ಉಲ್ಲಂಘನೆ, ಅಸಮಂಜಸ ಹಾಗೂ ದೋಷದಿಂದ ಕೂಡಿದ್ದರೆ ಮಾತ್ರವೇ ಕೋರ್ಟ್ ಮಧ್ಯಪ್ರವೇಶಿಸಬಹುದು ಎಂದು ನ್ಯಾಯಪೀಠ ತಿಳಿಸಿದೆ.

**ಪ್ರಕರಣರವೇನು?:** ಏಕಲವ್ಯ ಪ್ರಶಸ್ತಿ ನೀಡಲು ರಾಜ್ಯ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಕಾಲಕ್ಕನುಗುಣವಾಗಿ ಮಾರ್ಗಸೂಚಿಗಳನ್ನು ನಿಗದಿಪಡಿಸುತ್ತದೆ. ಇದರನ್ವಯ 2015ರ ಆಗಸ್ಟ್ 24 ರಂದು ಏಕಲವ್ಯ ಪ್ರಶಸ್ತಿಗೆ ಅರ್ಹತೆ ಹೊಂದಲು ಮಾರ್ಗಸೂಚಿಗಳನ್ನು ಹೊರಡಿಸಲಾ ಗಿತ್ತು. ಅರ್ಜಿದಾರರು ಈ ಮಾರ್ಗಸೂಚಿಗಳನ್ನು ಪ್ರಶ್ನಿಸಿದ್ದರು.

## ಕರ್ನಾಟಕ ಬ್ಯಾಂಕ್ ಲಿಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

**ಶಾಖೆ: ಕುಡ್ಲು, ಬೆಂಗಳೂರು.**
**ನೆಲ ಅಂತಸ್ತು, ನಂ. 302, ನಿವೇಶನ ನಂ. 66 ಮತ್ತು 67, ಸೋಮಸುಂದರಪಾಳ್ಯ ರಸ್ತೆ, ಸರ್ಜಾಪುರ ಹೋಬಳಿ, ಕುಡ್ಲು, ಬೆಂಗಳೂರು-560064, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.**

**ದೂರವಾಣಿ: 080-29906655**
**ಇ-ಮೇಲ್: blr.kudlu@ktkbank.com**
**ವೆಬ್ ಸೈಟ್: www.karnatakabank.com**
**CIN: L85110KA1924PLC001128**

### ಚಿನ್ನಾಭರಣಗಳ ಸಾರ್ವಜನಿಕ ಹರಾಜು ಸೂಚನೆ

ಈ ಕೆಳಕಂಡ ವ್ಯಕ್ತಿ(ಗಳು) ಅಡಮಾನ ಮಾಡಿರುವ ಚಿನ್ನಾಭರಣಗಳ ಮೇಲೆ ಪಡೆದಿರುವ ಸಾಲಗಳನ್ನು ನಮ್ಮ ತಗಾದೆ ಸೂಚನೆ (ಡಿಮ್ಯಾಂಡ್ ನೋಟೀಸ್)ಗಳ ಹೊರತಾಗಿಯೂ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಈ ಕೆಳಗೆ ಪ್ರಕಟಿಸಲಾದ **ಹರಾಜಿನ ದಿನಾಂಕದ ಒಂದು ದಿನ ಮೊದಲು ಅಥವಾ ಹರಾಜಿನ ಸಮಯದ ಒಳಗೆ** ಅಸಲು/ಬಡ್ಡಿ ಮತ್ತು ಇತರ ಶುಲ್ಕಗಳನ್ನು ಪಾವತಿಸದಿದ್ದರೆ, ಬ್ಯಾಂಕಿನ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಡಮಾನ ಮಾಡಿರುವ ಚಿನ್ನಾಭರಣಗಳನ್ನು **ಮಧ್ಯಾಹ್ನ 3.00 ಗಂಟೆಗೆ** ಬ್ಯಾಂಕಿನ ಆವರಣದಲ್ಲಿ ಸಾರ್ವಜನಿಕವಾಗಿ ಹರಾಜು ಮಾಡಲಾಗುವುದು ಎಂಬುದನ್ನು ದಯವಿಟ್ಟು ಗಮನಿಸಿ.
ಯಾವುದೇ ಕಾರಣಗಳನ್ನು ಮತ್ತು ಸೂಚನೆಯನ್ನು ನೀಡದೆ ಹರಾಜನ್ನು ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

| ಕ್ರ ಸಂ. | ಸಾಲದ ಖಾತೆ ಸಂಖ್ಯೆ | ಸಾಲದ ದಿನಾಂಕ | ಸಾಲಗಾರರ ಹೆಸರು | ರೂಪಾಯಿಗಳಲ್ಲಿ ಬಾಕಿ# | ಸ್ಥಳ ಮತ್ತು ಹರಾಜಿನ ದಿನಾಂಕ ಹಾಗೂ ಸಂಪರ್ಕಿಸಬೇಕಾದ ಸಂಖ್ಯೆ |
|---|---|---|---|---|---|
| 01 | 8577002100000301 | 24.04.2023 | ದಿಲ್ಲಿಪ್ ಪ್ರಧಾನ್ | ರೂ.53,141.00 | ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಕುಡ್ಲು, ನೆಲ ಅಂತಸ್ತು, ನಂ. 302, ನಿವೇಶನ ನಂ. 66 ಮತ್ತು 67, ಸೋಮಸುಂದರಪಾಳ್ಯ ರಸ್ತೆ, ಸರ್ಜಾಪುರ ಹೋಬಳಿ, ಕುಡ್ಲು, ಬೆಂಗಳೂರು-560064, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. ಹರಾಜಿನ ದಿನಾಂಕ: 15.07.2024 ಮಧ್ಯಾಹ್ನ 3.00 ಗಂಟೆಗೆ ದೂರವಾಣಿ ಸಂಖ್ಯೆ: 080-29906655 |
| 02 | 8577002100000701 | 09.05.2023 | ದಿಲ್ಲಿಪ್ ಪ್ರಧಾನ್ | ರೂ.44,086.00 | |

#ಮುರಿದ ಅವಧಿಯ ಬಡ್ಡಿ + ಇತರ ಶುಲ್ಕಗಳು

**ದಿನಾಂಕ: 27.06.2024** — **ಸಹಿ/-**
**ಸ್ಥಳ: ಬೆಂಗಳೂರು** — **ಉಪ ಪ್ರಧಾನ ವ್ಯವಸ್ಥಾಪಕರು, ಕರ್ಣಾಟಕ ಬ್ಯಾಂಕ್ ಲಿಮಿಟೆಡ್, ಪ್ರಾದೇಶಿಕ ಕಛೇರಿ, ಬೆಂಗಳೂರು.**

## ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್)

ವಿವಿಧ ಆರ್ಸಿಲ್ ಟ್ರಸ್ಟ್‌ಗಳ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ
**ಆರ್ಸಿಲ್ ಕಚೇರಿ:** ರೂಬಿ, 10ನೇ ಮಹಡಿ, 29, ಸೇನಾಪತಿ ಬಾಪಟ್ ಮಾರ್ಗ, ದಾದರ್ (ಪಶ್ಚಿಮ) ಮುಂಬೈ-400 028
**ಶಾಖಾ ಕಚೇರಿ:** ಘಟಕ ಸಂಖ್ಯೆ. 3, 3ನೇ ಮಹಡಿ, ವಿಶಿಷ್ಟ ಆರ್ಕೇಡ್, 23ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು-560 070
**ಜಾಲತಾಣ : https://auction.arcil.co.in; CIN-U65999MH2002PLC134884**

**ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣದ ಅಡಿಯಲ್ಲಿ ಅಧಿಕಾರಗಳ ಚಲಾವಣೆ ಮತ್ತು ಭದ್ರತಾ ಆಸಕ್ತಿಯ ಕಾಯ್ದೆ, 2002 (ಸರ್ಫೇಸಿ ಆಕ್ಟ್) ಜಾರಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 6, 8 ಮತ್ತು 9 ರೊಂದಿಗೆ ಆನ್‌ಲೈನ್ ಇ-ಹರಾಜು ಮೂಲಕ ಮಾರಾಟಕ್ಕೆ ಸಾರ್ವಜನಿಕ ಸೂಚನೆ**

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ಸಾಲಗಾರ (ರು) / ಖಾತರಿದಾರರು (ಗಳು) / ಅಡಮಾನದಾರರಿಗೆ (ಗಳು), ನಿರ್ದಿಷ್ಟವಾಗಿ, ಕೆಳಗೆ ವಿವರಿಸಿದ ಸ್ಥಿರ ಆಸ್ತಿ/ಗಳು ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್‌ಗೆ ವಿವಿಧ ಆರ್ಸಿಲ್ ಟ್ರಸ್ಟ್‌ಗಳ (''**ಆರ್ಸಿಲ್**'') ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತದೆ (ನೋಂದಾಯಿತ ನಿಯೋಜನೆ ಒಪ್ಪಂದಗಳ ಮೂಲಕ ಹಣಕಾಸಿನ ಆಸ್ತಿಯ ನಿಯೋಜನೆಗೆ ಅನುಗುಣವಾಗಿ) ಅಡಮಾನವಾಗಿ / ವಿಧಿಸಲಾಗಿದೆ ಎಂದು ಸೂಚನೆ ನೀಡಲಾಗಿದೆ, ಆನ್‌ಲೈನ್ ಇ-ಹರಾಜಿನ ಮೂಲಕ ''ಎಲ್ಲಿ ಇದ್ದಂತೆ'', ''ಇರುವಂತೆ'', ''ಏನೇ ಇದ್ದರೂ'' ಮತ್ತು ''ಅವಶ್ಯಕತೆಯ ಆಧಾರವಿಲ್ಲದೆ'' ಮಾರಾಟ ಮಾಡಲಾಗುವುದು, ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ಬಾಕಿ ಇರುವ ಬಾಕಿಗಳು ವೆಚ್ಚಗಳು ಇತ್ಯಾದಿಗಳನ್ನು ಮರುಪಡೆಯಲು, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 (''ನಿಯಮಗಳು'') ನ ನಿಯಮಗಳು 6, 8 ಮತ್ತು 9 ರೊಂದಿಗೆ ಓದಿದ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002 (''ಕಾಯಿದೆ'') ಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಲಾಗಿದೆ.

| ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು | ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್ | ನಂಬಿಕೆಯ ಹೆಸರು | ಕ್ರಮವಾಗಿ 28-08-2021 ಮತ್ತು 01-05-2021 ರ ಸರಫೇಸಿ (SARFAESI) ಸೂಚನೆ ಪ್ರಕಾರ ಬಾಕಿ ಮೊತ್ತ | ಸ್ವಾಧೀನದ ಪ್ರಕಾರ ಮತ್ತು ದಿನಾಂಕ | ತಪಾಸಣೆಯ ದಿನಾಂಕ | ಆಸ್ತಿಯ ಪ್ರಕಾರ ಮತ್ತು ಪ್ರದೇಶ | ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ) | ಮೀಸಲು ಬೆಲೆ | ಇ-ಹರಾಜಿನ ದಿನಾಂಕ ಮತ್ತು ಸಮಯ |
|---|---|---|---|---|---|---|---|---|---|
| ಸಾಲಗಾರ: 1. ನಾಗೇಂದ್ರ ಕುಮಾರ್ ಕೆ.ಸಿ 2. ರಮ್ಯಾ ಜಿ | ಸಾಲದ ಖಾತೆ ಸಂಖ್ಯೆ. HHLBGL00295522 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (ಇ.ಎ.ಆರ್.ಸಿ) | ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್ | 26-06-2021 ರಂತೆ ರೂ. 25,71,401/- (ರೂಪಾಯಿ ಇಪ್ಪತ್ತ ಐದು ಲಕ್ಷ ಎಪ್ಪತ್ತ ಒಂದು ಸಾವಿರದ ನಾಲ್ಕು ನೂರ ಒಂದು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು | 10-01-2024 ರಂದು ಭೌತಿಕ ಸ್ವಾಧೀನ | ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು | ವಸತಿ ಆಸ್ತಿ - 1500 ಚದರ ಅಡಿ (ಭೂಮಿ ಪ್ರದೇಶ) | ರೂ. 2,50,000/- (ರೂಪಾಯಿ ಎರಡು ಲಕ್ಷ ಐವತ್ತು ಸಾವಿರ ಮಾತ್ರ) | ರೂ. 25,00,000/- (ರೂಪಾಯಿ ಇಪ್ಪತ್ತ ಐದು ಲಕ್ಷ ಮಾತ್ರ) | 29.07.2024 ರಂದು ಮಧ್ಯಾಹ್ನ 12:00 |

ಹರಾಜಾಗುತ್ತಿರುವ ಸುರಕ್ಷಿತ ಆಸ್ತಿಯ ವಿವರಣೆ: ನಾಗೇಂದ್ರ ಕುಮಾರ್ ಕೆ.ಸಿ ಒಡೆತನದ ಆಸ್ತಿ:
ಸ್ಥಿರ ಆಸ್ತಿ ಅಳತೆ - 1500 ಚದರ ಅಡಿ (ಭೂಮಿ ಪ್ರದೇಶ) ಮತ್ತು ಇದಕ್ಕೆ ಚಕ್ಕುಬಂದಿ ಈ ಕೆಳಗಿನಂತಿದೆ: ಪ್ಲಾಟ್ ನಂ.106 ಗ್ರೀನ್ ಕೌಂಟಿ, ಸರ್ವೆ ನಂ. 78/3, ದೊಮ್ಮಲೂರು ಗ್ರಾಮ ಲಕ್ಕೂರು ಹೋಬಳಿ ಮಾಲೂರು ತಾಲೂಕು ಕೋಲಾರ ಜಿಲ್ಲೆ, ಬೆಂಗಳೂರು, ಕರ್ನಾಟಕ - 563130.

| ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು | ನಿಲ್ (ಶೂನ್ಯ) | ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು | ನಿಲ್ (ಶೂನ್ಯ) |
|---|---|---|---|

| ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು | ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್ | ನಂಬಿಕೆಯ ಹೆಸರು | ಬಾಕಿ ಮೊತ್ತ | ಸ್ವಾಧೀನದ ಪ್ರಕಾರ ಮತ್ತು ದಿನಾಂಕ | ತಪಾಸಣೆಯ ದಿನಾಂಕ | ಆಸ್ತಿಯ ಪ್ರಕಾರ ಮತ್ತು ಪ್ರದೇಶ | ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ) | ಮೀಸಲು ಬೆಲೆ | ಇ-ಹರಾಜಿನ ದಿನಾಂಕ ಮತ್ತು ಸಮಯ |
|---|---|---|---|---|---|---|---|---|---|
| ಸಾಲಗಾರ: 1. ಬಿ ವೆಂಕಟೇಶ್ ಮೂರ್ತಿ 2. ಶ್ವೇತಾ ಕೆ ಸಿ | ಸಾಲದ ಖಾತೆ ಸಂಖ್ಯೆ. HHLBAG00467547 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (ಇ.ಎ.ಆರ್.ಸಿ) | ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್ | 31-03-2021 ರಂತೆ ರೂ. 14,37,218.93/- (ರೂಪಾಯಿ ಹದಿನಾಲ್ಕು ಲಕ್ಷ ಮೂವತ್ತ ಏಳು ಸಾವಿರದ ಇನ್ನೂರ ಹದಿನೆಂಟು ಮತ್ತು ಪೈಸೆ ತೊಂಬತ್ತ ಮೂರು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು | 10-01-2024 ರಂದು ಭೌತಿಕ ಸ್ವಾಧೀನ | ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು | ವಸತಿ ಆಸ್ತಿ - 853 ಚದರ ಅಡಿ (ಭೂಮಿ ಪ್ರದೇಶ) | ರೂ. 1,30,000/- (ರೂಪಾಯಿ ಒಂದು ಲಕ್ಷ ಮೂವತ್ತು ಸಾವಿರ ಮಾತ್ರ) | ರೂ. 13,00,000/- (ರೂಪಾಯಿ ಹದಿಮೂರು ಲಕ್ಷ ಮಾತ್ರ) | 29.07.2024 ರಂದು ಮಧ್ಯಾಹ್ನ 12:30 |

ಹರಾಜಾಗುತ್ತಿರುವ ಸುರಕ್ಷಿತ ಆಸ್ತಿಯ ವಿವರಣೆ: ಬಿ ವೆಂಕಟೇಶ್ ಮೂರ್ತಿ ಒಡೆತನದ ಆಸ್ತಿ:
ಸ್ಥಿರ ಆಸ್ತಿ ಅಳತೆ - 853 ಚದರ ಅಡಿ (ಭೂಮಿ ಪ್ರದೇಶ) ಮತ್ತು ಇದಕ್ಕೆ ಚಕ್ಕುಬಂದಿ ಈ ಕೆಳಗಿನಂತಿದೆ: ವಸತಿ ಪರಿವರ್ತನೆಯಾದ ಸೈಟ್ ಆಸ್ತಿಯ ಎಲ್ಲಾ ಭಾಗಗಳು ಸೈಟ್ ಹೊಂದಿರವ ಸಂಖ್ಯೆ. 181, ವಿಪಿ ಖಾತಾ ಸಂ. 293/181 ಮತ್ತು ಆಸ್ತಿ ಸಂಖ್ಯೆ. 150300401900320155, ಎಚ್.ಪಿ.ಎ ಯಿಂದ ಅನುಮೋದಿಸಲಾಗಿದೆ ಲೇಔಟ್‌ನನ್ನು ನಿಸರ್ಗ ವೈಟ್ ಕೌಂಟಿ ಎಂದು ಹೆಸರಿಸಲಾಗಿದೆ ಕೃಷಿಯೇತರ ವಸತಿ ಬಳಕೆಗಾಗಿ ಪರಿವರ್ತಿಸಲಾಗಿದೆ (ಅಧಿಕೃತ ಮೆಮೊರಾಂಡಮ್ ನಂ. ALN (H.K) CR 82/2010-11, ದಿನಾಂಕ 24-03-2011, ಉಪ ಆಯುಕ್ತರು, ಬೆಂಗಳೂರು ಜಿಲ್ಲೆಯಿಂದ ನೀಡಲಾಗಿದೆ) ಸರ್ವೆ 162/1 ರಲ್ಲಿ ಲಕ್ಕೊಂಡಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲೂಕು, ಬೆಂಗಳೂರು ಜಿಲ್ಲೆ ಹೊಸಕೋಟೆ ಯೋಜನಾ ಪ್ರಾಧಿಕಾರದ ಅನುಮೋದನೆಯೊಂದಿಗೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ 9.00ಮೀ, ಉತ್ತರದಿಂದ ದಕ್ಷಿಣಕ್ಕೆ: 8.73ಮೀ + 8.88ಮೀ/2, ಸಂಪೂರ್ಣವಾಗಿ 79.23 ಚದರ ಮೀಟರ್ ಅಥವಾ 853 ಚದರ ಅಡಿ ಅಳತೆ ಹೊಂದಿದ್ದು ಬೆಂಗಳೂರು ಜಿಲ್ಲೆ, ಹೊಸಕೋಟೆ ತಾಲೂಕಿನ ಕಸಬಾ ಹೋಬಳಿ, ಲಕ್ಕೊಂಡಹಳ್ಳಿ ಗ್ರಾಮದಲ್ಲಿ ಸ್ಥಿತವಾಗಿದೆ.
ಗಡಿರೇಖೆಗಳು:
ಪೂರ್ವ : 9 ಮೀಟರ್ ರಸ್ತೆ — ಪಶ್ಚಿಮ : ಸೈಟ್ ನಂ. 180
ಉತ್ತರ : ಸರ್ವೆ.ನಂ.162/2 — ದಕ್ಷಿಣ : ಸೈಟ್ ನಂ. 182

| | | | |
|---|---|---|---|
| ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು | ನಿಲ್ (ಶೂನ್ಯ) | ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು | ನಿಲ್ (ಶೂನ್ಯ) |
| ಬಿಡ್ ಸಲ್ಲಿಸಲು ಕೊನೆಯ ದಿನಾಂಕ | ಹರಾಜಿಗೆ 2 ಗಂಟೆಗಳ ಮೊದಲು ಅದೇ ದಿನ | ಬಿಡ್ ಹೆಚ್ಚಳ ಮೊತ್ತ : | ಬಿಡ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ |
| ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಹೆಸರಿನಲ್ಲಿ ಮಾಡಬೇಕು: | ಆರ್ಸಿಲ್-ಸಿಪಿಎಸ್-IV-ಟ್ರಸ್ಟ್ | ಪಾರ್ ನಲ್ಲಿ ಪಾವತಿಸಬೇಕು | |
| ಆರ್‌ಟಿಜಿಎಸ್ ವಿವರಗಳು | ಆರ್ಸಿಲ್-ಸಿಪಿಎಸ್-IV-ಟ್ರಸ್ಟ್, ಟ್ರಸ್ಟ್ ಖಾತೆ ಸಂಖ್ಯೆ - 57500001353101, ಹೆಚ್.ಡಿ.ಎಫ್.ಸಿ ಬ್ಯಾಂಕ್ ಲಿಮಿಟೆಡ್, ಶಾಖೆ: ಕಮಲಾ ಮಿಲ್, ಮುಂಬೈ, ಐಎಫ್‌ಎಸ್‌ಸಿ ಕೋಡ್: HDFC0000542 | | |
| ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ | ಹರಿ ಪ್ರಸಾದ್ - 0124-6910910; +91 70654 51024 (auctionhelpline@indiabulls.com), ಶಿವಶಂಕರ್ ಯುಬಿ - 8073722285; (shivshankar.ub@arcil.co.in), ಸತೀಶ್ ಆರ್- 9738141146; (satheesh.r@arcil.co.in), ಶೈಲೇಶ್ ಗಾಯಕ್ವಾಡ್ - 9867929121; (shailesh.gaikwad@arcil.co.in), ಮಹೇಶ್ ಬಂಗೇರ - 9004173256; (mahesh.bangera@arcil.co.in). | | |

ನಿಯಮಗಳು ಮತ್ತು ಷರತ್ತುಗಳು:
1. ಹರಾಜು ಮಾರಾಟವನ್ನು ವೆಬ್‌ಸೈಟ್ https://auction.arcil.co.in ಮೂಲಕ ಇ-ಹರಾಜು ಮೂಲಕ ಮತ್ತು ಬಿಡ್ ದಾಖಲೆಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ನಡೆಸಲಾಗುತ್ತಿದೆ.
2. ಅಧಿಕೃತ ಅಧಿಕಾರಿ (''ಎಓ'') / ಆರ್ಸಿಲ್ ಇಂಟರ್ನೆಟ್ ಸಂಪರ್ಕ, ನೆಟ್‌ವರ್ಕ್ ಸಮಸ್ಯೆಗಳು, ಸಿಸ್ಟಮ್ ಕ್ರ್ಯಾಶ್ ಡೌನ್, ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಜವಾಬ್ದಾರರಾಗಿರುವುದಿಲ್ಲ.
3. ಹರಾಜಿನ ಯಾವುದೇ ಹಂತದಲ್ಲಿ, ಎಓ ಬಿಡ್ / ಆಫರ್ ಅನ್ನು ಸ್ವೀಕರಿಸಬಹುದು / ತಿರಸ್ಕರಿಸಬಹುದು / ಮಾರ್ಪಡಿಸಬಹುದು / ರದ್ದು ಮಾಡಬಹುದು ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಹರಾಜನ್ನು ಮುಂದೂಡಬಹುದು.
4. ಯಶಸ್ವಿ ಖರೀದಿದಾರರು / ಬಿಡ್ದಾರರು ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಪಾವತಿಸಬೇಕಾದ ಶುಲ್ಕಗಳು, ಖರೀದಿಯ ಪರಿಗಣನೆಯ ಮೇಲೆ ಅನ್ವಯವಾಗುವ ಜಿಎಸ್ಟಿ, ಸ್ಟಾಂಪ್ ಸುಂಕ, ನೋಂದಣಿ ಶುಲ್ಕಗಳು ಇತ್ಯಾದಿಗಳನ್ನು ಸುರಕ್ಷಿತ ಆಸ್ತಿಯನ್ನು ರವಾನಿಸಲು / ತಲುಪಿಸಲು ಅನ್ವಯವಾಗುವ ಕಾನೂನಿನ ಪ್ರಕಾರ ಅವನ / ಅವಳ / ಅದರ ಪರವಾಗಿ ಪಾವತಿಸಬೇಕಾಗುತ್ತದೆ.
5. ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ ಸಲ್ಲಿಸುವ ಮೊದಲು ಸೂಕ್ಷ್ಮ ಶ್ರದ್ಧೆ, ಸುರಕ್ಷಿತ ಆಸ್ತಿಯ ಶೀರ್ಷಿಕೆ ಮತ್ತು ಸುರಕ್ಷಿತ ಆಸ್ತಿಗಳ ಮೇಲೆ ಪರಿಣಾಮ ಬೀರುವ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳು, ಶಾಸನಬದ್ಧ ಬಾಕಿಗಳು, ಇತ್ಯಾದಿಗಳ ಬಗ್ಗೆ ತಮ್ಮ ಸ್ವಂತ ಸ್ವತಂತ್ರ ವಿಚಾರಣೆಗಳನ್ನು ಮಾಡಬೇಕು. ಹರಾಜು ಜಾಹೀರಾತು ಮತ್ತು ಯಾವುದೇ ಬದ್ಧತೆ ಅಥವಾ ಯಾವುದೇ ಪ್ರಾತಿನಿಧ್ಯವನ್ನು ಆರ್ಸಿಲ್ ರೂಪಿಸುವುದಿಲ್ಲ. ಆರ್ಸಿಲ್ ನ ಅಧಿಕೃತ ಅಧಿಕಾರಿಯು ಯಾವುದೇ ಮೂರನೇ ವ್ಯಕ್ತಿಯ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.
6. ಪತ್ರಿಕೆಯಲ್ಲಿ ಪ್ರಕಟವಾದ ಹರಾಜು ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಅತ್ಯುತ್ತಮ ಮಾಹಿತಿಗೆ ಹೇಳಲಾಗಿದೆ; ಆದಾಗ್ಯೂ ಕೆಳಗೆ ಸಹಿ ಮಾಡಿದವರು ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ.
7. ಹೇಳಲಾದ ಬಾಕಿಗಳಿಗೆ ಜವಾಬ್ದಾರರಾಗಿರುವ ಸಾಲಗಾರ / ಖಾತರಿದಾರರು / ಅಡಮಾನದಾರರು, ಈ ಮಾರಾಟದ ನೋಟಿಸ್ ನನ್ನು ಭದ್ರತಾ ಆಸಕ್ತಿ (ಜಾರಿ) ನಿಯಮಗಳ 8 ಮತ್ತು 9 ರ ಅಡಿಯಲ್ಲಿ, ಮೇಲೆ ತಿಳಿಸಿದ ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ನೋಟಿಸ್ ಆಗಿ ಪರಿಗಣಿಸಬೇಕು.
8. ಈ ಸಂದರ್ಭದಲ್ಲಿ, ಇಲ್ಲಿ ನಿಗದಿಪಡಿಸಲಾದ ಹರಾಜು ಯಾವುದೇ ಕಾರಣಕ್ಕಾಗಿ ವಿಫಲವಾದರೆ, ನಿಯಮಗಳು ಮತ್ತು ಕಾಯಿದೆಯ ನಿಯಮ 8(5) ರ ನಿಬಂಧನೆಗಳ ಅಡಿಯಲ್ಲಿ ಯಾವುದೇ ಇತರ ವಿಧಾನಗಳ ಮೂಲಕ ಸುರಕ್ಷಿತ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಆರ್ಸಿಲ್ ಹೊಂದಿದೆ.

**ಎಸ್.ಡಿ/-**
**ಸ್ಥಳ : ಬೆಂಗಳೂರು** — **ಅಧಿಕೃತ ಅಧಿಕಾರಿ**
**ದಿನಾಂಕ : 21.06.2024** — **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್.**

## ಪ್ರತಿ ವರ್ಷ ನಾಲ್ಕು ದಿನ ತಂಗುವುದು ವಾಡಿಕೆ

# ರಾನಡೆ ಆಶ್ರಮದಲ್ಲಿ ಧ್ಯಾನಕ್ಕೆ ಕುಳಿತ ಮೋಹನ ಭಾಗವತ್

**ವಿಜಯಪುರ:** ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಅವರು ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ನಿಂಬಾಳ ಗ್ರಾಮದ ಬಳಿಯ ಶ್ರೀ ಗುರುದೇವ ರಾನಡೆ ಆಶ್ರಮದಲ್ಲಿ ಬೀಡು ಬಿಟ್ಟಿದ್ದು, ಅವರು ಜೂನ್ 24 ರಿಂದಲೇ ಯಾರ ಭೇಟಿಗೂ ಸಿಗದೇ ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಆರ್.ಎಸ್.ಎಸ್. ಸರಸಂಘಚಾಲಕ ಮೋಹನ ಭಾಗವತ್ ಅವರು ಪ್ರತಿ ವರ್ಷ ಜೂನ್ ಅಥವಾ ಜುಲೈ ತಿಂಗಳಲ್ಲಿ ನಿಂಬಾಳದ ಶ್ರೀ ಗುರುದೇವ ರಾನಡೆ ಆಶ್ರಮಕ್ಕೆ ಬಂದು ನಾಲ್ಕು ದಿನಗಳ ಕಾಲ ಇಲ್ಲಿ ತಂಗುವುದು ವಾಡಿಕೆ. ಹಲವಾರು ವರ್ಷಗಳಿಂದ ಶ್ರೀ ಗುರುದೇವ ರಾನಡೆ ಆಶ್ರಮಕ್ಕೆ ತಪ್ಪದೇ ಬರುವ ಇವರು ಸಂಘ, ಸಂಘಟನೆ, ರಾಜಕೀಯ ವಿಚಾರಗಳಿಂದ ದೂರವಿದ್ದು ಕೇವಲ ಧ್ಯಾನ್ಯದಲ್ಲೇ ಮಗ್ನರಾಗಿರುತ್ತಾರೆ.

### ಝೆಡ್ ಪ್ಲಸ್ ಭದ್ರತೆ

ಝೆಡ್ ಪ್ಲಸ್ ಭದ್ರತೆಯಲ್ಲಿ ಆಶ್ರಮದ ಕೆಲವೇ ಜನರ ಜತೆಗಿರುವ ಮೋಹನ್ ಭಾಗವತ್ ಅವರ ಭೇಟಿಗೆ ಯಾರಿಗೂ ಅವಕಾಶವಿಲ್ಲ. ರಾನಡೆ ಆಶ್ರಮದ ಹೊರಗಡೆ ಜಿಲ್ಲಾ ಪೊಲೀಸರಿಂದ ಭದ್ರತೆ ಒದಗಿಸಲಾಗಿದೆ. ಗುರುವಾರ ಬೆಳಿಗ್ಗೆ ರಾನಡೆ ಆಶ್ರಮದಿಂದ ಹೊರಟು ಚಡಚಣ ತಾಲೂಕಿನ ಇಂಚಗೇರಿ ಮಠಕ್ಕೆ ಭೇಟಿ ನೀಡಲಿದ್ದಾರೆ. ನಂತರ ದೇವರನಿಂಬ ರಗಿ ಗ್ರಾಮದ ಮಠಕ್ಕೆ ಭೇಟಿ ನೀಡಿ ಅಲ್ಲಿಂದ ಮಹಾರಾಷ್ಟ್ರದ ಉಮದಿಗೆ ತೆರಳುತ್ತಾರೆ ಎಂದು ಮೂಲಗಳು ತಿಳಿಸಿವೆ.

# ನೇರ ಫೋನ್ ಇನ್ ಕಾರ್ಯಕ್ರಮ

**ಬೆಂಗಳೂರು:** ಬೆಂಗಳೂರು ಜಲಮಂಡಳಿಯ ವತಿಯಿಂದ ಜೂ.28ರಂದು ಬೆಳಗ್ಗೆ 9:30ರಿಂದ 10:30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಜಲಮಂಡಳಿ ಅಧ್ಯಕ್ಷ ಡಾ. ವಿ.ರಾಮ್ ಪ್ರಸಾತ್ ಮನೋಹರ್ ಭಾಗವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ, ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 080-22945119 ಮತ್ತು 080-22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್‌ಆರ್ ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

## PUBLIC NOTICE

This is to inform the public that my client, **Smt. Marie Padival,** W/o. Anil Padival, aged about 58 years, residing at Flat B, Sona Gardens, Richmond Town, Alexandria Street, Bengaluru-560 025 has lost in transit on 24.06.2024, between her residence and her bank, Karnataka Bank, Ashok Nafga Branch, Bengaluru, while approaching her bankers with the document between 10.30 Am and 11.30 Noon, One Original Sale Deeds bearing, **8553/95-96, dated 18.11.1995 registered on 20.11.1995,** registered vide Book-I, Volume 1229, in pages 215 to 218, before the Senior Sub-Registrar, K.R. Puram, Bengaluru for the property bearing **Site No. 6,** House List Khatha No. 178-1, situated at **Horamavu Village, K.R. Puram Hobli, Bangalore South Taluk, Bangalore,** measuring **East to West 40 Feet, North to South 60 Feet** and bounded on **East by:** House Site No. 7 and 7/1, **North by:** Private Property, **West by:** House Site No. 5 and **South by:** Road 30 Feet wide. The said Lost report has been registered before the Karnataka Police, Bengaluru City, vide Lost Report No. 1115795/2024, dated 26.06.2024.

The general Public are hereby notified that in case the said lost document have been found by any one, may contact and return the said documents to the following address ***within 7 days:***

**Sd/-**
**C. Mudduraj, Advocate,**
**M/s. Paraclitus Lexicons,**
No. 1371, 1st Floor, 12th Cross, 6th Main, Mahalakshmipura, Bengaluru-560086.
PH: 94485 32177 / 95389 06689.

## PUBLIC NOTICE

Public are informed that, my client Smt. G.M. Vanaja W/o. G. Krishnamurthy, had lost the Original document of 1). Sale Deed dated 09/04/1970 executed by City Improvement Trust Board, Bangalore in favour of Sri. Kalaiah vide doc. No. 433/1970-71, 2). Sale Deed dated 8/5/2006 executed by Kalaiah in favour of Pushpa G. vide doc. No. 610/2006-07. 3). Sale Deed dated 12/4/2010 executed by Pushpa G. in favour of G. Krishnamurthy vide doc. No. 57/2010-11, 4). MODT dated 4/6/2010 executed by Krishnamurthy in favour of Cauvery Kalpathrau Grameena Bank vide doc. No. 367/2010-11 and 5) Discharge Deed dated 3/8/2017 executed by Kaveri Grameena Bank Ltd,. in favour of G. Krishnamurthy vide doc. No. 3943/2017-18. If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.
**SCHEDULE** : All that piece and parcel of immovable property bearing Site No38,(old no.638/38) formed in New Municipal No.38th, measuring East to West:35-0 feet North to South 50-6 feet, situated at 6 th Main Road, Vijayanagar, PID No.33-8-38, and Bounded on ; East By Site No.639, West By Site No.637, North By Road, South By Site No.633.

**KSR Associates**
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

## ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

**ಈ ಕಾರಣದಿಂದ:**

**ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **01.11.2021** ರಂದು ಕರೆದು ಸಾಲಗಾರ **ಎ.ವಿ. ಸೆಂಥಿಲ್‌ವೇಲ್, ಕಸ್ತೂರಿ ಸೆಂಥಿಲ್‌ವೇಲ್ ಮತ್ತು ರಘು ನಂದನ್ ನೊರಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ರೂ. **ರೂ. 49,61,529.40 (ರೂಪಾಯಿ ನಲ್ವತ್ತ ಒಂಬತ್ತು ಲಕ್ಷದ ಅರುವತ್ತ ಒಂದು ಸಾವಿರದ ಐನೂರ ಇಪ್ಪತ್ತ ಒಂಬತ್ತು ಮತ್ತು ಪೈಸೆ ನಲ್ವತ್ತು ಮಾತ್ರ)** ಸಾಲ ಖಾತೆ ನಂ. **HHLBAG00379489** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **18.10.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**ನ ಬಾಕಿ ಇರುವ ಮೊತ್ತ **ರೂ. 49,61,529.40 (ರೂಪಾಯಿ ನಲ್ವತ್ತ ಒಂಬತ್ತು ಲಕ್ಷದ ಅರುವತ್ತ ಒಂದು ಸಾವಿರದ ಐನೂರ ಇಪ್ಪತ್ತ ಒಂಬತ್ತು ಮತ್ತು ಪೈಸೆ ನಲ್ವತ್ತು ಮಾತ್ರ) 18.10.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

### ಸ್ಥಿರಾಸ್ತಿಯ ವರ್ಣನೆ

ಸರ್ವೆ ನಂ. 11/7 ಮತ್ತು 11/9, ಚಿಕ್ಕನಾಯಕನಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು -560035 ಕರ್ನಾಟಕ ಇಲ್ಲಿ ''ಎಎಸ್ಆರ್ ಒಕ್ಟೇವ್''ಎಂದು ತಿಳಿಯಲಾಗುವ ಬಹುಮಹಡಿ ಕಟ್ಟಡದಲ್ಲಿ 4ನೇ ಮಹಡಿಯಲ್ಲಿ 1149 ಚ.ಅಡಿ ಸೂಪರ್ ಬಿಲ್ಟ್ ಅಪ್ ಏರಿಯಾ ಹೊಂದಿರುವ ಎರಡು ಬೆಡ್‌ರೂಮುಗಳ ನಂ.403ನ್ನು ಹೊಂದಿರುವ ಫ್ಲ್ಯಾಟ್‌ನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, ಒಂದು ಕಾರ್ ಪಾರ್ಕಿಂಗ್ ಜಾಗದ ಜೊತೆಗೆ ಕೆಳಗಿನ ಜಮೀನಿನಲ್ಲಿ 468 ಚ.ಅಡಿ ಅವಿಭಜಿತ ಆಸಕ್ತಿ ಮತ್ತು ಅಲ್ಲಿ ಒಳಗೊಂಡಿರುವ ಪ್ಯಾಸೇಜ್, ಲಾಬಿಗಳು, ಸ್ಟೇರ್‌ಕೇಸ್ ಮುಂತಾದ ಸಾಮಾನ್ಯ ಜಾಗದಲ್ಲಿ ಪ್ರಮಾಣಾನುಸಾರ ಪಾಲಿನೊಂದಿಗೆ ಮತ್ತು ಅದು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:

**ದಿನಾಂಕ: 22.06.2024** — **ಅಧಿಕಾರವಿರುವ ಅಧಿಕಾರಿ**
**ಸ್ಥಳ : ಬೆಂಗಳೂರು** — **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**




# ಎರಡನೇ ಸ್ಥಾನಕ್ಕೆ ಕುಸಿದ ಸೂರ್ಯ

**ದುಬೈ:** ಆಸ್ಟ್ರೇಲಿಯಾದ ಆರಂಭಿಕ ಟ್ರಾವಿಸ್ ಹೆಡ್ ಅವರು ಭಾರತದ ಸೂರ್ಯಕುಮಾರ್ ಯಾದವ್ ಅವರನ್ನು ಹಿಂದಿಕ್ಕಿದ್ದು, ಐಸಿಸಿ ಟಿ20 ರ‍್ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಭಾರತದ ಮಧ್ಯಮ ಕ್ರಮಾಂಕದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಕಳೆದ ವರ್ಷದ ಡಿಸೆಂಬರ್‌ನಿಂದ ಈವರೆಗೆ ಅಗ್ರಸ್ಥಾನ ಕಾಪಾಡಿಕೊಂಡು ಬಂದಿದ್ದರು.

ಆದರೆ ಟಿ20 ವಿಶ್ವಕಪ್‌ನಲ್ಲಿ ತೋರಿದ ಉತ್ತಮ ಸಾಧನೆಯ ಪರಿಣಾಮ ಹೆಡ್ ಅಗ್ರಕ್ರಮಾಂಕಕ್ಕೆ ಏರಿದ್ದಾರೆ. ಆಸ್ಟ್ರೇಲಿಯಾದ ಹೆಡ್ 844 ಅಂಕಗಳನ್ನು

ಹೊಂದಿದ್ದು, ಸೂರ್ಯಕುಮಾರ್ 842 ಅಂಕಗಳನ್ನು ಹೊಂದಿದ್ದಾರೆ. ಹೆಡ್ ಈ ಟೂರ್ನಿಯಲ್ಲಿ ಭಾರತದ ವಿರುದ್ಧ ಸೂಪರ್ ಎಂಟರ ಪಂದ್ಯದಲ್ಲಿ ಗಳಿಸಿದ 76 ರನ್ ಸೇರಿದಂತೆ ಎರಡು ಅರ್ಧಶತಕಗಳೊಂದಿಗೆ 255 ರನ್ ಪೇರಿಸಿದ್ದಾರೆ. ಆದರೆ ಅವರ ತಂಡ ಹೊರಬಿದ್ದಿರುವ ಕಾರಣ, ಸೂರ್ಯ ಅವರು ಮತ್ತೆ ಅಗ್ರಸ್ಥಾನಕ್ಕೇರುವ ಅವಕಾಶ ಹೊಂದಿದ್ದಾರೆ.

ಇಂಗ್ಲೆಂಡ್‌ನ ಫಿಲ್ ಸಾಲ್ಟ್ (816), ಪಾಕಿಸ್ತಾನದ ಬಾಬರ್ ಆಜಂ (755) ಮತ್ತು ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ (746) ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಸ್ಥಾನದಲ್ಲಿದ್ದಾರೆ. ಜೋಸ್ ಬಟ್ಲರ್ ಮತ್ತು ಯಶಸ್ವಿ ಜೈಸ್ವಾಲ್ ನಂತರ ಸ್ಥಾನಗಳಲ್ಲಿದ್ದಾರೆ. ಜಾನ್ಸನ್ (ವೆಸ್ಟ್ ಇಂಡೀಸ್) ಹತ್ತನೇ ಸ್ಥಾನದಲ್ಲಿದ್ದಾರೆ. ಮೊದಲ ಸಲ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ.

ಆಫ್ಘನ್ ತಂಡದ ಐತಿಹಾಸಿಕ ಸಾಧನೆಯು ಶ್ಲಾಘನೀಯವಾಗಿದೆ. ಬಲಿಷ್ಠ ತಂಡಗಳಾದ ನ್ಯೂಜಿಲ್ಯಾಂಡ್ ಆಸ್ಟ್ರೇಲಿಯಾವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿರುವ ನಿಮ್ಮ ಗೆಲುವಿನ ಹಾದಿ ತುಂಬಾ ಅದ್ಭುತವಾಗಿದೆ. ಇಂದಿನ ಗೆಲುವು ನಿಮ್ಮ ಕಠಿಣ ಪರಿಶ್ರಮ ಮತ್ತು ಸಂಕಲ್ಪಕ್ಕೆ ಸಾಕ್ಷಿಯಾಗಿದೆ. ನಿಮ್ಮ ಪ್ರಗತಿಯ ಬಗ್ಗೆ ಹೆಮ್ಮೆ ಇದೆ.

**- ಸಚಿನ್ ತೆಂಡುಲ್ಕರ್**, ಮಾಜಿ ಕ್ರಿಕೆಟಿಗ

## ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ರಿಲಯನ್ಸ್ ಮನಿ ಹೌಸ್

**ದೆಹಲಿ:** ಈ ಬಾರಿಯ ಒಲಿಂಪಿಕ್ಸ್ ಇನ್ನೇನು ಪ್ರಾರಂಭಿಕ ಹಂತದಲ್ಲಿ ಇದ್ದು, ಆ ನಿಟ್ಟಿನಲ್ಲಿ ರಿಲಯನ್ಸ್ ಫೌಂಡೇಶನ್ ಮಹತ್ವದ ನಿರ್ಧಾರ ಕೈಗೊಂಡಿದೆ. ಭಾರತೀಯ ಒಲಿಂಪಿಕ್ ಅಸೋಸಿಯೇಷನ್ ಸಹಭಾಗಿತ್ವದಲ್ಲಿ, ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕ್ರೀಡಾಕೂಟಕ್ಕಾಗಿ ದೇಶದ ಮೊದಲ ಕಂಟ್ರಿ ಹೌಸ್ ಅನ್ನು ನಿರ್ಮಿಸಲಾಗಿದ್ದು, ಅದನ್ನು ಇಂಡಿಯಾ ಹೌಸ್ ಎಂದು ಕರೆಯಲಾಗುತ್ತದೆ. ಈ ಇಂಡಿಯಾ ಹೌಸ್ ಅನ್ನು ಪ್ಯಾರಿಸ್‌ನಲ್ಲಿ ಪ್ರತಿಷ್ಠಿತ ಪಾರ್ಕ್ ಡೆ ಲಾ ವಿಲೆಟ್‌ನಲ್ಲಿ ನಿರ್ಮಿಸಲಾಗಿದೆ. ಇದನ್ನು ಹೊರತುಪಡಿಸಿ, ನೆದರ್ಲ್ಯಾಂಡ್ಸ್, ಕೆನಡಾ, ಬ್ರೆಜಿಲ್ ಮತ್ತು ಆತಿಥೇಯ ಫ್ರಾನ್ಸ್ ಸೇರಿದಂತೆ 14 ದೇಶಗಳ ದೇಶದ ಮನೆಗಳನ್ನು ಹೊಂದಿರುತ್ತದೆ.

ತಂಡಕ್ಕೆ ಹರ್ಮನ್‌ಪ್ರೀತ್ ಸಿಂಗ್ ಸಾರಥಿ | ಪ್ಯಾರಿಸ್‌ಗೆ 16 ಜನರ ತಂಡ

# ಒಲಿಂಪಿಕ್ಸ್‌ಗೆ ಹಾಕಿ ತಂಡ ರೆಡಿ

**ದೆಹಲಿ:** ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿರುವ ಭಾರತದ ಹಾಕಿ ತಂಡ ಬುಧವಾರ ಘೋಷಿಸಲಾಗಿದ್ದು, ತಂಡಕ್ಕೆ ಹರ್ಮನ್‌ಪ್ರೀತ್ ಸಿಂಗ್ ಸಾರಥಿಯಾಗಲಿದ್ದು, ಉಪನಾಯಕನಾಗಿ ಹಾರ್ದಿಕ್ ಸಿಂಗ್ ಆಯ್ಕೆಯಾಗಿದ್ದಾರೆ.

ಜುಲೈನಿಂದ ಆರಂಭವಾಗಲಿರುವ ಒಲಿಂಪಿಕ್ಸ್‌ನಲ್ಲಿ ಭಾರತದ 16 ಜನರ ಹಾಕಿ ತಂಡವನ್ನು. ಹಿರಿಯರು ಹಾಗೂ ಕಿರಿಯರನ್ನೊಳಗೊಂಡ ತಂಡ ಇದಾಗಿದೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಕಂಚಿನ ಪದಕ ಗೆದ್ದುಕೊಂಡಿತ್ತು. ಈ ಬಾರಿ ಭಾರತ ತಂಡವು ಪೂಲ್ ಬಿ ಪಟ್ಟಿಯಲ್ಲಿದ್ದು , ಹಾಲಿ ಚಾಂಪಿಯನ್ ಬೆಲ್ಜಿಯಂ, ರನ್ನರ್‌ಅಪ್ ಆಸ್ಟ್ರೇಲಿಯಾ, ಅರ್ಜೆಂಟೀನಾ, ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ಉಳಿದ ತಂಡಗಳಾಗಿವೆ. ತಂಡ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಹಾಗೂ ಮಿಡಲ್‌ಫೀಲ್ಡರ್ ಮನ್‌ಪ್ರೀತ್ ಸಿಂಗ್ ಅವರಿಗೆ ಇದು ನಾಲ್ಕನೇ ಒಲಿಂಪಿಕ್ ಆಗಿದ್ದು, ನಾಯಕ ಹರ್ಮನ್‌ಪ್ರೀತ್ ಅವರು ಒಟ್ಟು ಮೂರು ಬಾರಿ ಒಲಿಂಪಿಕ್ಸ್‌ನಲ್ಲಿ ಆಡಿದ್ದಾರೆ. ಉಳಿದಂತೆ ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ರಾಜ್ ಕುಮಾರ್ ಪಾಲ್, ಅಭಿಷೇಕ್ ಹಾಗೂ ಸುಖಜೀತ್ ಸಿಂಗ್ ಅವರು ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಆಡಲಿದ್ದಾರೆ.

**ಭಾರತ ತಂಡದ ಮೇಲೆ ನಿರೀಕ್ಷೆಯ ಭಾರ:** ಕಳೆದ ಒಲಿಂಪಿಕ್‌ನಲ್ಲಿ ಭಾರತದ ಹಾಕಿ ತಂಡ 41 ವರ್ಷಗಳ ಬಳಿಕ ಪದಕ ಗೆದ್ದಿತ್ತು. ಇದಾದ ನಂತರ ತಂಡದ ಮೇಲಿನ ನಿರೀಕ್ಷೆಯ ಭಾರತ ಹೆಚ್ಚಾಗಿದೆ. ಭಾರತದ ಡಿಫೆಂಡರ್ ರುಪೀಂದ್ರಪಾಲ್ ಸಿಂಗ್ ಹಾಗೂ ವೀರೇಂದ್ರ ಲಾಕ್ರಾ ಅವರು ನಿವೃತ್ತರಾಗಿದ್ದು, ಸುರೇಂದರ್ ಕುಮಾರ್ ಅವರು ತಂಡದಲ್ಲಿ ಸ್ಥಾನ ಪಡೆದಿಲ್ಲ.

ಭಾರತ ತಂಡದ ಆಯ್ಕೆ ಬಹಳ ಕಷ್ಟಕರವಾಗಿತ್ತು. ಪ್ಯಾರಿಸ್‌ನಲ್ಲಿ ಭಾರತ ತಂಡದ ಪರ ಆಡುವ ಪ್ರತಿಯೊಬ್ಬರೂ ಅತ್ಯುತ್ತಮ ಆಯ್ಕೆ ಎಂದೆನಿಸಿಕೊಳ್ಳಲಿದ್ದಾರೆ. ತಂಡಕ್ಕೆ ಆಯ್ಕೆಯಾದ ಪ್ರತಿಯೊಬ್ಬ ಆಟಗಾರನೂ ಕೌಶಲ, ಬದ್ಧತೆ ಹಾಗೂ ನಮ್ಮ ಕಠಿಣ ತರಬೇತಿ ಪಡೆದ ಆಟಗಾರರು ಮಿಂಚಲಿದ್ದಾರೆ. ಹೀಗಾಗಿ ಯಾವುದೇ ರೀತಿಯ ಆಟದ ಶೈಲಿಗೂ ಸಾಮರ್ಥರಿದ್ದಾರೆ. ಅದು ಖಂಡಿತಾ ಸಾಧ್ಯವಾಗಲಿದೆ.

**-ಕ್ರೇಗ್ ಫುಲ್ಟನ್**, ತಂಡದ ಮುಖ್ಯ ಕೋಚ್

### ಭಾರತದ ವೇಳಾ ಪಟ್ಟಿ

ಭಾರತ ಹಾಗೂ ನ್ಯೂಜಿಲೆಂಡ್ ಜುಲೈ 27
ಭಾರತ ಹಾಗೂ ಅರ್ಜೆಂಟೀನಾ ಜುಲೈ 29
ಭಾರತ ಹಾಗೂ ಐರ್ಲೆಂಡ್ ಜುಲೈ 30
ಭಾರತ ಹಾಗೂ ಬೆಲ್ಜಿಯಂ ಆಗಸ್ಟ್ 1
ಭಾರತ ಹಾಗೂ ಆಸ್ಟ್ರೇಲಿಯಾ ಆಗಸ್ಟ್ 2

ಭಾರತದ ಈ ವರೆಗಿನ ಸಾಧನೆ
ಒಲಿಂಪಿಕ್ಸ್‌ನಲ್ಲಿ ಭಾರತ 12 ಪದಕಗಳನ್ನು ಗೆದ್ದಿದ್ದು, ಇದರಲ್ಲಿ ಎಂಟು ಚಿನ್ನ, ಒಂದು ಬೆಳ್ಳಿ ಹಾಗೂ ಮೂರು ಕಂಚಿನ ಪದಕಗಳನ್ನು ಒಳಗೊಂಡಿದೆ.

### ಭಾರತ ತಂಡ

**ಗೋಲ್‌ಕೀಪರ್:** ಶ್ರೀಜೇಶ್ ಪರಟ್ಟು ರವೀಂದ್ರನ್
**ಡಿಫೆಂಡರ್‌ಗಳು:** ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೊಹಿದಾಸ್, ಹರ್ಮನ್‌ಪ್ರೀತ್ ಸಿಂಗ್, ಸುಮಿತ್, ಸಂಜಯ್
**ಮಿಡಲ್‌ಫೀಲ್ಡರ್‌ಗಳು:** ರಾಜಕುಮಾರ್ ಪಾಲ್, ಶಮ್ಶೇರ್ ಸಿಂಗ್, ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್
**ಫಾರ್ವರ್ಡರ್:** ಅಭಿಷೇಕ್, ಸುಖಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಮನ್‌ದೀಪ್ ಸಿಂಗ್, ಗುರ್ಜಂತ್ ಸಿಂಗ್
**ಬದಲಿ ಆಟಗಾರರು:** ನೀಲಕಂಠ ಶರ್ಮ, ಜುಗರಾಜ್ ಸಿಂಗ್, ಕೃಷ್ಣ ಬಹದ್ದೂರ್ ಪಾಠಕ್.

ಅದಲ್ಲದೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆಡಿದ್ದ ನೀಲಕಂಠ ಶರ್ಮ ಅವರನ್ನು ಈ ಬಾರಿ ಬದಲಿ ಆಟಗಾರರ ಪಟ್ಟಿಯಲ್ಲಿ ಸೇರಿಸಲಾಗಿದೆ. ಹೀಗಾಗಿ ಹೊಸಮುಖಗಳೊಂದಿಗೆ ಭಾರತ ಪ್ಯಾರಿಸ್‌ಗೆ ತಲುಪುತ್ತಿದ್ದು, ನಿರೀಕ್ಷೆ ಹೆಚ್ಚಿಸಿವೆ.

ಪ್ಯಾರಾ ಬ್ಯಾಡ್ಮಿಂಟನ್ ರ‍್ಯಾಂಕಿಂಗ್ ಬಿಡುಗಡೆ | ಇತಿಹಾಸ ನಿರ್ಮಿಸಿದ ಕನ್ನಡಿಗ

# ಸುಹಾಸ್ ಈಗ ವಿಶ್ವ ನಂ.1 ಆಟಗಾರ

**ದೆಹಲಿ:** ಟೋಕಿಯೊ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಕನ್ನಡಿಗ ಸುಹಾಸ್ ಯತಿರಾಜ್ ಪ್ಯಾರಾ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್‌ನ ಎಸ್‌ಎಲ್ 4 ವಿಭಾಗದಲ್ಲಿ ವಿಶ್ವ ನಂ.1 ಸ್ಥಾನಕ್ಕೇರಿದ್ದಾರೆ.

ಈ ಬಗ್ಗೆ ಸುಹಾಸ್ ತಮ್ಮ ಅಧಿಕೃತ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಬುಧವಾರ ಹೊಸದಾಗಿ ಪ್ರಕಟಗೊಂಡ ರ‍್ಯಾಂಕಿಂಗ್ ಪಟ್ಟಿಯಲ್ಲಿ ಸುಹಾಸ್ ಒಂದು ಸ್ಥಾನ ಏರಿಕೆ ಕಾಣುವ ಮೂಲಕ ಈ ಹಿಂದೆ ಅಗ್ರಸ್ಥಾನದಲ್ಲಿದ್ದ ಫ್ರಾನ್ಸ್‌ನ ಲುಕಾಸ್ ಮಜುರ್‌ರನ್ನು ಹಿಂದಿಕ್ಕಿದ್ದಾರೆ. ಈ ಹಿಂದೆ ಸುಹಾಸ್ ಥಾಯ್ಲೆಂಡ್‌ನಲ್ಲಿ ನಡೆದಿದ್ದ ಪ್ಯಾರಾ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದ ಜಯಿಸಿದ್ದರು. ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ 2 ಬಾರಿ ಸ್ವರ್ಣ ಪದಕ ಗೆದ್ದಿರುವ ಅವರು ಮುಂದಿನ ತಿಂಗಳು ನಡೆಯುವ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ಈ ಬಗ್ಗೆ ಸುಹಾಸ್ ಯತಿರಾಜ್ ಸಂತಸ ವ್ಯಕ್ತಪಡಿಸಿದ್ದು, ಅಂತಿಮವಾಗಿ ವಿಶ್ವನಂಬರ್

1 ಈ ವಿಚಾರವನ್ನು ಹಂಚಿಕೊಳ್ಳಲು ಸಂತೋಷವಾಗಿದೆ. ಪುರುಷರ ಸಿಂಗಲ್ಸ್ ವಿಭಾಗಕ್ಕೆ ಘೋಷಿಸಲಾದ ಇತ್ತೀಚಿನ ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ ಪ್ಯಾರಾ ಬ್ಯಾಡ್ಮಿಂಟನ್ ಶ್ರೇಯಾಂಕದಲ್ಲಿ, ನಾನು ವಿಶ್ವದ ಅಗ್ರ ಶ್ರೇಯಾಂಕವನ್ನು ಪಡೆದುಕೊಂಡಿದ್ದೇನೆ. ಮೊದಲ ಬಾರಿಗೆ ಈ ಸಾಧನೆ ಮಾಡಿದ್ದು, ಫ್ರಾನ್ಸ್‌ನ ಲೂಕಾಸ್ ಮಜೂರ್ ಅವರ ಸ್ಥಾನವನ್ನು ವಶಪಡಿಸಿಕೊಂಡಿದ್ದೇನೆ. ನಿಮ್ಮ ಆಶೀರ್ವಾದ ಮತ್ತು ಹಾರೈಕೆ ಹೀಗೆ ಇರಲಿ. ಜೈ ಹಿಂದ್ ಎಂದು ಸುಹಾಸ್ ಯತಿರಾಜ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

### ಸುಹಾಸ್ ಯತಿರಾಜ್ ಐಎಎಸ್ ಅಧಿಕಾರಿ

ಉತ್ತರ ಪ್ರದೇಶದ ಗೌತಮ್ ಬುದ್ಧ ಜಿಲ್ಲಾಧಿಕಾರಿಯಾಗಿರುವ ಸುಹಾಸ್ ಹಾಸನ ಮೂಲದ ಐಎಎಸ್ ಅಧಿಕಾರಿಯಾಗಿದ್ದಾರೆ. ಈ ಹಿಂದೆ ಎಸ್ ಎಲ್ 4 ಬ್ಯಾಡ್ಮಿಂಟನ್ ವಿಭಾಗದಲ್ಲಿ ಅವರು ಟೋಕಿಯೊ ಪ್ಯಾರಾ ಒಲಿಂಪಿಕ್ಸ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಆ ಮೂಲಕ ಪ್ಯಾರಾಲಿಂಪಿಕ್ಸ್ ಪದಕ ಗೆದ್ದ ಮೊದಲ ಐಎಎಸ್ ಅಧಿಕಾರಿ ಎಂಬ ಹಿರಿಮೆಗೆ ಪಾತ್ರರಾಗಿದ್ದರು. 2007ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಸುಹಾಸ್, ದುರ್ಬಲ ಕಾಲನ್ನು ಹೊಂದಿದ್ದಾರೆ. ಕಾಲಿನಲ್ಲಿ ತೀವ್ರ ಬಲಹೀನತೆಯಿದ್ದರೆ ಅಂತಹವರನ್ನು ಎಸ್‌ಎಲ್ 4 ವಿಭಾಗಕ್ಕೆ ಸೇರಿಸಲಾಗುತ್ತದೆ.

# ಮಹಿಳಾ ಏಷ್ಯಾಕಪ್ ವೇಳಾಪಟ್ಟಿ ಪ್ರಕಟ

**ದೆಹಲಿ:** ಮಹಿಳಾ ಟಿ20 ಏಷ್ಯಾಕಪ್ 2024ರ ವೇಳಾಪಟ್ಟಿಯನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮಂಗಳವಾರ ಶ್ರೀಲಂಕಾದಲ್ಲಿ ಬಿಡುಗಡೆ ಮಾಡಿದ್ದು, ಜುಲೈ 19ರಂದು ಟಿ20 ಏಷ್ಯಾಕಪ್ 2024 ಟೂರ್ನಿ ಆರಂಭವಾಗಲಿದೆ.

ಮೊದಲ ಪಂದ್ಯದಲ್ಲಿ ನೇಪಾಳ ತಂಡ ಯುಎಇ ತಂಡವನ್ನು ಎದುರಿಸಲಿದ್ದು, ಅದೇ ದಿನ ಭಾರತ ತಂಡ ಪಾಕಿಸ್ತಾನ ವಿರುದ್ಧ ಕಣಕ್ಕಿಳಿಯಲಿದೆ. ಜುಲೈ 28ರ ವರೆಗೆ ನಡೆಯಲಿರುವ ಈ ಟೂರ್ನಿಯಲ್ಲಿ ಒಟ್ಟು ಎಂಟು ತಂಡಗಳು ಸೆಣಸಾಟ ನಡೆಸಲಿವೆ. ಈ ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದ್ದು. ಆಯಾ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ 2 ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಇನ್ನೂ ಎ ಗುಂಪಿನಲ್ಲಿ ಭಾರತ, ಪಾಕಿಸ್ತಾನ, ಯುಎಇ ಮತ್ತು ನೇಪಾಳ ತಂಡಗಳಿದ್ದು, ಬಿ ಗುಂಪಿನಲ್ಲಿ ಶ್ರೀಲಂಕಾ, ಬಾಂಗ್ಲಾದೇಶ, ಥಾಯ್ಲೆಂಡ್ ಮತ್ತು ಮಲೇಷ್ಯಾ ತಂಡಗಳಿವೆ. ಈ ಟೂರ್ನಿಯ ಎಲ್ಲಾ ಪಂದ್ಯಗಳು ಶ್ರೀಲಂಕಾದ ಡಂಬುಲ್ಲಾದಲ್ಲಿ ನಡೆಯಲಿದೆ.

**ವೇಳಾಪಟ್ಟಿ: ಜುಲೈ 19:** ಯುಎಇ v/s ನೇಪಾಳ, ಭಾರತ v/s ಪಾಕಿಸ್ತಾನ, **ಜುಲೈ 20:** ಮಲೇಷ್ಯಾ v/s ಥಾಯ್ಲೆಂಡ್, ಶ್ರೀಲಂಕಾ v/s ಬಾಂಗ್ಲಾದೇಶ ಜುಲೈ, **ಜುಲೈ 21:** ಭಾರತ v/s ಯುಎಇ, ಪಾಕಿಸ್ತಾನ v/s ನೇಪಾಳ, **ಜುಲೈ 22:** ಶ್ರೀಲಂಕಾ v/s ಮಲೇಷ್ಯಾ, ಬಾಂಗ್ಲಾದೇಶ v/s ಥಾಯ್ಲೆಂಡ್, **ಜುಲೈ 23:** ಪಾಕಿಸ್ತಾನ v/s ಯುಎಇ, ಭಾರತ v/s ನೇಪಾಳ, **ಜುಲೈ 24:** ಬಾಂಗ್ಲಾದೇಶ v/s ಮಲೇಷ್ಯಾ, ಶ್ರೀಲಂಕಾ v/s ಥೈಲ್ಯಾಂಡ್, **ಜುಲೈ 26:** ಸೆಮಿಫೈನಲ್ 1, ಸೆಮಿಫೈನಲ್ 2, **ಜುಲೈ 28:** ಫೈನಲ್

# ಟಿ20 ಚಾಂಪಿಯನ್ ಆಗಲು ನಾಲ್ಕು ತಂಡಗಳ ಕಸರತ್ತು

**ಚುಟುಕು ವಿಶ್ವಕಪ್ ಇದೀಗ ಮುಕ್ತಾಯ ಹಂತಕ್ಕೆ ಬಂದಿದೆ. ಲೀಗ್, ಸೂಪರ್ 8 ಪಂದ್ಯಗಳಲ್ಲಿ ಗೆದ್ದು ಬೀಗಿರುವ ಭಾರತ ಸೇರು ನಾಲ್ಕು ತಂಡಗಳ ಹಣೆಬರಹ ಸೆಮಿಸ್‌ನಲ್ಲಿ ತಿಳಿಯಲಿದೆ. ಟೂರ್ನಿಯುದ್ದಕ್ಕೂ ಮಾಡಿರುವ ತಪ್ಪುಗಳನ್ನು ತಿದ್ದಿಕೊಂಡು ಎರಡು ಹೆಜ್ಜೆ ದಾಟಿದರೆ, ಕಪ್! ಎಡವಿದರೆ ಮನೆಗೆ. ನಾಲ್ಕೂ ತಂಡಗಳಲ್ಲಿ ಬಲ ಮತ್ತು ದೌರ್ಬಲ್ಯಗಳು ಕಾಣುತ್ತಿವೆ. ಹಾಗಿದ್ದರೆ, ಯಾರಾಗಲಿದ್ದಾರೆ ವಿಶ್ವಚಾಂಪಿಯನ್?**

**ಬೆಂಗಳೂರು:** ವಿಶ್ವಕಪ್‌ನ ಸೂಪರ್ 8 ಹಂತದ ಪಂದ್ಯಗಳು ಮುಕ್ತಾಯಗೊಂಡಿದ್ದು, ನಾಲ್ಕು ತಂಡಗಳು ಸೆಮಿಫೈನಲ್‌ಗೆ ಲಗ್ಗೆ ಇಟ್ಟಿವೆ. ವಿಶ್ವಕಪ್‌ನ ಲೀಗ್ ಹಂತದಲ್ಲಿ ತೀವ್ರ ಫೈಟ್‌ಗಳ ನಂತರ ಸೂಪರ್ 8 ಹಂತಕ್ಕೆ ಸೂಪರ್ ತಂಡಗಳು ತಲುಪಿದ್ದವು. ಆ 8 ತಂಡಗಳಲ್ಲಿ ಇದೀಗ ನಾಲ್ಕು ತಂಡಗಳು ಸೆಮಿಫೈನಲ್ ಪ್ರವೇಶಿಸಿವೆ. ಕೆಲವು ಪ್ರಮುಖ ತಂಡಗಳು ಬಿಟ್ಟರೆ, 3 ಊಹಿಸಬಲ್ಲ ತಂಡಗಳು ಸೆಮಿಫೈನಲ್‌ಗೆ ತಲುಪಿವೆ. ಆದರೆ ಇನ್ನೊಂದು ತಂಡವು ಅಚ್ಚರಿಯಿಂದ ಸೆಮಿಸ್‌ಗೆ ಬಂದಿದ್ದು, ಎಲ್ಲರ ಹುಬ್ಬೇರುವಂತೆ ಮಾಡಿದೆ.

ಒಟ್ಟಾರೆ ನಾಲ್ಕು ತಂಡಗಳು ಸೆಮಿಸ್‌ನಲ್ಲಿ ಸೆಣಸಲಿದ್ದು, ಚಂಪಿಯನ್ ಪಟ್ಟಕ್ಕೇರುವ ತವಕದಲ್ಲಿವೆ. ಅದರಂತೆ ಲೀಗ್ ಹಾಗೂ ಸೂಪರ್ 8 ಕದನಗಳಲ್ಲಿ ಮಾಡಿದ್ದ ತಪ್ಪುಗಳನ್ನು ತಿದ್ದುಕೊಂಡು ವಿಶ್ವಕಪ್ ಗೆಲ್ಲುವ ಆಸೆ ಹೊಂದಿವೆ. 4 ತಂಡಗಳ ಪೈಕಿ 2 ತಂಡಗಳು ಒಂದೊಂದು ಬಾರಿ ವಿಶ್ವಕಪ್ ಗೆದ್ದಿದ್ದು, ದ.ಆಫ್ರಿಕಾ ಹಾಗೂ ಅಫ್ಘಾನಿಸ್ತಾನ ಗೆದ್ದರೆ, ಇದು ಅವರ ಚೊಚ್ಚಲ ವಿಶ್ವಕಪ್ ಆಗಲಿದೆ. ಹೀಗಾಗಿ ಎಲ್ಲ ತಂಡಗಳು ತಮ್ಮ ಶಕ್ತಿಗೂ ಮೀರಿ ಪ್ರಯತ್ನ ಮಾಡಲಿದ್ದು, ಇತಿಹಾಸ ಬರೆಯುವ ತವಕದಲ್ಲಿವೆ.

## ಭಾರತ

ಟಿ20 ಮಾದರಿಯ ವಿಶ್ವಕಪ್‌ನ ಆರಭಿಕ ಆವೃತ್ತಿಯಲ್ಲೇ ಚಾಂಪಿಯನ್ ಆಗಿದ್ದ ಭಾರತ, 2007ರ ನಂತರ ಯಾವುದೇ ವಿಶ್ವಕಪ್ ಗೆದ್ದಿಲ್ಲ. ಹೀಗಾಗಿ ಈ ಬಾರಿ ಗೆಲ್ಲುವ ಗುರಿ ಇಟ್ಟುಕೊಂಡಿದೆ. ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದೇ ಅಜೇಯ ಓಟ ಮುಂದುವರಿಸಿದ ರೋಹಿತ್ ಪಡೆಗೆ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಸವಾಲನ್ನು ಒಡ್ಡಲಿದೆ. ಆ ನಿಟ್ಟಿನಲ್ಲಿ ಭಾರತ ಕಳೆದ ಬಾರಿ ಸೆಮಿಫೈನಲ್‌ನ ಸೇಡು ತೀರಿಸಿಕೊಳ್ಳಲು ಸಿದ್ಧವಾಗಿದೆ. ಅಲ್ಲದೆ, ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಕಪಿಲ್ ದೇವ್ ಹಾಗೂ ಎಂಎಸ್ ಧೋನಿ ಅವರ ನಾಯಕತ್ವದಲ್ಲಿ ಮೂರು ವಿಶ್ವಕಪ್ ಹೊರತಾಗಿ ಭಾರತದ ಯಾವುದೇ ನಾಯಕ ಗೆದ್ದಿಲ್ಲ. ಹೀಗಾಗಿ ರೋಹಿತ್ ಶರ್ಮಗೆ ಉತ್ತಮ ಅವಕಾಶವಾಗಿದೆ.

### ಸೆಮಿಸ್ ಹಾದಿ

#### ಲೀಗ್ ಹಂತದಲ್ಲಿ

- ಐಲೆಂಡ್ ವಿರುದ್ಧ 8 ವಿಕೆಟ್ ಗೆಲುವು
- ಪಾಕಿಸ್ತಾನ ವಿರುದ್ಧ 6 ರನ್‌ಗಳ ಗೆಲುವು
- ಅಮೆರಿಕ ವಿರುದ್ಧ 7 ವಿಕೆಟ್ ಗೆಲುವು
- ಕೆನಡಾ ವಿರುದ್ಧ ಡ್ರಾ

#### ಸೂಪರ್ 8ರಲ್ಲಿ

- ಅಫ್ಘಾನಿಸ್ತಾನ ವಿರುದ್ಧ 47 ರನ್‌ಗಳ ಗೆಲುವು
- ಬಾಂಗ್ಲಾದೇಶದ ವಿರುದ್ಧ
- ಆಸ್ಟ್ರೇಲಿಯಾ ವಿರುದ್ಧ 24 ರನ್‌ಗಳ ಗೆಲುವು
- ಕಳೆದ ಟಿ20 ವಿಶ್ವಕಪ್: ಸೆಮಿಫೈನಲ್

| ತಂಡದ ಬಲ | ತಂಡದ ದೌರ್ಬಲ್ಯ |
|---|---|
| ರೋಹಿತ್, ಪಂತ್, ಸೂರ್ಯಕುಮಾರ್ ಉತ್ತಮ ಫಾರ್ಮ್ | ಕೊಹ್ಲಿ ಕಳಪೆ ಫಾರ್ಮ್ |
| ಕೆಳ ಕ್ರಮಾಂಕದಲ್ಲಿ ಹಾರ್ದಿಕ್ ಬ್ಯಾಟಿಂಗ್ | ಕೈಕೊಡುತ್ತಿರುವ ಜಡೇಜಾ, ಅಕ್ಸರ್ |
| ಬೂಮ್ರ, ಅರ್ಶ್‌ದೀಪ್ ಲಯ | ದುಬಾರಿಯಾದ ಹಾರ್ದಿಕ್ |

## ದ.ಆಫ್ರಿಕಾ

ಹರಿಣರ ಬಣವು ಈ ಬಾರಿಯ ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ತೋರುತ್ತಿದ್ದು, ವಿಶ್ವಕಪ್ ಎತ್ತುವ ಕನಸನ್ನು ಹೊಂದಿದೆ. ಕ್ರಿಕೆಟ್ ಇತಿಹಾಸದಲ್ಲಿ ಎದುರಾಳಿ ತಂಡವನ್ನುಯಾವಾಗಲೂ ಸಮರ್ಥವಾಗಿ ಎದುರಿಸುವ ದ.ಆಫ್ರಿಕಾ ಏಕದಿನದಲ್ಲಿ ಆಗಲಿ, ಟಿ20ಯಲ್ಲಿ ಆಗಲಿ ಯಾವುದೇ ವಿಶ್ವಕಪ್ ಗೆದ್ದಿಲ್ಲ. ಆ ನಿಟ್ಟಿನಲ್ಲಿ ಈ ಬಾರಿ ಚಾಂಪಿಯನ್ ಆಗುವ ಕನಸನ್ನು ಹೊತ್ತಿದೆ. ಕಳೇದ ವಿಶ್ವಕಪ್‌ಗಳಲ್ಲಿ ಫೈನಲ್, ಕ್ವಾರ್ಟರ್ ಫೈನಲ್‌ಗಳಲ್ಲಿ ಎಡವುತ್ತಿದೆ. ಅದನ್ನು ಸುಧಾರಿಸಿಕೊಂಡು ಹೊಸ ಹುಮ್ಮಸ್ಸಿನಲ್ಲಿ ಆಡಲು ಸಜ್ಜಾಗಿದೆ.

### ಸೆಮಿಫೈನಲ್ ಹಾದಿ

#### ಲೀಗ್ ಹಂತ

- ಶ್ರೀಲಂಕಾ ವಿರುದ್ಧ 6 ವಿಕೆಟ್ ಗೆಲುವು
- ನೆದರ್ಲೆಂಡ್ಸ್ ವಿರುದ್ಧ 4 ವಿಕೆಟ್ ಗೆಲುವು
- ಬಾಂಗ್ಲಾದೇಶ ವಿರುದ್ಧ 4 ರನ್‌ಗಳ ಗೆಲುವು
- ನೇಪಾಳ ವಿರುದ್ಧ 1 ರನ್ ಗೆಲುವು

#### ಸೂಪರ್ 8ರಲ್ಲಿ

- ಅಮೆರಿಕ ವಿರುದ್ಧ 18 ರನ್ ಗೆಲುವು
- ಇಂಗ್ಲೆಂಡ್ ವಿರುದ್ಧ 7 ರನ್ ಗೆಲುವು
- ವೆಸ್ಟ್‌ಇಂಡೀಸ್ ವಿರುದ್ಧ 3 ವಿಕೆಟ್ ಗೆಲುವು
- ಕಳೆದ ಟಿ20 ವಿಶ್ವಕಪ್: ಸೆಮಿಫೈನಲ್

### ತಂಡದ ಬಲ, ದೌರ್ಬಲ್ಯ

| | |
|---|---|
| ಬಟ್ಲರ್ ಸಾಲ್ಟ್ ಜೊಡಿ | ಜ್ಯಾಕ್ಸ್, ಬೈರ್ಸ್ಟೋವ್ ಕಳಪೆ ಲಯ |
| ಮಿಂಚುತ್ತಿರುವ ಕೆಳಕ್ರಮಾಂಕ | ಡುವುತ್ತಿರುವ ಮಧ್ಯಮ ಕ್ರಮಾಂಕ |
| ಜಾರ್ಡನ್ ಲಯ | ದುಬಾರಿಯಾಗುತ್ತಿರುವ ಉಳಿದ ಬೌಲರ್‌ಗಳು |

## ಇಂಗ್ಲೆಂಡ್

ಕಳೆದ ಬಾರಿಯ ಚಾಂಪಿಯನ್ ಇಂಗ್ಲೆಂಡ್ ಈ ಬಾರಿಯೂ ಗೆದ್ದು, ಇತಿಹಾಸ ಸೃಷ್ಟಿಸುವ ಗುರಿ ಹೊಂದಿದೆ. ಆ ನಿಟ್ಟಿನಲ್ಲಿ ಬಟ್ಲರ್ ಪಡೆ ಸೆಮಿಫೈನಲ್‌ಗೆ ಸಜ್ಜಾಗಿದ್ದು, ಸತತ ಎರಡನೇ ವಿಶ್ವಕಪ್ ಮೇಲೆ ಕಣ್ಣಿಟ್ಟದೆ. ಈ ಬಾರಿಯ ವಿಶ್ವಕಪ್‌ನಲ್ಲಿ ಗೆಲುವು ಸೋಲಿನ ನಡುವೆ ಸೆಮಿಸ್‌ಗೆ ಎಂಟ್ರಿ ಕೊಟ್ಟದ್ದು, ಕಳೆದ ಬಾರಿ ಸೆಮಿಸ್‌ನಲ್ಲಿ ಗೆದ್ದಿದ್ದ ತಂಡ ಭಾರತದ ವಿರುದ್ಧವೇ ಆಡಲಿದೆ. ಹೀಗಾಗಿ ಆತ್ಮವಿಶ್ವಸದಲ್ಲಿದೆ.

### ಸೆಮಿಸ್ ಹಾದಿ

#### ಲೀಗ್ ಹಂತ

- ಸ್ಕಾಟ್ಲೆಂಡ್ ವಿರುದ್ಧ ಡ್ರಾ
- ಆಸ್ಟ್ರೇಲಿಯಾ ವಿರುದ್ಧ 36 ರನ್ ಸೋಲು
- ಒಮನ್ ವಿರುದ್ಧ 8 ವಿಕೆಟ್ ಗೆಲುವು
- ನಮೀಬಿಯಾ ವಿರುದ್ಧ 41 ರನ್ ಗಲುವು

#### ಸೂಪರ್ 8

- ವೆಸ್ಟ್‌ಇಂಡೀಸ್ ವಿರುದ್ಧ 3 ವಿಕೆಟ್ ಗೆಲುವು
- ದ.ಆಫ್ರಿಕಾ ವಿರುದ್ಧ 7 ರನ್ ಸೋಲು
- ಅಮೆರಿಕ ವಿರುದ್ಧ 10 ವಿಕೆಟ್ ಗೆಲುವು
- ಕಳೆದ ಟಿ20 ವಿಶ್ವಕಪ್: ಚಾಂಪಿಯನ್ಸ್
- ವಿಶ್ವಕಪ್‌ನ ಸೆಮಿಸ್ ಪದ್ಧತಿ:

| ತಂಡದ ಬಲ | ದೌರ್ಬಲ್ಯ |
|---|---|
| ಒಂದೂ ಪಂದ್ಯ ಸೋಲದ ಆತ್ಮವಿಶ್ವಾಸ | ಸೆಮಿಸ್‌ನಲ್ಲಿ ಎಡವಿರುವ ಆತಂಕ |
| ಡಿಕಾಕ್, ಸಟ್ಬ್ಸ್ ಉತ್ತಮ ಫಾರ್ಮ್ | ಎಡುವುತ್ತಿರುವ ಭರವಸೆಯ ಆಟಗಾರರು |
| ನೊಕಿಯಾ, ಮಹಾರಾಜ್, ಶಮ್ಸಿ ಬೌಲಿಂಗ್ | ದುಬಾರಿಯಾದ ಉಳಿದ ಬೌಲರ್‌ಗಳು |

### ಸೆಮಿಫೈನಲ್-1

ಬಿ ಗುಂಪಿನ 1ನೇ ತಂಡ (ದ.ಆಫ್ರಿಕಾ) ಹಾಗೂ ಎ ಗುಂಪಿನ 1ನೇ ತಂಡ (ಅಫ್ಘಾನಿಸ್ತಾನ)
**ಸ್ಥಳ:** ಬ್ರೇನ್ ಲಾರಾ ಕ್ರೀಡಾಂಗಣ, ತರೌಬಾ
ಸಮಯ: ಬೆಳಗ್ಗೆ 6:00

### ಸೆಮಿಫೈನಲ್-2

ಎ ಗುಂಪಿನ 1ನೇ ತಂಡ (ಭಾರತ) ಹಾಗೂ ಬಿ ಗುಂಪಿನ 2ನೇ ತಂಡ (ಇಂಗ್ಲೆಂಡ್)
**ಸ್ಥಳ:** ಪ್ರಾವಿಡನ್ಸ್ ಕ್ರೀಡಾಂಗಣ, ಗಯಾನ

## ಅಫ್ಘಾನಿಸ್ತಾನ

ಈ ಬಾರಿಯ ವಿಶ್ವಕಪ್‌ನಲ್ಲಿ ಅಫ್ಘಾನಿಸ್ತಾನ ಭರ್ಜರಿ ಪ್ರದರ್ಶನ ನೀಡಿದ್ದು, ಎಲ್ಲರ ಹುಬ್ಬೇರಿಸಿದೆ. ಟೂರ್ನಿಯ ಲೀಗ್ ಹಾಗೂ ಸೂಪರ್ 8 ಕದನಗಳಲ್ಲಿ ಬಲಿಷ್ಠ ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ಅನ್ನು ಸೋಲಿಸುವ ಮೂಲಕ ಇತಿಹಾಸ ಸೃಷ್ಟಿಸಿದೆ. ಹೀಗಾಗಿ ವಿಶ್ವಕಪ್ ಗೆಲ್ಲಲು ಎರಡೇ ಹೆಜ್ಜೆ ಬಾಕಿ ಇದ್ದು, ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಬಾರಿಗೆ ವಿಶ್ವಕಪ್ ಗೆಲ್ಲುವ ತವಕದಲ್ಲಿ ಇದೆ. ಬಲಿಷ್ಠ ಬೌಲಿಂಗ್ ಪಡೆ ಹೊಂದಿದ್ದು, ಸೆಮಿಸ್‌ನಲ್ಲಿ ದ.ಆಫ್ರಿಕಾವನ್ನು ಎದುರಿಸಲಿದೆ.

| ತಂಡದ ಬಲ | ದೌರ್ಬಲ್ಯ |
|---|---|
| ಗುರ್ಬಾಜ್, ಇಬ್ರಾಹಿಂ ಬ್ಯಾಟಿಂಗ್ | ವಿಫಲವಾಗುತ್ತಿರುವ ಮಧ್ಯಮ ಕ್ರಮಾಂಕ |
| ನವೀನ್ ಉಲ್-ಹಕ್ ಬೌಲಿಂಗ್ | ದುಬಾರಿಯಾಗುತ್ತಿರುವ ಉಳಿದ ವೇಗಿಗಳು |
| ರಶೀದ್, ನೂರ್, ನಬಿ ಸ್ಪಿನ್ | ಕಳಪೆ ಫೀಲ್ಡಿಂಗ್ |

### ಸೆಮಿಫೈನಲ್ ಹಾದಿ

#### ಲೀಗ್ ಪಂದ್ಯಗಳಲ್ಲಿ

- ಉಗಾಂಡ ವಿರುದ್ಧ 125 ರನ್ ಗೆಲುವು
- ನ್ಯೂಜಿಲೆಂಡ್ ವಿರುದ್ಧ 84 ರನ್‌ಗಳ ಗೆಲುವು
- ಪಪುವಾ ನ್ಯೂಗಿನಿ ವಿರುದ್ಧ 7 ವಿಕೆಟ್‌ಗಳ ಗೆಲುವು
- ವೆಸ್ಟ್‌ಇಂಡೀಸ್ ವಿರುದ್ಧ 104 ರನ್‌ಗಳ ಸೋಲು

#### - ಸೂಪರ್ 8ರಲ್ಲಿ

- ಭಾರತದ ವಿರುದ್ಧ 47 ರನ್‌ಗಳ ಸೋಲು
- ಆಸ್ಟ್ರೇಲಿಯಾ ವಿರುದ್ಧ 21 ರನ್‌ಗಳ ಗೆಲುವು
- ಬಾಂಗ್ಲಾದೇಶದ ವಿರುದ್ಧ 8 ರನ್‌ಗಳ ಗೆಲುವು
- ಕಳೆದ ಟಿ20 ವಿಶ್ವಕಪ್: ಲೀಗ್ ಹಂತ

# ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್



## ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಶತಭಿಷೆ, ಕೃಷ್ಣಪಕ್ಷ, ಷಷ್ಠಿ, ಯೋಗ ಪ್ರೀತಿ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

## ಮನೆಮದ್ದು

ಅರ್ಧ ಗ್ಲಾಸ್ ನೇರಳೆ ಹಣ್ಣಿನ ಶರಬತ್ತಿಗೆ 1 ಚಮಚ ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಅಂಗೈ, ಅಂಗಾಲು ಉರಿ ನಿಲ್ಲುತ್ತದೆ. ನಿದ್ರೆ ಚೆನ್ನಾಗಿ ಬರುತ್ತದೆ. ಹಾಗೆಯೇ ಬೇಧಿ ತಡೆಯಲು ನೇರಳೆ ಶರಬತ್ತು ಅತ್ಯುತ್ತಮ ಮನೆಮದ್ದು.

## ಸೌಂದರ್ಯ ಸೂತ್ರ

ಹಸಿ ಹಾಲು, ಬೇಳೆ ಹಿಟ್ಟು, ಜೇನುತುಪ್ಪವನ್ನು ಬೆರೆಸಿ ಪ್ಯಾಕ್ ತಯಾರಿಸಿ, ಅದನ್ನು ಮುಖಕ್ಕೆ ಹಚ್ಚಿ. ಸುಮಾರು 15 ನಿಮಿಷದ ನಂತರ ಮುಖ ತೊಳೆಯುವುದರಿಂದ ತ್ವಚೆಯ ಹೊಳಪು ಹೆಚ್ಚುತ್ತದೆ. ಈ ಪ್ಯಾಕ್‌ನ್ನು ವಾರಕ್ಕೆ ಒಂದು ಬಾರಿ ಹಚ್ಚಬಹುದು. ಇದು ಚರ್ಮದಿಂದ ತೇವಾಂಶವನ್ನು ಬಿಡುವುದಿಲ್ಲ.

## ದಿನ ಭವಿಷ್ಯ

**ಮೇಷ:** ಅಪೂರ್ಣ ಕಾರ್ಯಗಳ ಪೂರ್ಣಗೊಳಿಸಲು ಕೈಲಾದಷ್ಟು ಪ್ರಯತ್ನಿಸುತ್ತೀರಿ. ಉದ್ಯೋಗದಲ್ಲಿ ಹೊಸ ಬದಲಾವಣೆ. ಇದರಿಂದ ಭವಿಷ್ಯದಲ್ಲಿ ಪ್ರಯೋಜನ.

**ವೃಷಭ:** ಕಚೇರಿಯಲ್ಲಿ ಎಲ್ಲರೊಂದಿಗೆ ಸೌಹಾರ್ದಯುತ ವಾತಾವರಣವಿರುತ್ತದೆ, ಸಹೋದ್ಯೋಗಿಗಳಿಂದ ಸಂಪೂರ್ಣ ಸಹಕಾರ ಪಡೆಯಲು ಸಾಧ್ಯ.

**ಮಿಥುನ:** ಕುಟುಂಬ ಸದಸ್ಯರ ನಡುವೆ ಹೊಂದಾಣಿಕೆ. ಪ್ರೇಮ ವಿವಾಹದ ವಿಷಯದಲ್ಲಿ ಕುಟುಂಬಸ್ಥರಿಂದ ವಿರೋಧ. ಸಾಲ ಮಾಡದಿರಿ.

**ಕಟಕ:** ಕುಟುಂಬದ ಸದಸ್ಯರ ಆರೋಗ್ಯದ ಬಗ್ಗೆ ಚಿಂತೆ. ತಾಂತ್ರಿಕ ವಲಯಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಉತ್ತಮ ದಿನ.

**ಸಿಂಹ:** ಸಹೋದ್ಯೋಗಿಗಳ ಜತೆ ಮನಸ್ತಾಪದ ಸಾಧ್ಯತೆ ಇದೆ. ನಿಮ್ಮ ಬಾಸ್ ನಿಮ್ಮ ಮೇಲೆ ಕೋಪಗೊಳ್ಳುವಂತಹ ಯಾವುದೇ ತಪ್ಪನ್ನು ಮಾಡಬೇಡಿ.

**ಕನ್ಯಾ:** ಮನಸ್ಸು ಧಾರ್ಮಿಕ, ಅಧ್ಯಾತ್ಮಿಕ ವಿಷಯಗಳಲ್ಲಿ ಮುಳುಗಿರುತ್ತದೆ. ಬಹಳ ದಿನಗಳಿಂದ ಈಡೇರದೇ ಇದ್ದ ಆಸೆಯೊಂದು ಇಂದು ನೆರವೇರುತ್ತದೆ.

**ತುಲಾ:** ಸೃಜನಶೀಲತೆ, ಕಲಾತ್ಮಕ ಸಾಮರ್ಥ್ಯ ಜನಮನ್ನಣೆ ಪಡೆಯಲಿದೆ. ಕುಟುಂಬ ಸದಸ್ಯರೊಂದಿಗೆ ಕೆಲವು ಪ್ರಮುಖ ವಿಷಯಗಳನ್ನು ಚರ್ಚಿಸಬಹುದು.

**ವೃಶ್ಚಿಕ:** ಮಾತಿನಲ್ಲಿ ಕಠಿಣತೆ ಕಡಿಮೆ ಮಾಡಿಕೊಳ್ಳಿ. ವ್ಯವಹಾರದಲ್ಲಿ ನಿರೀಕ್ಷಿತ ಫಲಿತಾಂಶಗಳನ್ನು ಸಿಗದ ಕಾರಣ, ಮಾನಸಿಕವಾಗಿ ತೊಂದರೆ.

**ಧನು:** ಹೆಚ್ಚಿನ ಖರ್ಚುಗಳಿಂದ ಹಣದ ಕೊರತೆಯನ್ನು ಎದುರಿಸಬಹುದು, ಆದರೆ ಮಧ್ಯಾಹ್ನದ ನಂತರ ಪರಿಸ್ಥಿತಿ ಬದಲಾಗುತ್ತದೆ.

**ಮಕರ:** ನೆರೆಹೊರೆಯವರೊಂದಿಗೆ ಜಗಳ, ವಿವಾದ ತಪ್ಪಿಸಿ. ಮಕ್ಕಳ ಮದುವೆ ಮತ್ತು ವೃತ್ತಿಗೆ ಸಂಬಂಧಿಸಿದ ಪ್ರಮುಖ ನಿರ್ಧಾರ ತೆಗೆದುಕೊಳ್ಳಬಹುದು.

**ಕುಂಭ:** ವ್ಯಾಪಾರದಲ್ಲಿ ಪಾಲುದಾರರಿಂದ ಲಾಭ. ದಿನ ನಿತ್ಯದ ಕೆಲಸದಲ್ಲಿ ಹಲವಾರು ರೀತಿಯ ಜವಾಬ್ದಾರಿಗಳಿಂದಾಗಿ ಒತ್ತಡ.

**ಮೀನ:** ವ್ಯವಹಾರ ಸಂದಿಗ್ಧತೆಯಿಂದಾಗಿ, ನಿರ್ಧಾರ ತೆಗೆದುಕೊಳ್ಳಲು ಹಿಂಜರಿಯುತ್ತೀರಿ. ಹಾಗಾಗಿ ಲಾಭದ ಅವಕಾಶ ತಪ್ಪಿ ಹೋಗಬಹುದು.

● ಕೆ.ಬಿ.ಸಂತೋಷ್ ಗುರೂಜಿ

## ಈ ದಿನ ಇತಿಹಾಸ

- 1510- 16 ನೇ ಶತಮಾನದ ಬೆಂಗಳೂರಿನ ಆಡಳಿತಗಾರ ನಾಡಪ್ರಭು ಕೆಂಪೇಗೌಡ ಜನನ
- 1939 - ಹಿಂದಿ ಚಿತ್ರರಂಗ ಖ್ಯಾತ ಸಂಗೀತ ನಿರ್ದೇಶಕ, ಗಾಯಕ ಆರ್ ಡಿ ಬರ್ಮನ್ ಜನನ
- 1880 - ಥಾಮಸ್ ಅಲ್ವಾ ಎಡಿಸನ್ ವಿದ್ಯುತ್ ಬಲ್ಬ್‌ಗೆ ಪೇಟೆಂಟ್ ಪಡೆದರು.
- ವಿಶ್ವ ಮಧುಮೇಹ ದಿನ

## ಚಿತ್ರಸ್ಫೂರ್ತಿ

ನಕ್ಷತ್ರವೊಂದು ಭೂಮಿಗೆ ಉದುರಿದಂತೆ ಭಾಸವಾಗುವ ಈ ದೃಶ್ಯ ನೆದರ್ಲಾಂಡ್‌ನ, ಗ್ರೋನಿಂಗ್ ಬೌರ್ಟಾಂಗೆ ಗ್ರಾಮದಲ್ಲಿರುವ ಫೋರ್ಟ್ ಬೌರ್ಟಾಂಜ್‌ನ ಕೋಟೆಯದ್ದಾಗಿದೆ. ಇದನ್ನು ಅಲ್ಲಿನ ರಾಜ ವಿಲಿಯಂ ದಿ ಸೈಲೆಂಟ್‌ನ ಆದೇಶದಂತೆ 15ನೇ ಶತಮಾನದಲ್ಲಿ ನಿರ್ಮಿಸಲಾಯಿತು. ಇದರ ಮೂಲ ಉದ್ದೇಶ ಜರ್ಮನಿ ಮತ್ತು ಗ್ರೋನಿಂಗೆನ್ ನಗರದ ನಡುವಿನ ಏಕೈಕ ರಸ್ತೆಯನ್ನು ನಿಯಂತ್ರಿಸುವುದಾಗಿತ್ತು. ದ್ವೀಪದಂತಿರುವ ಈ ಕೋಟೆಯೊಳಗಿರುವ ಗ್ರಾಮ ಇದೀಗ ಹಳ್ಳಿಯಾಗಿ ಪರಿವರ್ತನೆಗೊಂಡಿದೆ. ಜತೆಗೆ ಪ್ರವಾಸಿ ಆಕರ್ಷಣೆಯೂ ಆಗಿದೆ.

# ನಾಗವಂಶವನ್ನು ರಕ್ಷಿಸಲು ಜನಿಸಿದ ಆಸ್ತೀಕ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಹಿಂದೆ ಜರತ್ಕಾರು ಎಂಬ ಋಷಿಗಳು ವನದಲ್ಲಿ ಸಂಚಾರ ಮಾಡುತ್ತಿರುವಾಗ ಅವರ ಪಿತೃಗಳು ನೀನು ಬೇಗನೆ ಗ್ರಹಸ್ಥ ನಾಗಿ ನಮ್ಮ ವಂಶವನ್ನು ಬೆಳೆಸಬೇಕು ಎಂದು ಆಜ್ಞಾಪಿಸಿದರು. ಆಗ ಜರತ್ಕಾರು ಋಷಿಗಳು, 'ನಾನು ಕಾಡಿನಲ್ಲಿ ಹೋಗಿ, ನನ್ನನ್ನು ಯಾರಾದರೂ ಹೆಣ್ಣು ಕೊಡುತ್ತೀರಾ ಎಂದು ಮೂರು ಬಾರಿ ಕೂಗುವೆ. ಅಷ್ಟರಲ್ಲಿ ಯಾರಾದರು ಬಂದು ಕನ್ಯೆಯನ್ನು ಕೊಟ್ಟರೆ ಮದುವೆಯಾಗುತ್ತೇನೆ. ಆ ಹುಡುಗಿ ನನ್ನ ಹೆಸರಿನವಳೆ ಆಗಿರಬೇಕು' ಎಂದು ಹೇಳಿದರು. ಆಗ ಪಿತೃಗಳು ತಥಾಸ್ತು ಎಂದರು.

ಜರತ್ಕಾರು ಋಷಿಗಳು ನಿರ್ಜನವಾದ ಅರಣ್ಯದಲ್ಲಿ ನಿಂತು, 'ನಾನು ಮದುವೆಯಾಗುತ್ತೇನೆ, ಯಾರಾದರೂ ಕನ್ಯಾದಾನ ಮಾಡುತ್ತೀರಾ?' ಎಂದು ಕೂಗಿದರು. ಅಷ್ಟರಲ್ಲೇ ವಾಸುಕಿ ಸರ್ಪ ತನ್ನ ತಂಗಿಯನ್ನು ತಂದು ಒಪ್ಪಿಸಿದ. ಅವಳ ಹೆಸರೇನು ಎಂದು ಕೇಳಿದಾಗ ಜರತ್ಕಾರು ಎಂದು ಹೇಳಿದ. ಆಗ ಅವರು, ವಿಧಿಯ ಆಟ ವಿಚಿತ್ರ ಎಂದು ವಿವಾಹಕ್ಕೆ ಒಪ್ಪಿದರು. ಆದರೆ ಅವರು, 'ವಿವಾಹದ ನಂತರ ನನ್ನ ಯಾವ ಕಾರ್ಯಕ್ಕೂ ವಿಘ್ನ ತರಬಾರದು, ಏನಾದರೂ ವಿಘ್ನ ಮಾಡಿದರೆ ತಕ್ಷಣ ಬಿಟ್ಟು ಹೋಗುವೆ' ಎಂದು ಒಂದು ಷರತ್ತನ್ನೂ ಮುಂದಿಟ್ಟರು. ವಿವಾಹವಾಯಿತು. ಮುಂದೆ ಒಂದು ದಿನ ಸಾಯಂಕಾಲ ಜರತ್ಕಾರು ತನ್ನ ಹೆಂಡತಿಯ ತೊಡೆಯ ಮೇಲೆ ವಿಶ್ರಮಿಸುತ್ತಿದ್ದರು. ಆಗ ಸೂರ್ಯ ಅಸ್ತಂಗತನಾಗುತ್ತಿದ್ದ. ಸಾಧ್ವಿಯಾದ ಮಡದಿ ನನ್ನ ಗಂಡನ ಸಂಧ್ಯಾವಂದನೆ ಲೋಪವಾಗುತ್ತದೆ ಎಂದು ಯೋಚಿಸಿ ಗಂಡನನ್ನು ಎಬ್ಬಿಸುತ್ತಾಳೆ. ಎಚ್ಚೆತ್ತ ಜರತ್ಕಾರು ಋಷಿಗಳು ಕೋಪಗೊಂಡು, 'ಯಾಕೆ ನಿದ್ರೆಗೆ ವಿಘ್ನ ಮಾಡಿದಿ!' ಎಂದರು. ಆಗ ಅವಳು, 'ಸೂರ್ಯಾಸ್ತವಾಗುತ್ತಿತ್ತು. ನಿಮ್ಮ ಧರ್ಮಲೋಪವಾಗುತ್ತಿತ್ತು' ಎಂದಾಗ, 'ನನ್ನ ಅರ್ಘ್ಯ ಸ್ವೀಕಾರ ಮಾಡದೆ ಸೂರ್ಯ ಹೇಗೆ ಮುಳುಗುತ್ತಾನೆ?' ಎಂದು ಹೇಳಿ ಮನೆಯಿಂದ ಹೊರಟರು. ಆಗ ಆತನ ಪತ್ನಿ ಸಂತಾನವನ್ನು ಕರುಣಿಸಿ ಎಂದು ಅಂಗಲಾಚಿದಾಗ, 'ಮಮ ಅಂಶ ತವ ಗರ್ಭೆ ಅಸ್ತಿ' ಎಂದು ಹೇಳಿ ಹೊರಟು ಹೊರಟರು. ಅಸ್ತಿ ಎಂದು ಹೇಳಿದ ಮೇಲೆ ಹುಟ್ಟಿದ್ದರಿಂದ ಅವರ ಮಗನಿಗೆ ಆಸ್ತೀಕ ಎಂದು ನಾಮಕರಣವಾಯಿತು. ಮುಂದೆ ಈತನೇ ಜನಮೇಜಯನ ಸರ್ಪಯಾಗವನ್ನು ನಿಲ್ಲಿಸಿ ನಾಗವಂಶವನ್ನು ರಕ್ಷಿಸಿದವನು.

ಎಲ್ಲಿಯಾದರು ಸರ್ಪದ ಭಯ ಇದ್ದರೆ ಈ ಆಸ್ತೀಕ ಋಷಿಗಳ ಸ್ಮರಣೆ ಮಾಡಿದರೆ ಸರ್ಪ ಭಯ ನಿವಾರಣೆಯಾಗುತ್ತದೆಯಂತೆ.

ನಮ್ಮ ಹಿರಿಯರು ಪ್ರಾಣಿ, ಪಕ್ಷಿ, ಪ್ರಕೃತಿ ಮತ್ತು ಮನುಷ್ಯರನ್ನು ಸಾಮರಸ್ಯದಿಂದ ಬದುಕಲು ಪ್ರೇರೇಪಿಸಲು ಇಂತಹ ಅನೇಕ ಪುರಾಣದ ಕಥೆಗಳನ್ನು ಉದಾಹರಿಸುತ್ತಾರೆ. ಸರ್ಪಗಳು ವಿಷಪೂರಿತವಾಗಿದ್ದರೂ ನಾವು ಅವುಗಳ ತಂಟೆಗೆ ಹೋಗದಿದ್ದರೆ ಅವು ನಮ್ಮನ್ನು ಏನೂ ಮಾಡುವುದಿಲ್ಲ. ನಮಗೆ ಅವುಗಳ ಬಗ್ಗೆ ಎಷ್ಟು ಭಯವಿರುತ್ತದೆಯೋ ಅವುಗಳಿಗೂ ನಮ್ಮ ಬಗ್ಗೆ ಅಷ್ಟೇ ಭಯವಿರುತ್ತದೆ. ಆದ್ದರಿಂದಲೇ ಅಕಸ್ಮಾತಾಗಿ ಮನೆಯಲ್ಲಿ ಅಥವಾ ಮನೆಯ ಅಂಗಳದಲ್ಲಿ ಹಾವನ್ನು ಕಂಡಾಗ ಅದನ್ನು ಹೊಡೆದುಕೊಳ್ಳುವ ಬದಲು, ಅದನ್ನು ಹಿಡಿಯುವವರಿಗೆ ಕರೆ ಮಾಡಿ. ಅನೇಕ ಪ್ರಾಣಿ ದಯಾ ಸಂಘಗಳು ಜತೆಗೆ ಸ್ನೇಕ್ ಶಾಮ್ ಅಂತಹ ಅನೇಕರು ತಮ್ಮ ಜೀವನವನ್ನೇ ಈ ಹಾವುಗಳ ಸಂರಕ್ಷಣೆಗಾಗಿ ಮುಡಿಪಾಗಿಟ್ಟಿದ್ದಾರೆ. ಅವರು ಹಾವನ್ನು ಹಿಡಿದು ನಂತರ ಅದನ್ನು ಕಾಡಿಗೆ ಬಿಟ್ಟು ಬರುತ್ತಾರೆ. ವಿಷಪೂರಿತ ಪ್ರಾಣಿಗಳನ್ನ ಕೊಲ್ಲುವುದು ಪರಿಹಾರವಲ್ಲ. ಮನುಷ್ಯ ಮತ್ತು ಪ್ರಾಣಿಗಳ ನಡುವೆ ಸಂಘರ್ಷ ಬಾರದಂತೆ ಅವುಗಳಿಗೆ ಒಂದು ಜಾಗವನ್ನು ಮೀಸಲಿಡುವುದು ಪ್ರಕೃತಿಯೊಡನೆ ಸೌಹಾರ್ದದಿಂದ ಬದುಕಲು ನಾವೆಲ್ಲರೂ ಕಲಿಯಬೇಕಾದ ಪಾಠ.

ಇಂದು ನಾವು ತೋರಿಸುವ ಕರುಣೆಯನ್ನ ನಾಳೆ ನಮ್ಮ ಮಕ್ಕಳು ಕಲಿಯುತ್ತಾರೆ. ಆದ್ದರಿಂದ ಪ್ರಾಣಿಗಳ ಬಗ್ಗೆ, ನಿಸರ್ಗದ ಬಗ್ಗೆ ಕಾಳಜಿ ತೋರಿಸಿ. ನಿಸರ್ಗ ನಮ್ಮನ್ನೆಲ್ಲ ಸಲಹಿದ ತಾಯಿಯಂತೆ.

## ಪದಬಂಧ



**ಎಡದಿಂದ ಬಲಕ್ಕೆ:**
1. ಪರರಿಗೆ ನೀಡಿದ ಹೊಡೆತ (3)
3. ನೀರಿನಲ್ಲಿ ಉಂಟಾದ ಅಲೆ (3)
6. ಮಂದಿಯ ರಾಜ (3)
7. ಪರರ ಮೇಲೆ ತೋರಿದ ಕರುಣೆ (3)
8. ಸದ್ದು ಮಾಡುತ್ತಾ ಬಂದಿರುವ ಆನೆ (3)
10. ಎರಡು ಕಡೆಯಿಂದ ನೋಡಿದರೂ ಕಣ್ಣು (3)
14. ಕರಾರು ಮಾಡಿಕೊಳ್ಳುವಾಗಿನ ಆಕ್ಷೇಪಣೆ (4)
15. ಮೋಡಿ ಮಾಡಿದ ಯಕ್ಷಿಣಿಗಾರ (4)
17. ಚರ್ಮದಲ್ಲಿ ಉಂಟಾದ ನವೆ (3)
19. ಗುಂಪಿಗೆ ಪರ್ಯಾಯ ಪದ (3)
21. ಕೆಸರು ಅಥವಾ ಕೊಚ್ಚೆ (3)
22. ಕುದುರೆಸವಾರರ ಮುಖ್ಯಸ್ಥ (3)
23. ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
24. ಮನೆಯ ಪಡಸಾಲೆ (3)

**ಮೇಲಿನಿಂದ ಕೆಳಕ್ಕೆ:**
1. ಎಲ್ಲೆಡೆ ಹರಡುವಿಕೆ (3)
2. ಇರುಳಿಗೆ ಮತ್ತೊಂದು ಹೆಸರು (3)
3. ಸೂರ್ಯ ದುಃಖಿಸುತ್ತಿರುವನೇ (3)
4. ಮನವಿರುವ ಲಕ್ಯ (3)
5. ಶಕ್ತಿಗೆ ಇನ್ನೊಂದು ಹೆಸರು (3)
9. ಕಾಗದ ಪತ್ರಗಳಿಗೆ ಹಾಕಿದ ಸಹಿ (4)
11. ಕರಾವಳಿಯ ಪ್ರಸಿದ್ಧ ಕಲೆ (4)
12. ಅವನು ನೀಡಿದ ಪ್ರತ್ಯುತ್ತರ (4)
13. ವಸ್ತ್ರಗಳನ್ನು ಒಗೆದು ಶುಚಿಮಾಡುವವನು (4)
16. ಮನಸ್ಸಿನ ತೀವ್ರವಾದ ಆಸೆ (3)
17. ಕೈಗೆ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)
18. ಅತಿಯಾದ ಆತುರ (3)
19. ಬರವಣಿಗೆಗೆ ಮತ್ತೊಂದು ಹೆಸರು (3)
20. ಗರ ಬಡಿದಂತಿದ್ದಾನೆ ಹಳ್ಳಿಗ (3)

**ನಿನ್ನೆಯ ಉತ್ತರ**

**ಎಡದಿಂದ ಬಲಕ್ಕೆ:** 1. ಪರ್ವತ 4. ಮತಾಪು 6. ಕನವರಿಸು 7. ವಾಲಿ 8. ಕುಜ 10. ಅಣಕ 13. ಮದುಮಗ 14. ರಾಜಧಾನಿ 15. ಸವರು 17. ತೂಕ 19. ಸಂಜೆ 21. ಮಳೆಮಾರುತ 23. ತಯಾರಿ 24. ತಿರುಕ

**ಮೇಲಿನಿಂದ ಕೆಳಕ್ಕೆ:** 1. ಪಥ 2.ತಕಲಿ 3.ಆವರಣ 4.ಮಸುಕು 5. ಪುರ 9. ಶಮಕ 10. ಅಗಸ 11. ಕರಾರು 12. ಮಾನಿನಿ 16.ವರ್ಧಮಾನ 18.ಕಮರಿ 19.ಸಂತತಿ 20. ಐತ 22. ಮಂಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

## ದಿನಕ್ಕೊಂದು ಮಾಹಿತಿ

### ಇಲಿಗಳ ದೇವಾಲಯ

ನಾವು ಭಾರತೀಯರು ಪ್ರಕೃತಿಯ ಆರಾಧಕರು. ನಿಸರ್ಗದ ಪ್ರತಿ ಜೀವಿಯ ಬಗ್ಗೆಯೂ ಪೂಜ್ಯಭಾವನೆ ನಮ್ಮಲ್ಲಿದೆ. ರಾಜಸ್ಥಾನದ ಜನ ಇನ್ನೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಇಲ್ಲಿ ಇಲಿಗಳನ್ನೇ ಪೂಜಿಸಲಾಗುತ್ತದೆ. ಇಲಿಗಳಿಗೆಂದೇ ಮೀಸಲಾದ ದೇವಾಲಯ ಇಲ್ಲಿದೆ. ಸಾವಿರಾರು ಇಲಿಗಳು ಈ ದೇವಾಲಯದಲ್ಲಿ ವಾಸಿಸುತ್ತವೆ. ಇದು ದೇಶದ ಅತ್ಯಂತ ವಿಶಿಷ್ಟ ಆಕರ್ಷಣೆಗಳಲ್ಲಿ ಒಂದಾಗಿದೆ. ಅನೇಕ ಯಾತ್ರಿಕರು ಪ್ರತಿ ವರ್ಷ ಇಲ್ಲಿಗೆ ಭೇಟಿ ನೀಡುತ್ತಾರೆ.

## ಪುಸ್ತಕ ಲೋಕ

### ನೀನು ನಿನ್ನೊಳಗೆ ಖೈದಿ

ಅನುಷ್ ಎ ಶೆಟ್ಟಿ ಬರೆದಿರುವ ನೀನು ನಿನ್ನೊಳಗೆ ಖೈದಿ ಕಾದಂಬರಿ ಕನ್ನಡದ ಮಟ್ಟಿಗೆ ಇದೊಂದು ವಿಭಿನ್ನ ಕೃತಿ ಎಂದು ಹೇಳಿದರೆ ಖಂಡಿತ ತಪ್ಪಾಗಲಾರದು. ಅತ್ಯಂತ ವಿಶಿಷ್ಟವಾದ ವಸ್ತುವನ್ನು ಆಯ್ದುಕೊಂಡು, ಅಷ್ಟೇ ವಿಶಿಷ್ಟವಾದ ಕತೆಯನ್ನು ಹೆಣೆಯುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಕಾಲಘಾಟಿಯ ಜೈಲೊಂದರಲ್ಲಿ ನಿಗೂಢವಾಗಿ ಮಾಯವಾಗಿರುವ ಖೈದಿ ಹೇಗೆ ತಪ್ಪಿಸಿಕೊಂಡ. ತನಿಖೆಯಲ್ಲಿ ಬಯಲಾಗುವ ವಿಷಯಗಳು ರೋಮಾಂಚನಕಾರಿಯಾಗಿದೆ. ಕಾದಂಬರಿಯಲ್ಲಿ ಬರುವ ಸೀಮಿತ ಪಾತ್ರಗಳಾದರೂ ಇಲ್ಲಿ ಬರುವ ಲೀಲಮ್ಮ ಪಾತ್ರ, ಅವಳು ಅನುಭವಿಸಿರುವ ನೋವು ಮನಸಿನಲ್ಲಿ ಹಚ್ಚು ಹಾಕಿದ ಹಾಗೆ ಉಳಿಯುತ್ತದೆ . ಇದೊಂದು ವೈಜ್ಞಾನಿಕ ಕಾದಂಬರಿಯೂ ಹೌದು. ಓದುತ್ತಾ ಹೋದಂತೆ ನೂರೆಂಟು ಯೋಚನೆಗಳು ಕಾಡತೊಡಗುತ್ತವೆ. ಹಲವು ಸಾಲುಗಳು ಓದಿದ ನಂತರವು ಮನಸ್ಸಲ್ಲಿ ಉಳಿಯುವಂತಿವೆ.

## ಟ್ವೀಟ್‌ಮೆಂಟ್

**ಅಭಿಷೇಕ್:** ಕಟ್ಟೆಡದವರೂ ಕಡುಬಲದವರೂ ಹೆಚ್ಚುಮಟ್ಟಿಗೆ ಕನ್ನಡ ವಿರೋಧಿಗಳೇ ಆಗಿರುತ್ತಾರೆ, ಕನ್ನಡಪರತೆ ಹೆಚ್ಚುಮಟ್ಟಿಗೆ ನಡುನೆಲೆಯವರಲ್ಲಿ (ಒಂದೆರಡು ಹೆಜ್ಜೆ ಎಡಕ್ಕೂ ಬಲಕ್ಕೂ ನಡೆದಿರಲಿ) ಕಾಣಸಿಗುತ್ತದೆ. ಈ ನಡುನೆಲೆಗೆ ಕಡುಬಲದವರನ್ನು ತರುವುದು ಕಟ್ಟೆಡದವರನ್ನು ತರುವುದಕ್ಕಿಂತ ಸುಲಭವಾಗಿರುತ್ತದೆ.

ಕಟ್ಟೆಡ - ಕಡು-ಎಡ, far & left

**ಮಹೇಶ್ ಬೆಳವಾಡಿ:** ನಡುನೆಲೆಗೆ ತರುವ ಕುರಿತ ಮೊದಲಿನ ಅನಿಸಿಕೆಗಿಂತ ಈ ಅನಿಸಿಕೆ ಒಪ್ಪಬಹುದು.

## ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ನಿಧನರಾದ ಸುರ್ಜಿತ್ ಪಟಾರ್ ಯಾವ ಭಾಷೆಯ ಕವಿಯಾಗಿದ್ದರು?



- ಎ. ಮಲಯಾಳಂ.
- ಬಿ. ಕನ್ನಡ.
- ಸಿ. ಪಂಜಾಬಿ.
- ಡಿ. ಮರಾಠಿ.

ಉತ್ತರ: ಸಿ. ಪಂಜಾಬಿ

### ಮಾಹಿತಿ

ಇತ್ತೀಚೆಗೆ ಖ್ಯಾತ ಪಂಜಾಬಿ ಕವಿ, ಪದ್ಮಶ್ರೀ ಪುರಸ್ಕೃತ ಸುರ್ಜಿತ್ ಪಟಾರ್, ಪಂಜಾಬ್‌ನ ಲುಧಿಯಾನದಲ್ಲಿ ತಮ್ಮ 79 ನೇ(11 ಮೇ 2024) ವಯಸ್ಸಿನಲ್ಲಿ ನಿಧನರಾದರು. ಅವರಿಗೆ ರಾಜಕೀಯ ಮತ್ತು ಸಾಹಿತ್ಯ ವಲಯದಿಂದ ಶ್ರದ್ಧಾಂಜಲಿಗಳ ಮಹಾಪೂರವೇ ಹರಿದುಬಂದಿತು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ಪಂಜಾಬ್ ವಿಧಾನಸಭಾ ಸ್ಪೀಕರ್ ಕುಲ್ತಾರ್ ಸಿಂಗ್ ಸಂಧ್ವಾನ್ ಅವರು ಪಂಜಾಬಿ ಭಾಷೆಯನ್ನು ಉತ್ತೇಜಿಸುವ ಮತ್ತು ಸಂರಕ್ಷಿಸುವಲ್ಲಿ ಪಟಾರ್ ಅವರ ಜಾಗತಿಕ ಪ್ರಭಾವವನ್ನು ಅಂಗೀಕರಿಸುವ ಮೂಲಕ ಆಳವಾದ ದುಃಖವನ್ನು ವ್ಯಕ್ತಪಡಿಸಿದ್ದರು. 'ಕ್ಯಾಂಡಲ್ಸ್', 'ಹನೆರೆ ವಿಚ್ ಸುಲ್ಗಡಿ ವರನ್ಮಾಲಾ', 'ಫಲ್ಸಾ' ಹೀಗೆ ಹಲವಾರು ಕೃತಿಗಳನ್ನು ಬರೆದ ಅವರಿಗೆ ಪದ್ಮಶ್ರೀ,ಪಂಜಾಬ್ ಸಾಹಿತ್ಯ ಅಕಾಡೆಮಿ ಅವಾರ್ಡ್, ಸರಸ್ವತಿ ಸಮ್ಮಾನ್ ಒಳಗೊಂಡಂತೆ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಅರಸಿ ಬಂದಿದ್ದವು.

## ವಿಜ್ಞಾನ ವಿಸ್ಮಯ

ಕೆ. ನಟರಾಜ್

# ಅಮೆಜಾನಿನ ಭಯಾನಕ ಪ್ರಾಣಿಗಳು

ಅಮೆಜಾನ್ ದಕ್ಷಿಣ ಅಮೆರಿಕದಲ್ಲಿರುವ ಪ್ರಪಂಚದ ಎರಡನೇ ಅತ್ಯಂತ ದೊಡ್ಡನದಿ; ಉದ್ದವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅದರಲ್ಲಿ ಅಮೆಜಾನ್‌ಗೆ ಎರಡನೇ ಸ್ಥಾನ. ಇದರ ಅಗಾಧತೆಯ ಅರಿವಾಗಬೇಕಾದರೆ ಇಲ್ಲಿ ಕೇಳಿ, ಇದರ ನಂತರ ಬರುವ ಉಳಿದ ಏಳು ನದಿಗಳ ಒಟ್ಟು ವಿಸ್ತಾರದಷ್ಟು ಇದೊಂದೇ ನದಿ ಅದೇ ಅಮೆಜಾನ್! ಈ ನದಿ ಆವರಿಸಿರುವ ಪ್ರದೇಶವೇ ಎಪ್ಪತ್ತು ಲಕ್ಷದ ಐವತ್ತು ಸಾವಿರ ಚದರ ಕಿಲೋಮೀಟರ್‌ಗಳು! ಅಂದರೆ ಪ್ರಪಂಚದಲ್ಲಿರುವ ಎಲ್ಲಾ ನದಿಗಳು ಆವರಿಸಿರುವ ಒಟ್ಟು ವಿಸ್ತಾರದ ಐದನೆಯ ಭಾಗವನ್ನು ಈ ನದಿಯೊಂದೇ ಆವರಿಸಿದೆ. ಈ ನದಿ ಒಟ್ಟು ಏಳು ದೇಶಗಳಲ್ಲಿ ಹರಿಯುತ್ತದೆ. ಇದರ ಅಗಲ 1.6ರಿಂದ 10 ಕಿ.ಮೀ.ಗಳಾಗಿದ್ದು, ಮಳೆಗಾಲದಲ್ಲಿ ಸುಮಾರು 50 ಕಿ.ಮೀ.ಗಳವರೆಗೂ ಹರಡಿರುತ್ತದೆ. ಅಟ್ಲಾಂಟಿಕ್ ಸಾಗರದ ಬಳಿ ಇದು ಸೇರುವ ಜಾಗ ಸುಮಾರು 240 ಕಿ.ಮೀ.ಗಳವರೆಗೆ ಹರಡಿದೆ. ವಿಶೇಷವೆಂದರೆ, ಈ ನದಿಗೆ ಅಡ್ಡಲಾಗಿ ಸೇತುವೆಗಳೇ ಇಲ್ಲ! ಇದನ್ನು ಸಮುದ್ರ ನದಿ ಎಂದೇ ಕರೆಯಲಾಗುತ್ತದೆ. ಇದರ ಉದ್ದ 6400 ಕಿ.ಮೀ.

**ಇಂತಹ ಭವ್ಯ ನದಿ ಮತ್ತು ನದಿಯ ತೀರದಲ್ಲಿ ವಾಸಿಸುವ ಭಯಾನಕ ಪ್ರಾಣಿಗಳ ಬಗ್ಗೆ ತಿಳಿಯೋಣ ಬನ್ನಿ**

**ಅನಕೊಂಡ:** ಇವು ಪ್ರಪಂಚದಲ್ಲೇ ಅತ್ಯಂತ ದೊಡ್ಡ ಹಾವುಗಳಾಗಿವೆ. ಇವು ಸುಮಾರು 30 ಅಡಿಗಳವರೆಗೆ ಉದ್ದವಾಗಿದ್ದು, 500 ಪೌಂಡ್ ತೂಗಬಲ್ಲವು. ಇದೊಂದು ಆಕ್ರಮಣಕಾರಿ ಪ್ರಾಣಿ. ಇವುಗಳಿಗೆ ಇಂತಹ ಪ್ರಾಣಿಯೇ ಆಹಾರ ಎನ್ನುವಂತಿಲ್ಲ! ಯಾವ ಪ್ರಾಣಿಯಾದರೂ ಸೈ! ಆಡು, ಕತ್ತೆ, ಹಕ್ಕಿ, ಮೀನು, ಕೆಲವೊಮ್ಮೆ ಮನುಷ್ಯರನ್ನೂ ಕೂಡ ಇದು ತಿಂದು ತೇಗಬಲ್ಲದು. ಈ ಅನಕೊಂಡಗಳು ತಮ್ಮ ಬೇಟೆಯನ್ನು ಸುತ್ತಿ ಉಸಿರುಗಟ್ಟಿಸಿಕೊಂಡು ಕೊನೆಗೆ ಅಗಿಯದೆ ಹಾಗೆಯೇ ಇಡಿಯಾಗಿ ನುಂಗಿಬಿಡುತ್ತವೆ. ಇದು ದೈತ್ಯಹಾವು ನಿಜ. ಆದರೆ ಅನಕೊಂಡ ವಿಷಕಾರಿಯಲ್ಲ,

**ಅರಾಪೈಮಾ:** ಇದೊಂದು ವಿಶೇಷ ಜಾತಿಯ ದೊಡ್ಡ ಮೀನು. ಇದರ ಇನ್ನೊಂದು ಹೆಸರು ಪೈರಾರುಕು. ಇದೊಂದು ಗಾಳಿಯಲ್ಲಿ ಉಸಿರಾಡುವ ಮೀನು. ಸಿಹಿನೀರಿನಲ್ಲಿ ವಾಸಿಸುವ ಈ ದೈತ್ಯ ಮೀನು ಸುಮಾರು 10 ಅಡಿ ಉದ್ದವಿದ್ದು, 440 ಪೌಂಡ್ವರೆಗೂ ಇದರ ತೂಕ ಇರುತ್ತದೆ. ಇದು ಗಾಳಿಗಾಗಿ 15- 20 ನಿಮಿಷಕ್ಕೊಂದು ಸಲ ನೀರಿನಿಂದ ಆಚೆಗೆ ಬರುತ್ತದೆ. ಜೀವಂತವಿರುವ ಯಾವ ಪ್ರಾಣಿ ಸಿಕ್ಕಿಹಾಕಿಕೊಂಡರೂ, ಅರಾಪೈಮಾ ಅದನ್ನು ಸಲೀಸಾಗಿ ಸ್ವಾಹಾ ಮಾಡಿಬಿಡುತ್ತದೆ. ಇದರ ಬೇಟೆಗೆ ಮೀನುಗಳು, ಹಾವು, ಕಪ್ಪೆ ಮತ್ತು ಇತರೆ ಉಭಯವಾಸಿಗಳು, ಕೊನೆಗೆ ಮನುಷ್ಯರು ಸಿಕ್ಕರೂ ಸರಿಯೇ! ಅತ್ಯಂತ ಪ್ರಾಚೀನ ಜಲಚರವಾಗಿರುವ ಇದು 200 ದಶಲಕ್ಷ ವರ್ಷಗಳ ಹಿಂದೆ ಜೀವಿಸಿದ್ದ ಡೈನೋಸಾರ್‌ಗಳು ಸಮಕಾಲೀನ ಪ್ರಾಣಿಯಾಗಿದೆ.

**ಕಪ್ಪು ಕೈಮಾನ್:** ಇದು ಅಮೆಜಾನ್ ನದಿಯಲ್ಲಿ ಕಂಡುಬರುವ ಇನ್ನೊಂದು ಅತ್ಯಂತ ಆಕ್ರಮಣಕಾರಿ ಪ್ರಾಣಿ. ಇದೊಂದು ಮಾಂಸಾಹಾರಿ ಸರೀಸೃಪ. ಇದೊಂದು ಮೊಸಳೆ ಜಾತಿಯ ಪ್ರಾಣಿ. ಇದಕ್ಕೆ ಮನುಷ್ಯನನ್ನು ಬಿಟ್ಟರೆ ಬೇರೆ ಶತ್ರುಗಳಿಲ್ಲ ! ಇಂದು ಇಡೀ ಪ್ರಪಂಚದಲ್ಲಿ ಬದುಕುಳಿದಿರುವ ಕೈಮಾನ್‌ಗಳ ಸಂಖ್ಯೆ 2,000ಕ್ಕಿಂತಲೂ ಕಮ್ಮಿ. ಈ ಪೈಕಿ ಸುಮಾರು 20 ಅಡಿ ಉದ್ದವಿದ್ದು, 3000 ಪೌಂಡ್‌ಗಳವರೆಗೆ ತೂಗಬಲ್ಲವು! ನದಿಯಲ್ಲಿನ ಯಾವುದೇ ಪ್ರಾಣಿ ಕ್ಷಣಮಾತ್ರದಲ್ಲಿ ಈ ಪ್ರಾಣಿಗೆ ರಸದೌತಣವಾಗಿ ಪರಿಣಮಿಸುತ್ತದೆ.

**ಜಾಗ್ವಾರ್:** ಇದೊಂದು ಅತ್ಯಂತ ಅಪಾಯಕಾರಿ ಸಸ್ತನಿ ಪ್ರಾಣಿ. ಅಮೆಜಾನ್ ನದಿಯ ಆಸುಪಾಸಿನಲ್ಲೇ ಇದರ ವಾಸ. ದೊಡ್ಡ ಬೆಕ್ಕಿನ ಜಾತಿಯ ಪ್ರಾಣಿಯಾಗಿರುವ ಇದು ಸುಮಾರು 6 ಅಡಿ ಉದ್ದವಿದ್ದು, 250 ಪೌಂಡ್ ತೂಗಬಲ್ಲದು. ಇದು ಅತ್ಯಂತ ಚತುರ ಈಜುಗಾರನಾಗಿದ್ದು ಮರಗಳನ್ನು ಲೀಲಾಜಾಲವಾಗಿ ಹತ್ತುತ್ತದೆ. ಅತ್ಯಂತ ವೇಗವಾಗಿ ಓಡಬಲ್ಲದು. ಈ ಜಾಗ್ವಾರ್ ಅನಾಮತ್ತಾಗಿ ತನ್ನ ಬೇಟೆಯ ಕೊರಳಿಗೇ ಬಾಯಿ ಹಾಕಿ ರಕ್ತವನ್ನು ಹೀರಿ ಕೆಲವೇ ಸೆಕೆಂಡುಗಳಲ್ಲಿ ನಿಶ್ಚಲಗೊಳಿಸಿಬಿಡುತ್ತದೆ. ಈ ಪ್ರಾಣಿ ಇತ್ತೀಚೆಗೆ ವಿನಾಶದ ಅಂಚಿನಲ್ಲಿದೆ. ಭಾರತದ ಸೇನಾಬತ್ತಳಿಕೆಯಲ್ಲಿರುವ ಒಂದು ಯುದ್ಧವಿಮಾನಕ್ಕೆ ಜಾಗ್ವಾರ್ ಎಂದೇ ಹೆಸರಿಡಲಾಗಿದೆ.

**ಪಿರಾನ್ಹಾ :** ಕೇವಲ 6 ರಿಂದ 10 ಇಂಚು ಉದ್ದವಿರುವ, ಅತ್ಯಂತ ಭಯಾನಕ ಮೀನಿದು. ಇವು ಅಮೆಜಾನ್ ನದಿಯಲ್ಲಿ ಮಾತ್ರ ಕಂಡುಬರುವ ವಿಶೇಷ ಜಾತಿಯ ಮೀನುಗಳಾಗಿವೆ. ಇವು ಅತ್ಯಂತ ಬಲವಾದ ದವಡೆಗಳನ್ನು ಹೊಂದಿದ್ದು, ಚೂಪಾದ ರೇಜರ್‌ನಂತಹ ಹಲ್ಲುಗಳಿವೆ. ಸಾಮಾನ್ಯವಾಗಿ ಪಿರಾನ್ಹಾಗಳು ಗುಂಪುಗುಂಪಾಗಿ ದಾಳಿ ನಡೆಸುತ್ತವೆ. ಇವು ಕ್ಷಣಮಾತ್ರದಲ್ಲಿ ಬೇಟೆಯನ್ನು ಚೂರು ಮಾಡಿ ತಿಂದುಬಿಡಬಲ್ಲವು. ಒಟ್ಟಿನಲ್ಲಿ ಅಮೆಜಾನ್ ನದಿಯಲ್ಲಿರುವ ಪ್ರಾಣಿಗಳಿಗೆ ಹಾಗೂ ಪ್ರಯಾಣ ಮಾಡುವವರಿಗೆ ಸಿಂಹಸ್ವಪ್ನ ಈ ಪಿರಾನ್ಹಾ ಮೀನುಗಳು.

## ಕ್ಷೇಮ ಸಮಾಚಾರ

# ಮಾನಸಿಕ ಆರೋಗ್ಯಕ್ಕೆ ಒಂದಿಷ್ಟು ಟಿಪ್ಸ್

ಮನುಷ್ಯ ದೈಹಿಕವಾಗಿ ಸುದೃಢನಾಗಿರಬೇಕೆಂದರೆ ಮಾನಸಿಕ ಆರೋಗ್ಯವೂ ಅತಿಮುಖ್ಯ. ಅದಕ್ಕೋಸ್ಕರ ಜೀವನ ಶೈಲಿಯಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವುದು ಅವಶ್ಯಕ.

- ಆರೋಗ್ಯ ತಜ್ಞರ ಪ್ರಕಾರ, ಯಾವುದೇ ವ್ಯಕ್ತಿ ಉತ್ತಮ ಆರೋಗ್ಯಕ್ಕಾಗಿ ನೀರು, ಆಹಾರ ಎಷ್ಟು ಮುಖ್ಯವೋ ಪ್ರತಿನಿತ್ಯ 7ರಿಂದ 9 ಗಂಟೆ ನಿದ್ದೆ ಮಾಡುವುದು ಕೂಡ ತುಂಬಾ ಅಗತ್ಯ. ಸರಿಯಾಗಿ ನಿದ್ದೆ ಮಾಡದಿದ್ದರೆ ಅದು ನಮ್ಮ ಮಾನಸಿಕ ಆರೋಗ್ಯದ ಮೇಲೂ ಪ್ರಭಾವ ಬೀರುತ್ತದೆ.
- ನಿತ್ಯ ಯೋಗ-ವ್ಯಾಯಾಮ ಮಾಡುವುದರಿಂದ ದೈಹಿಕವಾಗಿ ಆರೋಗ್ಯವಾಗಿರುವುದು ಮಾತ್ರವಲ್ಲ, ಇದು ವ್ಯಕ್ತಿಯ ಮಾನಸಿಕ ಆರೋಗ್ಯದ ಮೇಲೂ ಕೂಡ ಸಕಾರಾತ್ಮಕ ಪರಿಣಾಮವನ್ನು ಉಂಟು ಮಾಡುತ್ತದೆ.
- ಪ್ರತಿದಿನ ಸುಮಾರು 15 ರಿಂದ 20 ನಿಮಿಷಗಳು ಧ್ಯಾನ ಮಾಡುವ ಪ್ರಕ್ರಿಯೆಗೆ ಮೀಸಲಿಡಬೇಕು. ಇದರಿಂದ ಮನಸ್ಸಿನ ಮೇಲೆ ನೀವು ನಿಯಂತ್ರಣ ಹೊಂದಲು ಸಾಧ್ಯವಾಗುತ್ತದೆ.
- ಸಂಸ್ಕರಿಸಿದ ಆಹಾರ ನಮ್ಮ ಆರೋಗ್ಯದ ಮೇಲೆ ನಕರಾತ್ಮಕ ಪರಿಣಾಮವನ್ನು ಬೀರುತ್ತದೆ. ಯಾವುದೇ ವ್ಯಕ್ತಿಗೆ ಮಾನಸಿಕ ಆರೋಗ್ಯ ಚೆನ್ನಾಗಿರಬೇಕು ಎಂದರೆ ದೈನಂದಿನ ಆಹಾರದಲ್ಲಿ ಧಾನ್ಯಗಳು, ಪ್ರೊಟೀನ್, ಆರೋಗ್ಯಕರ ಕೊಬ್ಬಿನ ಆಹಾರಗಳು, ತಾಜಾ ಹಣ್ಣು-ತರಕಾರಿಗಳ ಸೇವನೆ ಬಹಳ ಮುಖ್ಯ.
- ಬೆಳಗ್ಗೆ ತಿಂಡಿ ತಿನ್ನುವ ಸಮಯದಿಂದ ಹಿಡಿದು ಮಧ್ಯಾಹ್ನ ಊಟದ ಸಮಯದ ಮಧ್ಯದಲ್ಲಿ ಮತ್ತು ರಾತ್ರಿಯ ಊಟದ ಸಮಯದ ಮಧ್ಯದಲ್ಲಿ ಸುಮಾರು ನಾಲ್ಕರಿಂದ ಐದು ಗಂಟೆಗಳು ಅಂತರವನ್ನು ಕಾಪಾಡಬೇಕಾಗುತ್ತದೆ. ಏಕೆಂದರೆ ಇದು ಜೀರ್ಣಾಂಗ ವ್ಯವಸ್ಥೆಗೆ ಬಹಳಷ್ಟು ಅಗತ್ಯವಿದೆ.
- ಕೆಲವರಿಗೆ ಪ್ರತಿ ದಿನ ಬೆಡ್ ಕಾಫಿ ಕುಡಿಯದಿದ್ದರೆ ದಿನವೇ ಆರಂಭವಾಗುವುದಿಲ್ಲ. ಸಂಶೋಧನೆಗಳ ಪ್ರಕಾರ, ನಿತ್ಯ ಕೆಫಿನ್ ಸೇವನೆಯು ನಮ್ಮ ಮಾನಸಿಕ ಆರೋಗ್ಯದ ಮೇಲೂ ಕೂಡ ನಕಾರಾತ್ಮಕ ಪರಿಣಾಮವನ್ನು ಬೀರಬಹುದು ಎಂದು ತಿಳಿದು ಬಂದಿದೆ. ಇದನ್ನು ತಪ್ಪಿಸಲು ಕೆಫಿನ್ ಸೇವನೆಯನ್ನು ನಿಯಂತ್ರಿಸಿ.
- ಸೂರ್ಯನ ಕಿರಣಗಳು ಡಿ ವಿಟಮಿನ್‌ನ ಉತ್ತಮ ಮೂಲ. ಪ್ರತಿನಿತ್ಯ 10 ರಿಂದ 15 ನಿಮಿಷಗಳವರೆಗೆ ಸೂರ್ಯನ ಕಿರಣಗಳಿಗೆ ಒಡ್ಡಿಕೊಳ್ಳುವುದರಿಂದ ಹೆಚ್ಚಿನ ಆರೋಗ್ಯ ಪ್ರಯೋಜನಗಳು ಲಭ್ಯವಿದೆ. ಅದರಲ್ಲೂ ಎಳೆ ಬಿಸಿಲಿಗೆ ನಮ್ಮನ್ನು ನಾವು ಒಡ್ಡಿ ಕೊಳ್ಳುವುದರಿಂದ ಅದು ನಮ್ಮ ಮಾನಸಿಕ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ.

ವಿಶ್ವವಾಣಿ
@vishwavaninews
ಬೆಂಗಳೂರು ಗುರುವಾರ
27 | 06 | 2024

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

## ಬಿ ಪಾಸಿಟಿವ್

### ನೋ ಎಂದು ಹೇಳಿ

ಇಂದಿನ ಪೀಳಿಗೆಯ ಪೋಷಕರ ಮಾತು, ನಮ್ಮ ಮಕ್ಕಳಿಗೆ ಯಾವುದೇ ಕುಂದು ಕೊರತೆ ಇಲ್ಲದ ಹಾಗೆ ಇಡೀ ಬದುಕನ್ನು ಬದುಕಬೇಕು, ಅವರು ಕೇಳಿದ ಎಲ್ಲವನ್ನೂ, ಕೇಳಿದ ಆ ಕ್ಷಣವೇ ಅವರ ಮುಂದೆ ಇರುತ್ತದೆ. ನಾವು ಪಟ್ಟ ಕಷ್ಟ ಯಾವ ಕಾರಣಕ್ಕೂ ಅವರು ಅನುಭವಿಸಬಾರದು ಎನ್ನುವುದಾಗಿರುತ್ತದೆ. ಒಮ್ಮೆ ಯೋಚಿಸಿ, ಬಾಲ್ಯದಲ್ಲಿ ನಾವು ಕೇಳಿದ ಎಷ್ಟು ವಸ್ತು ಅಥವಾ ವಿಷಯದಲ್ಲಿ, ನಮ್ಮ ಪೋಷಕರು ಸಮ್ಮತಿ ನೀಡಿದ್ದರು. ಆಗೆಲ್ಲಾ ಹತ್ತು ವಿಷಯದಲ್ಲಿ ಒಂದು ನೆರವೇರಿದರೆ ಅದು ಅದ್ಭುತವೇ ಸರಿ. ಹಾಗೆ ಕೇಳಿ ಪಡೆದ ವಸ್ತುವನ್ನು ಎಷ್ಟು ಜೋಪಾನವಾಗಿ ನೋಡಿಕೊಂಡಿದ್ದೆವು. ಜೀವನದಲ್ಲಿ ಎಲ್ಲವೂ ಸುಲಭಕ್ಕೆ ಸಿಗುವುದಿಲ್ಲ, ದೊಡ್ಡವರಾದ ನಂತರ ಅದು ಎಷ್ಟೋ ವಿಷಯಗಳಲ್ಲಿ ಅಂದುಕೊಂಡಂತೆ ಆಗದೆ ಇದ್ದರು, ಅದು ನಮ್ಮನ್ನು ಯಾವ

ರೀತಿಯಲ್ಲೂ ಕುಗ್ಗಿಸಲಿಲ್ಲ! ಇಷ್ಟು ದೊಡ್ಡ ಜೀವನದ ಪಾಠವನ್ನು ಕಲಿತ ನಾವೇ, ಪ್ರೀತಿ, ಕಾಳಜಿ ಹೆಸರಲ್ಲಿ ನಮ್ಮ ಮಕ್ಕಳನ್ನು ನಿಶಕ್ತರಾಗಿಸುತ್ತಿದ್ದೇವೆ. ಸೋಲು ಅಥವಾ ಆಸೆ ಪಟ್ಟಂತೆ ನಡೆಯದೆ ಹೋದಾಗ ಅದನ್ನು ತಾಳುವ ತಾಳ್ಮೆಯಿಲ್ಲದೆ ದುಡುಕುವ ಈ ಪೀಳಿಗೆಯ ಮನೋಭಾವಕ್ಕೆ ಪರೋಕ್ಷವಾಗಿ ಕಾರಣವಾಗಿದ್ದೇವೆ. ಮಕ್ಕಳು ಅತ್ತರೂ, ಬೇಸರ ಮಾಡಿಕೊಂಡರೂ ಪರವಾಗಿಲ್ಲ. ಅವರಲ್ಲಿ ಎಲ್ಲವನ್ನೂ ಎದುರಿಸುವ ಮನೋಭಾವ ಮೂಡಬೇಕು ಎಂದಾದರೆ, ನಾವು ಕೆಲವು ವಿಷಯದಲ್ಲಿ ನೋ ಎಂದು ಹೇಳಲು ಕಲಿಯಲೇಬೇಕು. ಇದು ಬಹಳಷ್ಟು ಜನರಿಗೆ ಕಷ್ಟದ ಕೆಲಸ. ಆದರೂ ಮನಸ್ಸನ್ನು ಗಟ್ಟಿಯಾಗಿಸಿಕೊಂಡು, ಮಕ್ಕಳ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡಾಗ ನೋ ಎನ್ನುವುದು ಕಷ್ಟದ ಸಂಗತಿಯೇನಲ್ಲ.

• ಮಂಜುಶ್ರೀ ಮುರಳೀಧರ್

## ಲವ್ ಎವೆರಿ ಬಾಡಿ

ಜನರು ಕ್ಯಾನ್ಸರ್ ಹೆಸರು ಕೇಳಿದ ಕೂಡಲೇ ಬೆಚ್ಚಿ ಬೀಳುವುದು ಸಾಮಾನ್ಯ. ಚಿಕಿತ್ಸೆಯ ವಿಧಾನ, ಅದರಿಂದಾಗುವ ಅಡ್ಡ ಪರಿಣಾಮಗಳು, ನೋವು, ಯಾತನೆಯ ಬಗ್ಗೆ ಸಾಕಷ್ಟು ತಪ್ಪು ಕಲ್ಪನೆಗಳಿವೆ. ಕ್ಯಾನ್ಸರ್‌ಗಾಗಿ ನೀಡುವ ಕಿಮೋಥೆರಪಿ ಹಾಗೂ ರೇಡಿಯೇಷನ್ ಚಿಕಿತ್ಸೆಯಿಂದ ದೇಹ ಬಸವಳಿದು ಹೋಗುತ್ತದೆ. ಈ ಚಿಕಿತ್ಸೆಯ ಪರಿಣಾಮವಾಗಿ ತಲೆ ಕೂದಲು ಉದುರುವುದು ಸೇರಿದಂತೆ ದೇಹದ ಮೇಲೆ ಸಾಕಷ್ಟು ಅಡ್ಡ ಪರಿಣಾಮ ಉಂಟಾಗುತ್ತದೆ ಎಂಬ ಕಲ್ಪನೆಯೂ ರೋಗಿಗಳ ಕಳವಳಕ್ಕೆ ಕಾರಣ. ಆದರೆ ಕಾಲ ಬದಲಾಗಿದೆ. ಈಗ ಕಿಮೋಥೆರಪಿ ಮಾಡುವ ಬಗೆ ಹಾಗೂ ಬಳಸುವ ಔಷಧಗಳನ್ನು ಮತ್ತಷ್ಟು ಉತ್ತಮಪಡಿಸಿಲಾಗಿದೆ. ಇದರಿಂದಾಗಿ ಕ್ಯಾನ್ಸರ್ ಚಿಕಿತ್ಸೆ ಮೊದಲಿನಷ್ಟು ಯಾತನಾದಾಯಕ ಅಲ್ಲ ಎಂಬುದು ತಜ್ಞರ ಅಭಿಪ್ರಾಯ.

• ದೇಹಾಭಿ'ಮಾಣಿ'

## ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com



# ಡಿಜಿಟಲ್ ಯುಗದ ಪಾಪ್ ಕಾರ್ನ್ ಮಿದುಳು

ತಂತ್ರಜ್ಞಾನದ ರೆಕ್ಕೆ ಕಟ್ಟಿ ಹಾರುತ್ತಿರುವ ಇಂದಿನ ಯುಗದಲ್ಲಿ ನಮ್ಮ ಮಿದುಳು ನಿರಂತರವಾಗಿ ಮಾಹಿತಿಗಳ ಪೂರದಿಂದ ಪ್ರಚೋದನೆಗೊಳಗಾಗುತ್ತಿದೆ. ಹೀಗಾಗಿ ನಮ್ಮ ಚಿತ್ತವೆಂಬುದು ಒಲೆಯ ಮೇಲೆ ಕಾಳು ಸಿಡಿದು ಪಾಪ್ ಕಾರ್ನ್ ಆಗುವೋಪಾದಿಯಲ್ಲಿ ಅತಂತ್ರಕ್ಕೊಳಗಾಗುತ್ತಿದೆ. ಒಂದು ನಿರ್ದಿಷ್ಟ ಚಿಂತನೆ, ಏಕಾಗ್ರತೆ ಈ ಕಾಲದ ಕ್ಲಿಷ್ಟ ಸವಾಲಾಗಿ ಪರಿಣಮಿಸುತ್ತಿರುವುದಂತೂ ಖರೆಯೇ.

ಒಂದು ನಿರ್ದಿಷ್ಟ ವಿಷಯದ ಮೇಲೆ ಸಾಮಾನ್ಯ ಮನುಷ್ಯನ ಸರಾಸರಿ ಏಕಾಗ್ರತಾ ಅವಧಿಯು 2003 ರಲ್ಲಿ 2.30 ನಿಮಿಷ ಇದ್ದದ್ದು 2013ರಲ್ಲಿ 75 ಸೆಕೆಂಡುಗಳಿಗೆ ಇಳಿದಿದೆ. ಈ ಪ್ರಮಾಣವು 2023ರ ಅಂತ್ಯಕ್ಕೆ 30– 40 ಸೆಕೆಂಡುಗಳಷ್ಟು ಕಡಿಮೆಯಾಗಿದೆ. ಸ್ಮಾರ್ಟ್ ಫೋನ್‌ಗಳ ಬಳಕೆಯು ನಮ್ಮ ಏಕಾಗ್ರತಾ ಮಟ್ಟವನ್ನು ಗಮನಾರ್ಹವಾಗಿ ಕುಂದಿಸಿರುವುದು ಮೇಲ್ನೋಟಕ್ಕೆ ಗೋಚರವಾಗುತ್ತಿದೆ. ಇಷ್ಟು ಸಮಯದ ಬಳಿಕ ನಮಗೆ ಆ ವಿಷಯದಲ್ಲಿ ಆಸಕ್ತಿ ಉಳಿಯದೇ ಹೋದಾಗ ಫೋಕಸ್ ಮಾಡುವುದು ಕಷ್ಟವಾಗುತ್ತದೆ. ಬಹುತೇಕ ಶಾರ್ಟ್/ರೀಲ್‌ಗಳು ಇಷ್ಟೇ ಅವಧಿಯದ್ದವು ಎಂಬುದು ಇಲ್ಲಿ ಗಮನಾರ್ಹ.

ಅಂತರಗಂಗೆ
• ಡಾ. ಸೌಮ್ಯ ಕೆ.ವಿ.

ಕೆಲವೊಮ್ಮೆ ಗೊತ್ತುಗುರಿಯಿಲ್ಲದೆ ಸಾಮಾಜಿಕ ಜಾಲ ತಾಣಗಳಲ್ಲಿ ಸ್ಕ್ರಾಲ್ ಮಾಡಿರುವುದು ಕಿಲೋಮೀಟರ್‌ಗಟ್ಟಲೇ ಆಗಿರುವುದು ವಿಚಿತ್ರವಾದರೂ ಸತ್ಯ! ಇದ್ರಿಂದಾಗಿ ನಮ್ಮ ಮನಸ್ಸು ಸಾಕಷ್ಟು ಒತ್ತಡಕ್ಕೊಳಗಾಗುವುದು ಸಾಮಾನ್ಯ. ಚಿತ್ತವೆಂಬುದು ಒಲೆಯ ಮೇಲೆ ಸಿಡಿಯುತ್ತಿರುವ ಪಾಪ್ ಕಾರ್ನ್ ರೀತಿಯಲ್ಲಿ ಅತಂತ್ರಕ್ಕೆ ಒಳಗಾಗುತ್ತಿದೆ.

### ಏನಿದು ಪಾಪ್‌ಕಾರ್ನ್ ಮಿದುಳು? ಈ ಕೆಳಗಿನ ನಿದರ್ಶನಗಳನ್ನು ಗಮನಿಸಿ

- ಒಂದು ಪ್ರಾಜೆಕ್ಟಿನಲ್ಲಿ ತೊಡಗಿದ್ದೀರಿ. ಟ್ಯಾಬ್‌ಗಳ ನಡುವೆ ಗಿರಕಿ ಹೊಡೆಯುತ್ತಿದ್ದೀರಿ. ಫೇಸ್ ಬುಕ್, ವಾಟ್ಸಾಪು, ಇನ್ಸ್ಟಾಗ್ರಾಂ ನಡುನಡುವೆ ಪರಿಶೀಲಿಸುತ್ತಾ ಆಗೀಗ ಲೇಟೆಸ್ಟ್ ನ್ಯೂಸ್ ನೋಡುತ್ತಾ ಮತ್ತೆ ಪ್ರಾಜೆಕ್ಟ್‌ನಲ್ಲಿ ಮುಂದುವರೆದಿದ್ದೀರಿ. ಆದರೆ ಒಂದೇ ಕಡೆ ಫೋಕಸ್ ಮಾಡಲಾಗುತ್ತಿಲ್ಲ.
- ಯಾವ ಗೊತ್ತುಗುರಿ ಇಲ್ಲದೇ ಸಾಮಾಜಿಕ ಜಾಲತಾಣದಲ್ಲಿ ತುಂಬ ಹೊತ್ತಿನಿಂದ ಸ್ಕ್ರಾಲ್ ಮಾಡುತ್ತಿದ್ದೀರಿ. ಆದರೆ ಯಾವುದೂ ಆಸಕ್ತಿದಾಯಕ ಎನ್ನಿಸುತ್ತಿಲ್ಲ. ಮೂವತ್ತು ಸೆಕೆಂಡಿನ ರೀಲ್ ಕೂಡಾ ಸಂಪೂರ್ಣ ನೋಡಿ ಮುಗಿಸದೇ ಮುಂದಿನದರತ್ತ ಧಾವಿಸುತ್ತಿದ್ದೀರಿ!
- ಟಿವಿ ನೋಡುವಾಗ ಒಂದು ಚಾನೆಲ್ಲಿನ ಒಂದು ಕಾರ್ಯಕ್ರಮವನ್ನು ಸಂಪೂರ್ಣವಾಗಿ ವೀಕ್ಷಿಸಲಾಗುತ್ತಿಲ್ಲ. ಚಾನೆಲ್‌ಗಳ ನಡುವೆ ಜಿಗಿದಾಡುತ್ತ ಅಲ್ಲೇ ಮಧ್ಯೆ ಸ್ಮಾರ್ಟ್‌ಫೋನ್ ಮೇಲೆ ಕೈಯ್ಯಾಡುತ್ತಿದೆ.
- ಹಲವು ಟಾಸ್ಕುಗಳನ್ನು ಒಟ್ಟಿಗೆ ಆರಂಭಿಸಿದ್ದೀರಿ. ಆದರೆ ಯಾವುದನ್ನೂ ಮುಗಿಸಲಾಗುತ್ತಿಲ್ಲ.
- ಅತಿ ಮುಖ್ಯವಾದ ಮೀಟಿಂಗ್ ನಡೆಯುತ್ತಿದೆ ಆದರೆ ತಲ್ಲೀನತೆ ಆಗುತ್ತಿಲ್ಲ. ಸ್ಮಾರ್ಟ್ ಫೋನ್ ಚೆಕ್ ಮಾಡಬೇಕೆಂಬ ತೀವ್ರ ತುಡಿತವಾಗುತ್ತಿದೆ.
- ಪರೀಕ್ಷೆಗೆ ಓದಲು ಕುಳಿತಿದ್ದೀರಿ ಆದರೆ ಏಕಾಗ್ರತೆ ಏನೇ ಮಾಡಿದರೂ ಬರುತ್ತಿಲ್ಲ. ನಡು ನಡುವೆ ಬ್ರೇಕ್ ನೆಪದಲ್ಲಿ ಸ್ನೇಹಿತರೊಂದಿಗೆ ಚಾಟಿಂಗ್ ಮಾಡುತ್ತಿದ್ದೀರಿ, ಅಂತರ್ಜಾಲದಲ್ಲಿ ಏನೋ ಸರ್ಚ್ ಮಾಡಲು ಹೋಗಿ ಮಾಹಿತಿ ಸಾಗರದಲ್ಲಿ ಮುಳುಗಿದ್ದೀರಿ. ಸಾಮಾಜಿಕ ಜಾಲತಾಣದಲ್ಲಿ ಅರಿವಿಲ್ಲದೇ ವಿಹರಿಸುತ್ತಿದ್ದೀರಿ.

ಇವುಗಳಲ್ಲಿ ಯಾವುದಾದರೂ ನಿಮ್ಮ ದೈನಂದಿನ ಅನುಭವಕ್ಕೆ ಬಂದಿರುವುದು ನಿಜವಾದರೆ ಒಂದು ಕಡೆ ಫೋಕಸ್ ಮಾಡಲು ಕಷ್ಟವಾಗುವ ಮಿದುಳಿನ ಚಡಪಡಿಕೆಯ ವಿದ್ಯಮಾನವೇ ಪಾಪ್ ಕಾರ್ನ್ ಮಿದುಳು!

### ಏನೆಲ್ಲಾ ತೊಂದರೆಗಳು?

- ಸೃಜನಶೀಲತೆ ಕುಂದುತ್ತದೆ.
- ಉದ್ಯೋಗದಲ್ಲಿ ಉತ್ಪಾದನಾ ಮಟ್ಟ ಕಡಿಮೆಯಾಗುತ್ತದೆ.
- ಮಾನಸಿಕ ಒತ್ತಡ ಹೆಚ್ಚುತ್ತದೆ.
- ಆತಂಕಕ್ಕೆ ಕಾರಣವಾಗಬಹುದು.
- ಮಿದುಳು ಮಂಜುಗಟ್ಟಿದ ಭಾವಕ್ಕೆ ಒಳಗಾಗಬಹುದು.
- ಸಂಬಂಧಗಳಲ್ಲಿ ಕಿರಿಕಿರಿ ಆಗಬಹುದು.
- ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ತೊಡಕುಂಟಾಗಬಹುದು.
- ಎಲ್ಲ ಇದ್ದಾಗಲೂ ಯಾವುದರಲ್ಲಿಯೂ ಸಂತಸ ಕಾಣದೇ ಹೋಗಬಹುದು.
- ಒಂದು ನಿರ್ಧಾರಕ್ಕೆ ಬರುವುದು ಕಷ್ಟವಾಗಬಹುದು.

### ಪಾಪ್ ಕಾರ್ನ್ ಮಿದುಳಿನ ನಿಯಂತ್ರಣ ಹೇಗೆ?

- ತಂತ್ರಜ್ಞಾನ ಹಾಗೂ ಸಾಮಾಜಿಕ ಜಾಲತಾಣ ಬಳಕೆಗೆ ಸ್ವ ನಿಯಂತ್ರಣ ಹಾಕಿಕೊಳ್ಳುವುದು.
- ಪ್ರತಿಯೊಂದು ಚಿಕ್ಕ ಕೆಲಸವನ್ನೂ ಮನಃಪೂರ್ವಕವಾಗಿ ಮಾಡುವುದು.
- ಮಿಥ್ಯಾ ಸ್ನೇಹ ಪ್ರಪಂಚಕ್ಕಿಂತ ನಿಜವಾದ ಸಂಬಂಧಗಳಿಗೆ ಬೆಲೆ ಕೊಡುವುದು.
- ಯೋಗಾಸನ, ಧ್ಯಾನ ನಿಯಮಿತವಾಗಿ ಮಾಡುವುದು.
- ಏಕಾಗ್ರತೆಯನ್ನು ಹೆಚ್ಚಿಸುವಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು.
- ದಿನದ ಸ್ವಲ್ಪ ಸಮಯವಾದರೂ ಯಾವ ಗೋಜಲಿಲ್ಲದೇ ಪ್ರಕೃತಿಯ ಮಡಿಲಲ್ಲಿ ನಿರಾಳವಾಗಿ ಕುಳಿತುಕೊಳ್ಳುವುದು.
- ಇಷ್ಟದ ಹವ್ಯಾಸಕ್ಕಾಗಿ ಸಮಯ ಮೀಸಲಿಡುವುದು.
- ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದನ್ನು ನಿರ್ಧರಿಸುವುದು.
- ಗೊತ್ತುಗುರಿಯಿಲ್ಲದೇ ಸ್ಕ್ರಾಲಿಂಗ್ ಮಾಡುವ ಬದಲು ಒಂದು ನಿರ್ಧಿಷ್ಟ ವಿಷಯದ ಬಗ್ಗೆ ಆಳವಾಗಿ ತಿಳಿದುಕೊಳ್ಳುವುದು.

ಈ ವೇಗದ ಯುಗದಲ್ಲಿ ಪಾಪ್ ಕಾರ್ನ್ ಮಿದುಳು ಸರ್ವೇಸಾಮಾನ್ಯ ಪ್ರಕ್ರಿಯೆಯಾಗಿದೆ. ಕಾರಣಗಳನ್ನು ಪರಿಹಾರೋಪಾಯಗಳನ್ನು ಗುರುತಿಸುವ ಮೂಲಕ ನಿರಮ್ಮಳ ಬದುಕಿನತ್ತ ಹೆಜ್ಜೆಯಿಡಬೇಕಿದೆ.

# ಏನು ತಲೆ ತಿನ್ನುತ್ತಾರೆ ಮಾರಾಯ!

• ಹುಳಿಗೆರೆ ಮಲ್ಲಿಕಾರ್ಜುನ್

ಅದೊಂದು ದಿನ ಸ್ನೇಹಿತನ ಹತ್ತಿರ ಅದೇನೋ ಕಷ್ಟ -ಸುಖ ಮಾತನಾಡುತ್ತಾ ಕುಳಿತಿದ್ದೆ. ಸ್ನೇಹಿತನ ಫೋನ್ ರಿಂಗಾಗತೊಡಗಿತು. ಆತ ಮೊಬೈಲ್ ತೆಗೆದು ನೋಡಿದವನೇ ಮುಖ ಒಂದು ರೀತಿ ಮಾಡಿಕೊಂಡು ಫೋನ್ ಸೈಲೆಂಟ್‌ಗೆ ಹಾಕಿದ. ನಾನು ನೋಡಿಯೂ ನೋಡದಂತೆ ಸುಮ್ಮನಿದ್ದೆ. ಎರಡು ನಿಮಿಷದ ನಂತರ ಪುನಃ ಅದೇ ನಂಬರ್‌ನಿಂದ ಕರೆ ಬಂತು. ತೆಗೆದು ನೋಡಿ ಜೇಬಿಗೆ ಹಾಕಿಕೊಂಡ. ಮತ್ತೆ ಸ್ವಲ್ಪ ಹೊತ್ತು ಮಾತನಾಡುತ್ತಿರುವಾಗ ಮತ್ತೊಂದು ಸಾರಿ ವೈಬ್ರೇಟ್ ಸೌಂಡ್ ಬಂತು. ಪುನಃ ನೋಡಿದವನೆ ಹೊರತು ರಿಸೀವ್ ಮಾಡಲಿಲ್ಲ.

'ಕಾಲ್ ರಿಸೀವ್ ಮಾಡಿ ಏನು ಅಂತ ಕೇಳಪ್ಪ.' ಅಂತಂದೆ. 'ಅಯ್ಯೋ,ಆತ ತಲೆ ತಿನ್ನೋ ಗಿರಾಕಿ ಬಿಡಪ್ಪ. ತುಂಬಾ ಮುಖ್ಯವಾದ ವ್ಯಕ್ತಿ ಏನಲ್ಲ ಬಿಡು' ಉದಾಸೀನದಿಂದ ಹೇಳಿದ. 'ಮುಖ್ಯ ವ್ಯಕ್ತಿನೋ, ಅಮುಖ್ಯ ವ್ಯಕ್ತಿನೋ ಎಂಬುದು ಮುಖ್ಯವಲ್ಲ. ರಿಸೀವ್ ಮಾಡುವುದು ಮುಖ್ಯ' ಎಂದೆ. ಅದಕ್ಕೆ ಆತ ಯಾವ ರೀತಿನೂ ಪ್ರತಿಕ್ರಿಯೆ ನೀಡಲಿಲ್ಲ. ಕೆಲವರೆ ಆ ರೀತಿ ಎಮ್ಮೆ ಮೇಲೆ ಮಳೆ ಬಿದ್ದಂತೆ! ಇದು ಕೇವಲ ಆತನ ವಿಷಯವಲ್ಲ, ಬಹಳಷ್ಟು ಜನರ ಮನಸ್ಥಿತಿ ಇದೇ ಆಗಿದೆ. ಅವಶ್ಯಕತೆ ಇದ್ದಾಗ ಕಾಲ್ ಮೇಲೆ ಕಾಲ್ ಮಾಡುವ ಜನ, ನೀವು ಎಷ್ಟೇ ಕಾಲ್ ಮಾಡಿದರೂ ರಿಸೀವ್ ಮಾಡದ ಜನರ ಬಗ್ಗೆ ಎಚ್ಚರದಿಂದಿರಬೇಕಾಗುತ್ತದೆ.

### ಜಡಿ ಮಳೆ ಬಂದು ಹೋದಂತಾಗಲಿ!

ಎಂತಹ ವ್ಯಕ್ತಿನೇ ಆಗಿರಲಿ, ತಲೆ ತಿನ್ನುವ ವ್ಯಕ್ತಿನೇ ಆಗಿರಲಿ, ಸಾಲ ಕೊಟ್ಟವ-

ಸಾಲ ತೆಗೆದುಕೊಂಡವನೇ ಇರಲಿ, ಅಪರಿಚಿತರೆ ಆಗಿರಲಿ, ಪರಿಚಿತರೇ ಆಗಿರಲಿ, ಜಗಳವಾಡುವ ವ್ಯಕ್ತಿಯಾಗಿರಲಿ, ದುಶ್ಮನ್ ಆಗಿರಲಿ, ಏನು ಬೇಕಾದರೂ ಸರಿ ಮೊದಲು ಫೋನ್ ರಿಸೀವ್ ಮಾಡಿ. ಬೈಯುವರು ಬೈದು ಬಿಡಲಿ. ಎಲ್ಲಿಯ ತನಕ ಬೈಯುತ್ತಾರೆ, ಬಯ್ಯುವುದಕ್ಕೂ ಒಂದು ಕೊನೆ ಅಂತು ಇರುತ್ತಲ್ವಾ. ಜಡಿ ಮಳೆ ಬಂದು ಹೋದಂತಾಗಲಿ!.

ರಿಸೀವ್ ಮಾಡದೆ ಕೆಟ್ಟ ವ್ಯಕ್ತಿಯಾಗುವುದಕ್ಕಿಂತ ರಿಸೀವ್ ಮಾಡಿ ನಾಲ್ಕೇ ನಾಲ್ಕು ಮಾತನಾಡಿ, ಪುನಃ ಮಾಡುತ್ತೇನೆ ಎಂದು ಹೇಳಿ. ರಿಸೀವ್ ಮಾಡಲಿಲ್ಲ ಎಂದರೆ ನಾವು ಮತ್ತೊಬ್ಬರಿಗೆ ಗೌರವ ಕೊಡುವುದು ಕಲಿತಿಲ್ಲ ಎಂದು ತಿಳಿಸುತ್ತದೆ. ನಮ್ಮ ವ್ಯಕ್ತಿತ್ವಕ್ಕೆ ಒಂದು ಕಪ್ಪು ಚುಕ್ಕೆ ಆಗುತ್ತೆ. ನಂಬಿಕೆಗೆ ಅರ್ಹವಲ್ಲದವರು ಎಂದಾಗುತ್ತದೆ.

ಬೆಲೆ ಕೊಡುವುದನ್ನು ಕಲಿಯಬೇಕು

ಅಬ್ರಾಹಂ ಲಿಂಕನ್‌ರು ಅಮೆರಿಕದ ಅಧ್ಯಕ್ಷರಾಗಿದ್ದು, ಜನಪ್ರಿಯತೆಯ ತುತ್ತ -ತುದಿಯಲ್ಲಿ ಇದ್ದ ಸಮಯ. ಸಭೆ ಮುಗಿಸಿಕೊಂಡು ಕಚೇರಿಗೆ ತೆರಳುವ ಮಾರ್ಗ ಮಧ್ಯದಲ್ಲಿ ಯಾರೋ ಭಿಕ್ಷುಕನಂತಿದ್ದವ, ಇವರ ಕಾರನ್ನು ನೋಡಿದ ತಕ್ಷಣ ಎರಡೂ ಕೈಮುಗಿದು ನಮಸ್ತೆ ಹೇಳಿದ. ತತ್‌ಕ್ಷಣ ಲಿಂಕನ್ ಡ್ರೈವರ್‌ಗೆ ಕಾರನ್ನು ಹಿಂದಕ್ಕೆ ತೆಗೆದುಕೊಳ್ಳಲು ಹೇಳಿ, ಆ ಭಿಕ್ಷುಕನ ಹತ್ತಿರಕ್ಕೆ ಹೋಗಿ, ಎರಡು ಕೈಗಳನ್ನು ಮುಗಿದು ನಮಸ್ಕಾರ ಹೇಳಿದರು. ನಂತರ ಮುಂದಕ್ಕೆ ಹೋಗಲು ಹೇಳಿದರು.

ಎಲ್ಲರಿಗೂ ಪರಮಾಶ್ಚರ್ಯ! ಕಛೇರಿಗೆ ಬಂದ ಕೂಡಲೇ ಪಿ ಎ ವಿಷಯ ಪ್ರಸ್ತಾಪಿಸುತ್ತಾ, 'ಸರ್ ತಾವು ಅಧ್ಯಕ್ಷರಾಗಿ ಹಾಗೆ ಮಾಡಿದ್ದು ಸರಿ ಕಾಣಲಿಲ್ಲ. ಅದೂ ಭಿಕ್ಷುಕನಿಗೆ!' ಎಂದು ಹೇಳಿದ. 'ನಾನು ಮಾಡಿದ್ದು ಸರಿ ಇದೆ. ನೀವು ತಿಳಿದುಕೊಂಡು ರೀತಿ ಸರಿಯಿಲ್ಲ . ಅಧ್ಯಕ್ಷರಾದ ಮಾತ್ರಕ್ಕೆ ಬರೀ ಶ್ರೀಮಂತರ ಜತೆ ಒಡನಾಟವಿರಬೇಕೆಂದು ಇಲ್ಲ. ನಾನು ಅಧ್ಯಕ್ಷರಾಗಿರುವುದು ಬಡವ, ಶ್ರೀಮಂತ, ಭಿಕ್ಷುಕ, ಹೀಗೆ ಎಲ್ಲರಿಗೂ. ಪ್ರತಿಯೊಬ್ಬರಿಗೂ ಸಮಾನ ಗೌರವ ಕೊಡಬೇಕು. ನಕ್ಕವರಿಗೆ ನಗಬೇಕು. ನಮಸ್ತೆ ಹೇಳಿದವರಿಗೆ ನಮಸ್ತೆ ಹೇಳಬೇಕು. ಕೃತಜ್ಞತೆ ತೋರಿದವರಿಗೆ ಕೃತಜ್ಞರಾಗಿರಬೇಕು. ಪದವಿ ಶ್ರೀಮಂತಿಕೆಗಿಂತ ಮಾನವೀಯತೆ ಬಹಳ ದೊಡ್ಡದು. ಯಾರೇ ಆಗಿರಲಿ ಮೊದಲು ಬೆಲೆ ಕೊಡುವುದನ್ನು ಕಲಿತಿರಬೇಕು, ಮಾತುಗಳು ಕೃತಿಗಳಾಗಬೇಕು.' ಎಂದರು. ಪಿ ಎ ಮರು ಮಾತನಾಡಲಿಲ್ಲ.

ದೊಡ್ಡವರಾಗಬೇಕೆಂದರೆ ಮೊದಲು ಸಣ್ಣ ಗುಣ ಬಿಡಬೇಕು. ಮಾನವೀಯತೆ, ಸ್ಪಂದಿಸುವ ಗುಣ, ಸಹಕಾರ ಗುಣ, ಕ್ಷಮಿಸುವ ಗುಣ, ಪ್ರೀತಿಸುವ ಗುಣಗಳು ಇರಬೇಕು. ನಗುತ್ತಲೆ ಎಲ್ಲರಿಗೂ ಉತ್ತರಿಸೋಣ.

## ಸಣ್ಣದಲ್ಲದ ಕತೆಗಳು

• ಅಶೋಕ ವಿ ಬಳ್ಳಾ ಸೂಳೇಬಾವಿ

### ರೈಟ್ – ಲೆಫ್ಟ್

ಅದೊಂದು ವಾಟ್ಸಾಪ್ ಗ್ರೂಪ್. ಅಲ್ಲಿ ಬರುವ ಅನಗತ್ಯ ಮೆಸೇಜುಗಳ ಕಿರಿಕಿರಿಯಿಂದ ಬಹುತೇಕರು ಬೇಸತ್ತಿದ್ದರು. ಅವರೆಲ್ಲ ಅಲ್ಲಿಂದ ರೈಟ್ ಹೇಳಬೇಕಾಗಿತ್ತು; ಲೆಫ್ಟ್ ಆದರು.

★★★

### ಸ್ವಾವಲಂಬಿ ಬದುಕು

ಉಚಿತ ಸೌಲಭ್ಯ ಎಷ್ಟಿದ್ದರೇನು? ಮೈಯಲ್ಲಿ ಶಕ್ತಿ ಇರುವವರೆಗೂ ಕೈಲಾದಷ್ಟು ದುಡಿಯೋಣ, ಮುಲಾಜಿನ ಬದುಕು ಬೇಡ ಎಂದು ವೃದ್ಧನೊಬ್ಬ ಆ ಶಾಲೆಯ ಕಂಪೌಂಡಿನಾಚೆ ಮರದ ನೆರಳಿಗೆ ಪೆಪ್ಪರಮೆಂಟು, ಚಕ್ಕುಲಿ, ಕೋಡುಬಳೆ, ನಿಪ್ಪಟ್ಟು, ಜಾಮೂನು ಮಾರುತ್ತಿದ್ದ. ಪುಟ್ಟ ಮಕ್ಕಳು ಅಜ್ಜನ ಹತ್ತಿರ ಬಂದು ತಮಗೆ ಬೇಕಾದ್ದನ್ನು ಮುಗಿಬಿದ್ದು ಖರೀದಿಸುತ್ತಿದ್ದರು. ಮಕ್ಕಳು ಬೇಸಿಗೆ ರಜೆ ಮುಗಿಸಿ ಮರಳುವಷ್ಟರಲ್ಲಿ ಆ ಜಾಗಕ್ಕೆ ಅಜ್ಜಿ ಬಂದಿದ್ದಳು. ಅಜ್ಜ ಮುಗಿಸಿದ ಸ್ವಾವಲಂಬಿ ಬದುಕಿನ ವ್ಯಾಪಾರವನ್ನು ಅಜ್ಜಿ ಮುಂದುವರಿಸಿದ್ದಳು.

★★★

### ಟ್ಯಾಗರ್

ಆತ ಪ್ರತಿ ಬಾರಿಯೂ ತನ್ನದೊಂದು ಬರೆಹ ಹಂಚಿಕೊಳ್ಳಲು ನೂರಾರು ಸ್ನೇಹಿತರನ್ನು ಟ್ಯಾಗ್ ಮಾಡುತ್ತಿದ್ದ. ಆ ಪೋಸ್ಟ್ ಸಾವಿರಾರು ಮಂದಿಗೆ ತಲುಪುತ್ತಿತ್ತು. ಆ ಬರಹಗಳನ್ನು ಹಂಚಿ ಎಲ್ಲರಿಂದ ಲೇಖಕ ಎನಿಸಿಕೊಳ್ಳಬೇಕೆಂದವನು ಟ್ಯಾಗರ್ ಎಂದೇ ಹೆಸರಾದ. ಕೆಲ ಸ್ನೇಹಿತರು ನೇರವಾಗಿ ಹಾಗೆ ಹೇಳಲಾಗದೆ ಟ್ಯಾಗೋರ್ ಎನ್ನುತ್ತಿದ್ದರು. ಆಗ ಅವನು ಖುಷಿಯಿಂದ ಕಾಲರ್ ಹಾರಿಸುತ್ತಿದ್ದ.

★★★

### ಕಷ್ಟ

ಕೂಲಿ ಕೆಲಸಕ್ಕೆ ಕರೆದರೆ ಪ್ರಶಾಂತ 'ನನಗಾಗಲ್ಲಪ್ಪ' ಎಂದು ಮೊಬೈಲ್ ಗೀಚುತ್ತಿದ್ದ. ಕೋಪಿಸಿಕೊಂಡ ಭರತ ಆ ಏರಿಯಾದಲ್ಲಿ ಸಿಗುತ್ತಿದ್ದ ಉಚಿತ ಇಂಟರ್ ನೆಟ್ ಸೌಲಭ್ಯವನ್ನು ಹಳಿದ. ಅದಕ್ಕೆ ಪ್ರಶಾಂತ, 'ಕಷ್ಟಪಡದೇ, ಯಾವುದೂ ದಕ್ಕಲ್ಲ, ವೈಫೈ, ಹಾಟ್‌ಸ್ಪಾಟ್ ಪಾಸ್ವರ್ಡ್ ಪತ್ತೆಹಚ್ಚೋಕೆ ಎಷ್ಟು ಕಷ್ಟಪಟ್ಟೀನಿ ಅಂತ ನನಗೇ ಗೊತ್ತು' ಎಂದು ಗೊಣಗಿದ.

# ಮಳೆ ಮಾಸದ ನೆನಪು

• ಗೀತಾ ಹೆಗಡೆ

'ಹಾಡು ಹಳೆಯದಾದರೇನು ಭಾವ ನವನವೀನ', ಜೀವಂತಿಕೆಗೆ ಕಳೆಕಟ್ಟುವ ಕಾವ್ಯಸಾಲು. ಕಾಲಚಕ್ರ ಉರುಳುತ್ತದೆ. ಋತುಗಳು ಪುನರಾವರ್ತಿಸುತ್ತದೆ. ಅದೇ ಮುಂಗಾರು, ಅದೇ ಮಳೆ, ಅದೇ ಮಳೆ ಹನಿಗಳು, ಅದೇ ರಾಗ, ಮತ್ತದೇ...ಹಾಡಾದರೂ, ಮಳೆಯ ಹಳೆ ದಿನಗಳ ನೆನಪಿನ ಸವಿ ಭಾವಕ್ಕೆ ಜೀವ ತುಂಬಿ ನವನವೀನವಾಗಿಸುವುದು ಮತ್ತದೇ ಮುಂಗಾರು!. ಬೆಚ್ಚನೆಯ ಭಾವಕ್ಕೆ ಹಚ್ಚನೆಯ ಸುಧೆಯಾಗಿ ಸ್ಫೂರ್ತಿಯಾಗುವುದು ಮತ್ತದೇ ಮಳೆ, ಅದೇ ಮಳೆಹನಿಗಳು!.

'ಸವಿ ಸವಿ ನೆನಪು ಸಾವಿರ ನೆನಪು...ಸಾವಿರ ಕಾಲಕು ಸವೆಯದ ನೆನಪು..' ವರ್ಷ ಋತುವಿನ ಮೊದಲ ಮಳೆಗೆ ಅರಳುವ ಕುಸುಮಗಳು ಸಾವಿರಾರು. ಎದೆಯಾಳದಲ್ಲಿ ಅವಿತಿಟ್ಟುಕೊಂಡು, ಮೊದಲ ಹನಿ ಇಳೆ ಸೋಕುತ್ತಿದ್ದಂತೆ ಪುಟಿದೇಳುವ ಮಣ್ಣಿನ ಪರಿಮಳದಂತೆ ಚಿಗುರೊಡೆಯುವ ಮಳೆಯ ನೆನಪುಗಳು ನೂರಾರು. ನೆನಪುಗಳ ನವಿರಾದ ಪಕಳೆಗಳು ಸುಗಂಧ ಪಸರಿಸಿ ಮೂಡಿಸುವ ಸುಮಧುರ ಭಾವ, ಚಿಮ್ಮಿಸುವ ಚೇತನ ಚಿರನೂತನ.

### ತವರೂರಿನ ಸವೆಯದ ಸವಿ

'ನೆನಪುಗಳ ಮಾತು ಮಧುರ...', ಪ್ರತಿ ವರ್ಷವೂ ಮುಂಗಾರು ಮುಂದಾದಾಗ ಮುನ್ನೆಲೆಯಾಗಿ ನೆನಪುಗಳ ಸವಾರಿ ಹುಟ್ಟೂರಿನ ಕದ ತಟ್ಟಿ ಸವಿ ನೆನಪಿನ ಸುರಿಮಳೆಯಲ್ಲಿ ಮುಳುಗೇಳುವ ಪುಳಕ ಅತಿ ಮಧುರ. ಮಳೆಗಾಲದ ಅನುಭವವೇ ಅಂಥಾದ್ದು!. ಅದರಲ್ಲೂ ಹನಿ ಕಡಿಯದೆ ಎಡೆಬಿಡದೆ ಸುರಿಯುವ 'ಮಳೆನಾಡು'. ಮಲೆನಾಡಿನ ಮಳೆ ಅದೊಂದು ಅಚ್ಚರಿಯ ಅಚ್ಚಳಿಯದ ನೆನಪು. ನೆನಪಿನ ಸುರುಳಿಯಿಂದ ಗರಿ ಬಿಚ್ಚಿ ಲಹರಿಯಾಗುವುದು ತವರೂರಿನ ಸವೆಯದ ಸವಿ ನೆನಪಿನ ನನ್ನ ಕಾಲೇಜು ದಿನಗಳು. ಮಲೆನಾಡಿನ ಬೆಟ್ಟ-ಗುಡ್ಡಗಳ ನಡುವೆ ಕಾಲೇಜು. ಊರ ಹೊರವಲಯದಲ್ಲಿದ್ದ ನಮ್ಮ ಕಾಲೇಜಿಗೆ ಪ್ರತಿನಿತ್ಯ ಆರೇಳು ಕಿಮೀನಷ್ಟು ಕ್ರಮಿಸಬೇಕಾಗಿತ್ತು. ಕಾಡಿನ ದಾರಿ, ಸಾರಿಗೆ ಸೌಕರ್ಯದ ವ್ಯವಸ್ಥೆ ಸುಲಲಿತವಲ್ಲದ ಅಂದಿನ ದಿನಗಳಲ್ಲಿ ನಮಗೆ ಕಾಲ್ನಡಿಗೆಯೇ ಪರ್ಯಾಯ ವ್ಯವಸ್ಥೆಯಾಗಿತ್ತು.

### ಮನಕೆ ಮುದ ನೀಡುತ್ತಿದ್ದ ನೋಟ

ಕಾಲೇಜಿನ ದಾರಿಯ ಇಕ್ಕೆಲೆಗಳಲ್ಲೂ ದಟ್ಟವಾಗಿ ಹಬ್ಬಿದ್ದ ಗಿಡ-ಮರ-ಬಳ್ಳಿಗಳು. ಚಳಿ, ಬೇಸಿಗೆಗಿಂತ ಜೂನ್ ಇಂದ ಸೆಪ್ಟೆಂಬರ್‌ವರೆಗಿನ ಮಳೆಗಾಲದ ಮಳೆಯ ಅನುಭವ ವರ್ಣನಾತೀತ. ವರುಣನ ಸಿಂಚನವಾಗುತ್ತಿದ್ದಂತೆ ಗಿಡಮರಗಳೆಲ್ಲಾ ಹಚ್ಚ ಹಸಿರಿನಿಂದ ಮೈದುಂಬಿಕೊಂಡು ನವ ಕಾಂತಿಯಿಂದ ನಳನಳಿಸುತ್ತಿತ್ತು. ವೈವಿಧ್ಯಮಯ, ವರ್ಣರಂಜಿತ ಹೂಗಳಿಂದ ಅಲಂಕೃತವಾಗಿ ಷೋಡಶಿಯಂತೆ ಕಂಗೊಳಿಸುತ್ತಿತ್ತು. ಬೆಂಬಿಡದೆ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಬೆಳಿಗ್ಗೆಯ ನಮ್ಮ ನಿತ್ಯದ ನಡಿಗೆ ಕಾಲೇಜಿನೆಡೆಗೆ ತಪ್ಪದೆ ಸಾಗಿರುತ್ತಿತ್ತು. ಮಳೆಯಲ್ಲಿ ನಲಿದು ನಡೆಯುವ ನಡಿಗೆಗೆ ಸುತ್ತಲಿನ ಪ್ರಕೃತಿಯ ಸಾಥ್. ನಿಸರ್ಗದ ಸೊಬಗನ್ನು ಸವಿಯುತ್ತಾ ಗೆಳತಿಯರೊಟ್ಟಿಗೆ ನಗು-ತಮಾಷೆ-ಹರಟೆಯಲ್ಲಿ ಒಂದಾಗಿ ಕಾಲೇಜಿನ ಹಾದಿಯಲ್ಲಿ ಸಾಗುತ್ತಿದ್ದರೆ ಎಂಥಹ ಮಳೆಯ ಹೊಡೆತವೂ ನಮ್ಮ ಗಮನಕ್ಕೆ ಬರುತ್ತಿರಲಿಲ್ಲ. ಸಹಪಾಠಿಗಳ ನಮ್ಮ

ಸ್ನೇಹ ವೃಂದಕ್ಕೆ ಸುತ್ತಲಿನ ಹಕ್ಕಿ ಪಕ್ಷಿಗಳ ಸೊಂಪಾದ ನಿಸರ್ಗ ಗಾನ ಸಂಭ್ರಮವನ್ನು ಸ್ವರ್ಗಕ್ಕೇರಿಸುತ್ತಿತ್ತು. ಕೊಡೆಯೊಂದು ನೆಪವಷ್ಟೇ. ಮಳೆಯಲ್ಲಿ ತೊಯ್ದು ಒದ್ದೆ ಮುದ್ದೆಯಾಗಿ ಕಾಲೇಜಿನ ಕ್ಲಾಸ್ ಹೊಕ್ಕು ಕುಳಿತರೆ ಒಳಗಿನ ಪಠ್ಯಪಾಠಕ್ಕಿಂತ ಕಿಟಿಕಿಯಾಚೆಯ ಪರಿಸರ ನೋಟವೇ ಮನಸ್ಸಿಗೆ ಹೆಚ್ಚು ಮುದ ನೀಡುತ್ತಿತ್ತು!.

ಮಳೆಗಾಲದಲ್ಲಿ ಸದಾ ಮಂಜಿನಿಂದ ಕೂಡಿರುತ್ತಿದ್ದ ವಾತಾವರಣ, ಭೋರೆಂದು ಸುರಿಯುತ್ತಿದ್ದ ಮಳೆ, ನಿಸರ್ಗದ ರಮ್ಯ ರಮಣೀಯತೆ, ನೃತ್ಯ ನವಿಲಿನ ಶೃಂಗಾರ ಕಾವ್ಯ, ಕೋಗಿಲೆ ಕಾಜಾಣಗಳ ಕುಹೂ ಕುಹೂವಿನೊಂದಿಗೆ ಕನಸುಗಳ ಕಾವ್ಯ ಕಟ್ಟುವ ಹದಿಹರೆಯದ ತಳಿರು ಅನುಭವದ, ಆನಂದದ ಪರವಶತೆಯಲ್ಲಿ ಸಂಜೆ ಮನೆ ತಲುಪಿ ಅಮ್ಮನ ಬೆಚ್ಚಗಿನ ಪ್ರೀತಿಯಲ್ಲಿ ಬಿಸಿಬಿಸಿ ಕಾಫಿ ಹೀರುತ್ತಿದ್ದ ಅಂದಿನ ದಿನಗಳು ಅಮೋಘ. ಅದೇ ಮೇಘ, ಅದೇ ಮುಂಗಾರು, ಮತ್ತದೇ ಮಳೆ, ಅದೇ ಮಳೆ ಹನಿಗಳು. ಮನ ತಣಿಸುವ ಮಳೆ ನೆನಪಿನ ಸವಿ ಭಾವ ಹೊಚ್ಚ ಹೊಸದು!. 'ಮುಂಗಾರು ಮಳೆಯೇ, ಏನು ನಿನ್ನ ಹನಿಗಳ ಲೀಲೆ..' ನೆನಪಿನಲೆಗಳ ಸುಮಧುರ ಭಾವಕ್ಕೆ ಮಧುರವಾದ ಹಾಡೊಂದು ಜತೆಯಾದರೆ ಭಾವ ನಾವೀನ್ಯಕ್ಕೆ ಮತ್ತಷ್ಟು ಮೆರುಗು, ಬದುಕು ಇನ್ನಷ್ಟು ಸೊಗಸು.